ಶ್ರೀ ಎಚ್: ಸಿ. ದಾಸಪ್ಪನವರು.—ನೋಡಿಲ್ಲ.

ಶ್ರೀ ಎಚ್. ಸಿ. ದಾಸಪ್ಪನವರು.—ಅಲ್ಲ ಆ ರೀತಿ ಇದ್ದರೆ ಮೈಸೂರು ಸರ್ವಿಸ್ ರೆಗ್ಯುಲೇಷನ್ನನ್ನೂ ಅದೇ ರೀತಿ ಮಾರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿ. ದಾಸಪ್ಪನವರು.—ಅದು ಊಹಾ ಪ್ರಶ್ನೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಮಾಡುವುದರಲ್ಲಿ ತೊಂದರೆಯೇನು ?

ಶ್ರೀ ಎಚ್. ಸಿ. ದಾಸಪ್ಪನವರು.—ಅದರಲ್ಲಿ ಒಂದು ತತ್ವವಿದೆ. ಅವರಿಗೆ ನಮ್ಮ ಸಂಸ್ಥಾನದಿಂದ ಕೊಡತಕ್ಕ ಪೆನ್ಷನ್ ಅವರು ನಮ್ಮ ಸಂಸ್ಥಾನಕ್ಕೆ ಸಲ್ಲಿಸಿರುವ ಸೇವೆಗೆ ಪ್ರತಿಫಲವಾದ್ದರಿಂದ ನಾವು ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್ ರಂಗರಾಮಯ್ಯನವರು.—ನಮ್ಮ ನೆರೆಹೊರೆ ಪ್ರಾಂತ್ಯದಲ್ಲಿ ಆ ರೀತಿಯಾಗಿ ಅವರು ಪರಿಶೀಲಿಸಿಲ್ಲವೆಂದು ತಾವು ತಿಳಿದುಕೊಂಡಿದ್ದೀರಾ ?

ಶ್ರೀ ಎಚ್. ಸಿ ದಾಸಪ್ಪನವರು.—ಅದು ಬೇರೆ ಪ್ರಶ್ನೆ. ಆ ವಿಚಾರ ನನಗೆ ಗೊತ್ತಿಲ್ಲ.

Sri A. BHEEMAPPA NAIK (Chitaldrug District—General).—Is there any rule in the Pension Act that a pension-holder should certify before he draws pension whether he is employed or not in any other Government Service ?

Sri H. C. DASAPPA.—Notice.

Sri A BHEEMAPPA NAIK.—In the Service Regulations is there no rule in respect of this matter ?

Sri H. C. DASAPPA.—I said notice.

Sri A. BHEEMAPPA NAIK.—Will the Hon'ble Minister consider whether it would not be a desirable to find out whether a pension-holder is employed elsewhere ?

Sri H. C. DASAPPA.—Certainly.

Janab MOHAMED VALIULLA (Kolar—Muslim).—If people in Mysore drawing pension are appointed again, their pension would be deducted, is it not ?

Sri H. C. DASAPPA.—It depends upon the terms of employment in each case and certainly the pension that the officer draws will be taken into consideration when fixing the terms.

Janab MOHAMED VALIULLA.—If they serve here you deduct the pension. Why not the same thing be done in the case of officers who are employed elsewhere ?

Sri H. C DASAPPA.—If they go outside we cannot deny the pension they have earned here. Even here, we cannot deny the pension they have earned.

ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ)—ಪೆನ್ಷನ್ ತೆಗೆದುಕೊಳ್ಳುವುದಕ್ಕೆ ಮುಂಚೆ ಬೇರೆ ಯಾವುದಾದರೂ ಸರ್ಕಾರಿ ಸರ್ವಿಸ್‌ನಲ್ಲಿ ಇದ್ದರೋ, ಇಲ್ಲವೋ ಎಂಬುದನ್ನು ಸರ್ಟಿಫೈ ಮಾಡಬೇಕೆಂದು ನಿಯಮ ಇದೆಯೇ ಎಂದು ಕೇಳಿದ್ದಕ್ಕೆ ಉತ್ತರವಾಗಿ, ನೋಟೀಸ್ ಎಂದು ಹೇಳಿದರು. Shall I take it that the Hon'ble Finance Minister does not know the rules ?

Sri H. C. DASAPPA.—I think a question like that cannot be answered.

Sri T. SUBRAMANYA.—We expect the Finance Minister to be up-to-date in his knowledge of rules.

Mr. SPEAKER.—That is not a question.

Sri H. C. DASAPPA.—Cannot imagine all sorts of questions to be put and answer them here.

Mr. SPEAKER.—Question time is over.

THE BUDGET FOR 1950-51.

Second Stage Voting on Demands for Grants.

ಅಧ್ಯಕ್ಷರು (ಶ್ರೀ ವಿ. ವೆಂಕಟಪ್ಪನವರು).—ಖೋತಾ ನಿರ್ಣಯಗಳನ್ನು ತೆಗೆದುಕೊಳ್ಳುವ ಕ್ರಮದಲ್ಲಿ ಎರಡು ಪಾರ್ಟಿಗಳವರೂ ಒಂದು ತೀರ್ಮಾನಕ್ಕೆ ಬಂದಿದಾರೆ. ಅವುಗಳನ್ನು ಈ ಕೆಳ ಕಂಡ ಕ್ರಮದಲ್ಲಿ ತೆಗೆದುಕೊಳ್ಳಬಹುದು. ಖೋತಾ ನಿರ್ಣಯಗಳಸಂಖ್ಯೆ.—4, 7, 10, 22, 25, 32, 34, 35, 36, 37, 38, 39, 41, 44, 48, 65, ಮತ್ತು 66, ಇವತ್ತು ಅಂದರೆ, ಜನರಲ್ ಅಡ್ಮಿನಿಸ್ಟ್ರೇಷನ್ ವರೆಗೂ ಮುಗಿಸಬೇಕೆಂದು ಇದೆ. ಒಂದೊಂದು ಖೋತಾ ನಿರ್ಣಯಕ್ಕೆ ಅರ್ಧ ಘಂಟೆಯಾದರೆ ಸಾಕೆಂದು ತೋರುತ್ತದೆ. ಸದಸ್ಯರು ಎಷ್ಟೆಷ್ಟು ಕಾಲ ತೆಗೆದುಕೊಳ್ಳಬಹುದೆಂಬುದನ್ನು ತಾವೇ ತೀರ್ಮಾನಮಾಡಬೇಕು. ಬಹುಶಃ ನಿರ್ಣಯದ ಸೂಚಕರಿಗೆ 5 ನಿಮಿಷ ಕೊಟ್ಟರೆ ಸಾಕಾಗುತ್ತದೆಂದು ತೋರುತ್ತದೆ. ಒಂದು ಘಂಟೆಯೊಳಗೆ ಯಾವ ಡಿಮ್ಯಾಂಡುಗಳು ಮುಗಿಯುವುದಿಲ್ಲವೋ ಅವನ್ನು ಗಿಲಟಿನ್ನಿಗೆ ಹಾಕಬೇಕಾಗುತ್ತೆ. ಆದ್ದರಿಂದ ಆದಷ್ಟು ಜಾಗ್ರತೆ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎಂ. ಎನ್. ಜೋಯಿಸರು (ಮೈಸೂರು ಜಿಲ್ಲೆ.)—ಒಂದು ಘಂಟೆಯೊಳಗೆ ಯಾವುದು ಮುಗಿಯುತ್ತದೆಯೋ ಅದನ್ನು ಗಿಲಟಿನ್ನಿಗೆ ಹಾಕಬೇಕೆಂದು ಹೇಳಿದಿರಿ. ಇವತ್ತು ತೆಗೆದುಕೊಳ್ಳುವುದಕ್ಕೆ ಇವತ್ತೇ ಗಿಲಟಿನ್ ಹಾಕುತ್ತೀರಾ ?

ಜನಾಬ್ ಮಹಮದ್‌ವಲಿಯುಲ್ಲಾ ರವರು (ಕೋಲಾರ—ಮುಸ್ಲಿಂ).—ಆ ರೀತಿಮಾಡುವುದಕ್ಕೆ ರೂಲ್ಸ್ ಇಲ್ಲ.

ಅಧ್ಯಕ್ಷರು.—That is an understanding 12. ಜನರಲ್ ಅಡ್ಮಿನಿಸ್ಟ್ರೇಷನ್‌ವರೆಗೂ ಮುಗಿಸಬೇಕೆಂದು ತೀರ್ಮಾನಿಸಿದೆ. ಆದರೆ ಎಷ್ಟು ಆಗುತ್ತದೆಯೋ

ಅಷ್ಟು ಮಾಡುವುದಕ್ಕೆ ಪ್ರಯತ್ನ ಮಾಡೋಣ. ಎಲ್ಲಾ ಡಿಮ್ಯಾಂಡುಗಳನ್ನೂ ತೆಗೆದುಕೊಳ್ಳಲು ಅವಕಾಶವಾಗಬೇಕೆಂಬ ಉದ್ದೇಶದಿಂದ ಆ ರೀತಿ ಒಂದು ತೀರ್ಮಾನಕ್ಕೆ ಬರುವ ಪದ್ಧತಿ ಇದೆ. ಆ ರೀತಿ ಮಾಡುವುದು ಅನುಕೂಲ.

ಜನಾಬ್ ಮಾಹಮುದ್ ವಲಿಯುಲ್ಲಾರವರು.—ರೂಲ್ಸ್‌ನಲ್ಲಿ ಎಲ್ಲಾ ಒಂದೇ ಒಂದು ದಿನ ಹಾಕಬೇಕೆಂದು ಇದೆ.

ಅಧ್ಯಕ್ಷರು.—ಆ ರೀತಿ ಏನೂ ಇಲ್ಲ. ಸದಸ್ಯರು ಯಾವ ತೀರ್ಮಾನಕ್ಕೆ ಬಂದರೆ ಅದರಂತೆ ಮಾಡಬಹುದು. ಆ ಪದ್ಧತಿಯನ್ನು ಇತರ ಕಡೆಗಳಲ್ಲಿಯೂ ಆಚರಣೆಗೆ ತಂದಿದ್ದಾರೆ.

Sri A. BHEEMAPPA NAIK (Chitaldrug District—General).—Mr. Speaker, I submit another thing. Instead of applying guillotine, we may go as far as possible with these demands and the remaining demands may be given up. Tomorrow the next one, *i.e.*, General Administration may be taken up.

Sri K. CHENGALARAYA REDDY (Leader of the House).—Demands cannot be given up (Laughter).

Mr. SPEAKER.—These demands will have to be voted.

Sri A. BHEEMAPPA NAIK.—This is just to get over the rules difficulty.

Mr. SPEAKER.—If the Hon'ble Members come to some understanding, it is allright; there is no rules difficulty.

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ನನ್ನ ಸಲಹೆ ಏನೆಂದರೆ, ಈಗ ತಾವು ಹೇಳಿದ ರೀತಿಯಲ್ಲಿ ಮಾಡುವುದಾದರೆ ನಾಳೆ, ನಾಡಿದ್ದು, ಆಚೆನಾಡಿದ್ದು ಯಾವಯಾವುದನ್ನು ತೆಗೆದುಕೊಳ್ಳಲಾಗುತ್ತದೆ ಎಂಬುದನ್ನು ಮೊದಲೇ ನಿರ್ದಿಷ್ಟವಾಗಿ ತಿಳಿಸಿದರೆ ಒಳ್ಳೆಯದು.

ಅಧ್ಯಕ್ಷರು.—ಪಾರ್ಟಿಗಳವರು ಅದನ್ನು ತಿಳಿಸಬೇಕು. ನಾನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಪಾರ್ಟಿಯವರು ಒಪ್ಪಿಕೊಳ್ಳುತ್ತಾರೆಯೇ ಎಂಬುದನ್ನು ತಿಳಿದುಕೊಳ್ಳಬೇಕು.

Mr. SPEAKER.—There are only two parties and they have agreed.

Sri M. MADIAH.—I want to know whether the suggestion made by the Chair has been accepted by the House.

Mr. SPEAKER. - They have agreed and that has been made known to me.

Janab SYED ABDUR RAHMAN (Chikmagalur *cum* Shimoga—Muslim).—What about Hon'ble Members who are not attached to this or that party?

Mr. SPEAKER.—If any Hon'ble Member who does not belong to any party insists upon moving his cut motions they will be taken up.

The cut motions selected for discussion today are the following:—

4, 7, 10, 22, 25, 32, 34, 35, 36, 37, 38, 39, 41, 44, 48, 65 and 66.

Now the Hon'ble the Minister for Revenue will move the Demand under Land Revenue.

Demand No. 1—1. Land Revenue.

Sri H. SIDDAIYA (Minister for Revenue and Excise)—Sir, on the recommendation of His Highness the Maharaja, I beg to move:

> "That a sum not exceeding Rs. 48.82,000 be granted to the Government to defray the charges which will come in course of payment during the year ending 31st day of March 1951 in respect of 'Land Revenue'."

Mr. SPEAKER.—Motion moved:

> "That a sum not exceeding Rs 48,82,000 be granted to the Government to defray the charges which will come in course of payment during the year ending 31st day of March 1951 in respect of 'Land Revenue'."

Janab SYED ABDUR RAHMAN (Chikmagalur *cum* Shimoga—Muslim).—There is a circular with regard to the arrangement of cut motions. They are always arranged according to heads and sub-heads. Those which come under sub-heads are arranged according to priority and according to the descending order of amount.........

Mr. SPEAKER.—What is the circular that the Hon ble Member is referring to? That does not apply to this House.

Janab J. Mahomed Imam may move his cut motion.

Exchange of Enclaved villages between the states of Mysore and Madras.

Mushir-ul-Mulk J. MAHOMED IMAM (Chitaldrug *cum* Tumkur—Muslim).—Sir, I beg to move:—

> "That the demand under the head '1. Land Revenue' for Rs. 48.82,000 be reduced by Re. 1 (to raise a debate on the exchange of enclaved villages between the States of Mysore and Madras)."

ಸ್ವಾಮಿ, ಮೈಸೂರು ಸರ್ಕಾರದವರಿಗೂ ಮತ್ತು ಮದ್ರಾಸ್ ಸರ್ಕಾರದವರಿಗೂ ಒಂದು ರೀತಿಯ ಚರ್ಚೆ ನಡೆದು, ಅದರ ಪರಿಣಾಮವಾಗಿ ಮೈಸೂರಿಗೆ ಸೇರಿದ ಹದಿನೈದು ಗ್ರಾಮಗಳನ್ನು ಮದ್ರಾಸ್ ಸರ್ಕಾರದವರಿಗೆ ಬಿಟ್ಟುಕೊಡಬೇಕೆಂದೂ, ಅವುಗಳಿಗೆ ಪ್ರತಿಯಾಗಿ

ಮದ್ರಾಸ್ ಸರ್ಕಾರಕ್ಕೆ ಸೇರಿರುವ 67 ಗ್ರಾಮಗಳನ್ನು ಮೈಸೂರು ಸರ್ಕಾರದವರು ತೆಗೆದುಕೊಳ್ಳುವುದಾಗಿಯೂ ಒಂದು ಪ್ರಕಟಣೆ ಹೊರಟಿವೆ. ಇದು ಆಗಲೇ ಆ ರೀತಿ ಜಾರಿಗೆ ಬಂದು ಹಾಲಿ ಅದರ ಪ್ರಕಾರ ನಡೆಯುತ್ತಿರುವಂತೆ ಗೊತ್ತಾಗಿದೆ. ಅಂತೂ ಈಗಾಗಲೇ ನಮ್ಮ ಸಂಸ್ಥಾನಕ್ಕೆ ಸೇರಿರುವ ಗ್ರಾಮಗಳು ಕೆಲವನ್ನು ಮದರಾಸ್ ಸರ್ಕಾರಕ್ಕೆ ಕೊಟ್ಟಾಗಿದೆ. ಆದರೆ ತಾವು ನಮಗೆ 15 – 16 ಹಳ್ಳಿಗಳಿಗೆ ಬದಲಾಗಿ 67 ಹಳ್ಳಿಗಳನ್ನು ಪಡೆದುಕೊಂಡಿರುತ್ತೇವೆಂದು ಹೇಳಬಹುದು. ಇದಕ್ಕಾಗಿ ಎಲ್ಲರೂ ಸಂತೋಷಪಡಬೇಕೆಂದೂ ಅವರು ತಿಳಿಸಬಹುದು. ಆದರೆ ಇಂಥಾ ವ್ಯವಹಾರಗಳನ್ನು ನಾವು ಒಂದು ವ್ಯಾಪಾರ ದೃಷ್ಟಿಯಿಂದ ನೋಡಬಾರದು. ಹಾಗೆ ಒಂದು ವ್ಯವಹಾರ ನಡೆಸುವುದಕ್ಕೆ ಮುಂಚೆ ಸಂಸ್ಥಾನದ ಜನರ ಮನೋಭಾವ ಹೇಗಿದೆ, ಆ ಹಳ್ಳಿಯ ನಿವಾಸಿಗಳ ಮನೋಭಾವ ಹೇಗಿತ್ತು, ಹೀಗೆ ಮಾಡಿದರೆ ಜನರ ಪರಿಣಾಮ ದೇಶದ ಮೇಲೆ ಯಾವ ರೀತಿ ಆಗುತ್ತದೆ, ಇದರಿಂದ ಮುಂದಕ್ಕೆ ಏನು ಸಾಧಕಬಾಧಕಗಳು ಉಂಟಾಗುತ್ತವೆ ಎಂಬೀ ಅಂಶಗಳನ್ನೆಲ್ಲಾ ನೋಡಬೇಕಾಗಿತ್ತು. ಇಂಥ ವಿಚಾರಗಳಲ್ಲಿ ಸರ್ಕಾರದವರೇ ಎಲ್ಲಾ ಸ್ವಾತಂತ್ರ್ಯವನ್ನೂ ಇಟ್ಟುಕೊಂಡು ಮುಂದುವರಿಯಬಾರದು. ಆ ಗ್ರಾಮಗಳೆಲ್ಲ ದೇಶದ ಒಂದು ಭಾಗ. ನಮ್ಮ ಶರೀರಕ್ಕೆ ಕೈಬೆರಳು ಹೇಗೆ ಒಂದು ಭಾಗವೋ ಮತ್ತು ಅದೇ ಪ್ರಕಾರ ಕಿವಿಯೂ ಸಹ ಹೇಗೆ ಶರೀರದ ಒಂದು ಭಾಗವಾಗಿರುತ್ತದೆಯೋ, ಅದೇ ರೀತಿ ಈ ವಿಚಾರವನ್ನೂ ತಾವು ಗಮನಿಸಿ. ಅವುಗಳನ್ನು ಬೇರೆ ಕಡೆಗೆ ವರ್ಗಮಾಡುವಾಗ ದೇಶದ ಜನರುಗಳ ಅಭಿಪ್ರಾಯವನ್ನು ತಾವು ತಿಳಿಯಬೇಕಾಗಿತ್ತು. ಆದರೆ ತಾವು ಆ ರೀತಿ ಮಾಡಲಿಲ್ಲ. ತಮ್ಮ ಸ್ವಂತ ಜವಾಬ್ದಾರಿ ಮೇಲೇ ಮಾಡಿದ್ದೀರಿ. ಈ ಭಾಗದಲ್ಲಿ ತಾವು ದೇಶದವರ ಅಭಿಪ್ರಾಯವನ್ನು ಪಡೆದುಕೊಳ್ಳಲಿಲ್ಲ. ಆ 15 ಹಳ್ಳಿಗಳವರ ಅಭಿಪ್ರಾಯವನ್ನೂ ಸಹ ತಾವು ತೆಗೆದುಕೊಂಡಿಲ್ಲ. ಮೈಸೂರು ಸರ್ಕಾರ ಬಿಟ್ಟು ಬೇರೆ ಸರ್ಕಾರಕ್ಕೆ ಸೇರಲು ಇಷ್ಟವಿದೆಯೋ, ಹೇಗೆ, ಎಂಬ ವಿಷಯವನ್ನು ಅವರಿಂದ ತಾವು ಮುಖ್ಯವಾಗಿ ತಿಳಿದುಕೊಂಡು ನಂತರ ಇದನ್ನು ಮಾಡಬೇಕಾಗಿತ್ತು. ಇತ್ತಲಾಗಿ ಈ ಸಭೆಯ ಅವಗಾಹನೆಗೂ ತಾರದೆ ತಾವೇ ಈಗ ಈ ಕೆಲಸವನ್ನು ಮಾಡಿದ್ದೀರಿ. ಹೀಗೆ ಯಾರೊಬ್ಬರನ್ನೂ ಕೇಳದೆ ತಾವೇ ಸ್ವತಂತ್ರವಾಗಿ ಕೆಲಸ ಮಾಡಿರುವುದು ಬಹಳ ವಿಷಾದಕರವಾದ ಸಂಗತಿ. ಆ ಹದಿನಾರು ಹಳ್ಳಿಗಳೂ ನೂರಾರು ವರ್ಷಗಳಿಂದ ಶ್ರೀಮನ್ಮಹಾರಾಜರವರ ಆಡಳಿತಕ್ಕೊಳಪಟ್ಟಿದ್ದವು. ಅವುಗಳಲ್ಲಿ ಕೆಲವು ಚರಿತ್ರಾರ್ಹವಾದ ಹಳ್ಳಿಗಳೂ ಇವೆ. ಆ ಪೈಕಿ ಬೊಮ್ಮಗಟ್ಟೆ ಎಂಬುದು ಒಂದು. ಅವರು ಇಷ್ಟು ದಿನವೂ ನಮ್ಮ ಜೊತೆಯಲ್ಲಿದ್ದು, ನಮ್ಮ ಒಡನಾಡಿಗಳಾಗಿರತಕ್ಕವರು ಈಗ ಏಕಾಏಕೀ ಅವರು ನಮ್ಮನ್ನು ಬಿಟ್ಟು ಹೋಗುವಂತೆ ಮಾಡಿರುವುದು ಬಹಳ ವಿಷಾದಕರ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಮೊಳಕಾಲ್ಮುರು ತಾಲ್ಲೂಕಿನಲ್ಲಿ ಬೊಮ್ಮಗಟ್ಟೆ ಎಂಬುದು ಒಂದು ದೊಡ್ಡ ಯಾತ್ರಾಸ್ಥಳ. ಹಿಂದೆ ಮೈಸೂರು ವಿಭಾಗವಾಗಿದ್ದ ಕಾಲದಲ್ಲಿ ಅಂದರೆ 1797ನೆಯ ಇಸವಿಯಲ್ಲಿ ಬಹಳ ಪ್ರಯತ್ನಪಟ್ಟು ಒಂದು ಉದ್ದೇಶ ಪೂರ್ವಕವಾಗಿ ಈ ಗ್ರಾಮವನ್ನು ಮೈಸೂರಿಗೆ ಸೇರಿಸಿಕೊಂಡರು.

ಅನೇಕ ಸದಸ್ಯರುಗಳು.—ಅದು ಯಾವ ಗ್ರಾಮ?

ಜನಾಬ್ ಮಹಮ್ಮದ್ ಇಮಾಂರವರು.—ಬೊಮ್ಮಗಟ್ಟೆ ಎಂಬ ಗ್ರಾಮ.

Sri. G. VEERAPPA (Chitaldrug District—General). – On a point of order, Mr. Speaker. So far as I know, the matter has been finally decided by the Government of India in consultation with the States' Governments and I want to know whether this House can discuss and come to a decision on this point.

Mr. SPEAKER.—Hon'ble Member is criticising the action of the Government in handing over those villages. What is the point of order?

Sri K. SAMPANGIRAMIAH (Kolar District—General).—What is the effect of the cut motion is passed?

Sri T. SUBRAMANYA (Tumkur District - General).—I want to say one word. It is this. By virtue of the powers vested in the Central Government to make such administrative adjustments as they think fit under the Constitution Act of 1935, the Central Government have acted in consultation with the other Governments. They need not even consult them. Suppose we pass the cut motion. It means that the Government will have to go back to the original position, which is not possible. Under such circumstances, I feel a discussion of a cut motion of this kind is beyond the scope of the powers of this House.

Sri A. BHEEMAPPA NAIK (Chitaldrug District—General).—Hon'ble Member Janab Imam brings to the notice of the House that this Government should not have come to an agreement with the Government of India. It would have been a different thing if the Central Government themselves had passed an order *ex parte*. But here is a case where the Government of Mysore have given their opinion. In giving the opinion or before giving such an opinion, the Government should have consulted the people who have been affected. That is the motion. Therefore it is quite in order to discuss it. More than this, even the memorial, of the people of transferred villages has been under correspondence and has not been finally settled. It is possible even now for the Government of India to give back to the State some of the villages

for administrative purposes. Therefore, Janab Imam's cut motion is quite in order.

Sri K. CHENGALARAYA REDDY (Leader of the House).—An important point of order has been raised and I think that the matter requires careful examination before a ruling is finally given. I am not going into the merits of the proposition that Janab Mahomed Imam has tabled for discussion. I have no objection to the House discussing the question whether or not the Mysore Government were right in having concluded an agreement with the Government of India regarding this matter, on its merits. But a constitutional aspect has arisen and I venture to submit that this matter requires careful examination. Not only this matter but several other matters which have been concluded with the Government of India by this Government and on which the Government of India have issued an order, are likely to come up for discussion on the floor of this House. In the first place, a decision has to be taken whether such orders of the Government could be debated upon on the floor of this House and if it is decided on any particular aspect that it could be discussed so far as it relates specifically to the action of the Mysore Government, then the scope of such debate has to be laid down. Under the Constitution I should like to submit that the Chair may be pleased to examine the various points involved in this question and give a ruling later on. On the merits of the proposition I would like to have my say some time later

Sri R. RANGARAMIAH.—Mysore District—General).—I want to know whether this exchange has been effected under the Government of India Act of 1935 or under the Constitution Act and also I want to know the date when this agreement or reciprocal arrangement was given effect to.

Sri H. SIDDAIYA.—Orders were passed before 26th January 1950.

Sri R. RANGARAMIAH.—Was it under the Government of India Act?

Sri H. SIDDAIYA.—Yes.

***Sri H. M. CHANNABASAPPA** (Mysore District—General).—Sir, I beg to submit that this is a very important question as rightly pointed out by the Hon'ble Leader of the House. Before the Chair gives a ruling on this point, I request that the Hon'ble Members of this House may kindly be allowed to express themselves on the merits or demerits on the point raised by the Hon'ble Leader of the House, as any decision taken on this point of order will have a very important re-action.

Sri H. SIDDAVEERAPPA (Chitaldrug District—General).—Does the Hon'ble Member want a general discussion on the point of order?

Sri H. M. CHANNABASAPPA.—No; not a general discussion. I only requested the Hon'ble Speaker to allow a few members to express their views on the point of order on account of its importance.

ಅಧ್ಯಕ್ಷರು.— ಈಗತಾನೆ ಸಭಾನಾಯಕರು ಹೇಳಿದ ಹಾಗೆ, ಈ ಖೋತಾ ಸೂಚನೆಯ ಬಗ್ಗೆ ಎತ್ತಿರುವ ಕ್ರಮಾಕ್ಷೇಪದ ಅಂಶ ಬಹಳ ಮುಖ್ಯವಾದದ್ದು. ಈ ಬಗ್ಗೆ ನಾನು ತೀರ್ಮಾನ ಕೊಡುವುದಕ್ಕೆ ಮುಂಚೆ ಈ ಸಭೆಯ ಇತರ ಸದಸ್ಯರುಗಳ ಅಭಿಪ್ರಾಯ ಏನೆಂಬುದನ್ನು ತಿಳಿದು ಆಖೈರಾಗಿ ತೀರ್ಮಾನಕೊಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಈಗ ಜನಾಬ್ ಇಮಾಂ ವರು ಮಾತನಾಡ ಬಹುದು.

ಜನಾಬ್ ಜೆ. ಮಹಮದ್ ಇಮಾಂರವರು.—ನಾನು ಹೇಳುವುದೇನೆಂದರೆ, ಇಂಥ ಪ್ರಾಮುಖ್ಯವಾದ ಮತ್ತು ಸಂಪದ್ಯುಕ್ತವಾದ ಗ್ರಾಮಗಳನ್ನು ಕೊಟ್ಟುಬಿಟ್ಟಿರುವುದು ಬಹಳ ವ್ಯಸನಕರ. ಅಲ್ಲಿರತಕ್ಕ ಜನರಿಗೂ ಇದು ಬಹಳ ವ್ಯಸನವನ್ನುಂಟುಮಾಡಿದೆ. ಇದು ಒಬ್ಬನಿಗೆ ಹದಿನೈದು ಮಕ್ಕಳಿದ್ದು, ಇನ್ನೊಬ್ಬನಿಗೆ ಇಬ್ಬರೇ ಮಕ್ಕಳಿದ್ದರೆ. ಇಬ್ಬರು ಮಕ್ಕಳಲ್ಲಿ ಒಬ್ಬನನ್ನು ಕೊಟ್ಟುಬಿಟ್ಟು ಅದಕ್ಕೆ ಬದಲು 15 ಮಕ್ಕಳನ್ನು ತೆಗೆದುಕೊಳ್ಳಿ ಎಂದು ಹೇಳಿದ ಹಾಗಾಯಿತು. ಅದೇ ರೀತಿ, ನಮಗೀಗ 60 ಹಳ್ಳಿಗಳೇನೋ ಬಂದಿರಬಹುದು. ಆದರೆ ಇದರಿಂದ ನಮ್ಮ ಮೇಲೆ ಬಿದ್ದಿರುವ liabilities ಎಷ್ಟು? 63 ಸ್ಕೂಲುಗಳನ್ನು 63 ಆಸ್ಪತ್ರೆಗಳನ್ನು, ಇತ್ಯಾದಿಯಾಗಿ ಪ್ರತಿಯೊಂದನ್ನೂ ಮಾಡಿಕೊಡಬೇಕಾಗುತ್ತದೆ. ಇದನ್ನೆಲ್ಲಾ ಗಣನೆಗೆ ತೆಗೆದುಕೊಂಡರೆ ನಮ್ಮ ಸಂಸ್ಥಾನಕ್ಕೆ ಆದಾಯವಾಗುವುದಕ್ಕಿಂತ ನಷ್ಟವೇ ಹೆಚ್ಚೆಂದು ಹೇಳಬಹುದು.

ಆದ್ದರಿಂದ ನಾನು ಸರ್ಕಾರದವರಿಗೆ ಹೇಳುವುದಿಷ್ಟೆ: ಅವಕಾಶವಿದ್ದರೆ, ಇದನ್ನು ಮತ್ತೆ ವಿಮರ್ಶೆ ಮಾಡುವುದು ಸೂಕ್ತ. ನಮ್ಮ ಸಂಸ್ಥಾನದ ಹಳ್ಳಿಗಳನ್ನು ನಮ್ಮ ಸಂಸ್ಥಾನದಲ್ಲೇ ಇಟ್ಟುಕೊಳ್ಳೋಣ. ಜೊತೆಗೆ ಈರೀತಿಯಾಗಿ ಆಡಳಿತಾನುಕೂಲದ ದೃಷ್ಟಿಯಿಂದ ಬೇರೆ ಹಳ್ಳಿಗಳನ್ನು ತೆಗೆದುಕೊಳ್ಳುವುದನ್ನು ನಾನು ಬೇಡ ಎನ್ನುವುದಿಲ್ಲ. ಅವರಿಗೆ ಯಾವ ಸಹಾಯ, ರಕ್ಷಣೆಯನ್ನಾದರೂ

ಕೊಡೋಣ. ಈ 15 ಹಳ್ಳಿಗಳವರೂ ನಮ್ಮ ಶ್ರೀಮನ್ಮಹಾರಾಜರವರ ಆಡಳಿತದಲ್ಲಿ ಮೈಸೂರು ಸಂಸ್ಥಾನದಲ್ಲೇ ಇರಬೇಕೆಂದು ಇಷ್ಟಪಡುತ್ತಾರೆ. ಆದ್ದರಿಂದ ಅವರನ್ನು ಕೈಬಿಡುವುದು ಬೇಡವೆಂದು ಹೇಳಿ. ಈ ವಿಷಯದಲ್ಲಿ ಸರ್ಕಾರದವರು ಪುನರ್ವಿಮರ್ಶೆ ಮಾಡಿ ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತಾರೆಂದು ನಂಬಿದ್ದೇನೆ.

Mr. SPEAKER.—Cut motion moved:

"That the demand under the head '1 Land Revenue' for Rs. 48,82,000 be reduced by Re 1."

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಜನಾಬ್ ಇಮಾಂರವರು ತಂದಿರತಕ್ಕ ಈ ಖೋತಾ ಸೂಚನೆಯನ್ನು ನಾನು ವಿರೋಧಿಸಬೇಕಾಗಿದೆ. ಆದರೆ ಈ ಬಗ್ಗೆ ಎದ್ದಿರತಕ್ಕ *ಕ್ರಿಯಾಲೋಪದ ವಿಚಾರದಲ್ಲಿ ನಾನೇನೂ ಮಾತನಾಡುವುದಿಲ್ಲ. 15 ಹಳ್ಳಿಗಳನ್ನು ಬೇರೆ ದೇಶಕ್ಕೆ ಕೊಟ್ಟು 60 ಹಳ್ಳಿಗಳನ್ನು ನಾವು ತೆಗೆದುಕೊಳ್ಳಲಾಗಿದೆ ಎಂದು ಒಂದು ವ್ಯಾಪಾರ ದೃಷ್ಟಿಯಿಂದ ಈ ವಿಷಯವನ್ನು ನೋಡಕೂಡದು. ಇಂದಿನ ಪರಿಸ್ಥಿತಿಯೇನೆಂಬ ದನ್ನು ವಿಚಾರಣಬೇಕು. ಇಂಡಿಯಾ ದೇಶದಲ್ಲೆಲ್ಲಾ ಒಂದೇ ಆಡಳಿತದ ಅನುಕೂಲಕ್ಕಾಗಿ ಬೇರೆ ಬೇರೆ ಭಾಗಗಳಾಗಿ ಮಾಡಿಕೊಂಡಿದ್ದೇವೆ. ಬೇರೆ ಬೇರೆ ಭಾಗಗಳಲ್ಲಿ ಕೆಲವು ಕಡೆ ಗವರ್ನರುಗಳಿದ್ದಾರೆ, ಕೆಲವು ಕಡೆ ರಾಜಪ್ರಮುಖರುಗಳಿದ್ದಾರೆ. ಅಷ್ಟೇ ಹೊರತು, ಇಡೀ ಭಾರತವೆಲ್ಲಾ ಒಂದೇ ಆಗಿದ್ದು, ಒಂದೇ ಪೌರಹಕ್ಕು, ಒಂದೇ ಕಾನೂನು, ಒಂದೇ ವಿಧವಾದ ಹಕ್ಕು ಬಾಧ್ಯತೆಗಳು - ಹೀಗಿದ್ದು ಕೇವಲ ಆಡಳಿತದ ಅನುಕೂಲಕ್ಕಾಗಿ ಈ ಬದಲಾವಣೆಯನ್ನು ಮಾಡಿದ್ದಾರೆಯೇ ಹೊರತು, ನಮ್ಮ ದೇಶದಿಂದ ಗ್ರಾಮಾಂತರನ್ನು ಬೇರೆ ದೇಶದವರಿಗೆ ವರ್ಗಾವಣೆ ಮಾಡಿದ್ದೇವೆಂದಾಗಲೀ, ಇದರಿಂದ ಅವರಿಗೆ ಮನಸ್ಸು ನೊಂದಿದೆಯೆಂದಾಗಲಿ ಹೇಳುವುದರಲ್ಲಿ ಅರ್ಥವಿಲ್ಲ. ಉದಾಹರಣೆಗೆ, ಈ ಸಭೆಯ ಮುಂದೆ ಒಂದು ಪ್ರಶ್ನೆ ಬರಬಹುದು. ನಮ್ಮ ದೇಶದಲ್ಲಿರುವ ಡಿಸ್ಟ್ರಿಕ್ಟ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು ಅಥವಾ ಹೆಚ್ಚು ಮಾಡಬೇಕೆಂದು ಒಂದು ಸಲಹೆ ಬರಬಹುದು. ಆಗ ಒಂದು ಡಿಸ್ಟ್ರಿಕ್ಟಿನಿಂದ ಒಂದು ತಾಲ್ಲೂಕನ್ನು ತೆಗೆದು ಬೇರೆ ಡಿಸ್ಟ್ರಿಕ್ಟಿಗೆ ವರ್ಗಾಯಿಸುವಾಗ 'ನಮಗೆ ಮೊದಲು ಹೀಗಿತ್ತು, ಈಗ ಹಾಗಾಯಿತು' ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಜನಾಬ್ ಇಮಾಂರವರ ಆಕ್ಷೇಪಣೆ ನಾವು ಬೇರೆ ದೇಶಕ್ಕೆ ಹೋದೆವು ಎಂದು ಹೇಳುವುದು ನ್ಯಾಯವಾದದ್ದಲ್ಲ. ಇದರಲ್ಲಿ ತೊಡಕೇನಿದೆ? ಅವರು ಇನ್ನೊಂದು ಹೇಳಿದರು, ಹೊರಗಡೆ ಇರುವ ಪ್ರಾಂತ್ಯಗಳನ್ನು ಬೇಕಾದರೆ ತೆಗೆದುಕೊಳ್ಳೋಣ, ನಮ್ಮ ದೇಶದಲ್ಲಿರುವ ಗ್ರಾಮಗಳನ್ನು ಬೇರೆಯವರಿಗೆ ಕೊಡುವುದು ಬೇಡ ಎಂದು. ನಾನು ಮೊದಲೇ ಹೇಳಿದ ಹಾಗೆ ಕೊಡುವ ಅಥವಾ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲಲ್ಲ. ಉದಾಹರಣೆಗೆ ಹೇಳುತ್ತೇನೆ. ನಮ್ಮ ಸಂಸ್ಥಾನದ ಸರಹದ್ದಿನಲ್ಲಿರತಕ್ಕ ಮದ್ರಾಸಿಗೆ ಸೇರಿದ ಗ್ರಾಮಗಳಲ್ಲಿ ಏನಾದರೂ ಕಳ್ಳತನ, ಖೂನಿ ನಡೆದು, ಆ ಗ್ರಾಮದ ಆಚೆ ಬೇರೆ ಗ್ರಾಮದಲ್ಲಿ ಮಾಲನ್ನು ಬಚ್ಚಿಟ್ಟಿದರೆ ಅದಕ್ಕೆ ಸಂಬಂಧಪಟ್ಟ ಕ್ರಮ ಕೈಕೊಳ್ಳುವುದು ಕಷ್ಟಕ್ಕೆ ಬರುತ್ತದೆ. ಆದ್ದರಿಂದ ಒಂದು ಸರಹದ್ದಿನಲ್ಲಿರುವ ಗ್ರಾಮಗಳು ಒಂದೇ ಆಡಳಿತದಲ್ಲಿರಲಿ, ಇಲ್ಲಿಂದ ಬೇರೆಯಾಗಿರುವುದು ಇನ್ನೊಂದು ಆಡಳಿತದಲ್ಲಿರಲಿ ಎಂದು ಆಡಳಿತದ ಸೌಕರ್ಯ ದೃಷ್ಟಿಯಿಂದ ಮಾಡಲಾಗಿದೆಯೇ ಹೊರತು ನಮ್ಮ ಸಂಸ್ಥಾನದ ಗ್ರಾಮಗಳನ್ನು ಪರದೇಶದವರಿಗೆ ಕೊಟ್ಟಿದ್ದೇವೆಂದು ಭಾವಿಸುವುದು ಸೂಕ್ತವಲ್ಲ, ಆದ್ದರಿಂದ ಈಗ ಮಾಡಿರತಕ್ಕ ಏರ್ಪಾಡುಗಳು ಸರಿಯಾಗಿವೆ. ಈಗ ಬೊಂಬಾಯಿ ಮದ್ರಾಸ್ ಗ್ರಾಮಗಳೂ ನಮ್ಮ ಮೈಸೂರು ಸಂಸ್ಥಾನದ ಗ್ರಾಮಗಳೂ ಒಂದೇ ಹತೋಟಿಗೆ ಬಂದಿರುತ್ತವೆ. ಇದನ್ನು ಯಾರೂ ಬೇರೆ ದೇಶದವರೊಡನೆ ವ್ಯಾಪಾರ ಮಾಡಿದ್ದೇವೆಂದು ಹೇಳುವುದು ಸರಿಯಲ್ಲ. ಈ ದೃಷ್ಟಿಯಿಂದ ಮಾನ್ಯ ಸದಸ್ಯರಾದ ಜನಾಬ್ ಇಮಾಂರವರು ತಂದಿರತಕ್ಕ ಖೋತಾ ಸೂಚನೆ ಸಾಧುವಲ್ಲವೆಂದು ಹೇಳುತ್ತೇನೆ.

Sri H M. CHANNABASAPPA.—Sir, I rise to a point of order. The Chair has been pleased to reserve the decision on the point of order raised by one of the Hon'ble Members on the right of this House to discuss this question.

ಅಧ್ಯಕ್ಷರು. ಇದಕ್ಕೆ ಸಂಬಂಧಪಟ್ಟಂತೆ ಚರ್ಚೆ ಮುಂದುವರಿಯಬಹುದೆಂದು ನಾನಾಗಲೇ ಹೇಳಿದ್ದೇನೆ. ಇದರ ಮೇಲಿನ ರೂಲಿಂಗಿಗೆ ಸಂಬಂಧಪಟ್ಟ ವಿಷಯವನ್ನು ಮುಂದೆ ತೀರ್ಮಾನ ಮಾಡೋಣ. ಈ ದಿವಸ ಚರ್ಚೆ ಮಾಡಕೂಡದೆಂದೇನೂ ನಾನು ಹೇಳಲಿಲ್ಲ.

Sri H. M. CHANNABASAPPA —I would like to submit to the Chair this point Suppose we take a decision on this point and the ruling of the Chair is otherwise......

Mr. SPEAKER.—The ruling will be for future guidance.

Sri H. M. CHANNABASAPPA. —Will the Hon'ble Members of this House have an opportunity to express themselves on the point of order raised ?

Mr. SPEAKER.—I said so.

Sri H. M. CHANNABASAPPA.—May I know when ?.

Mr. SPEAKER.—Before the ruling is given, the Chair will ascertain the views of this House.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಇದೊಂದು ಬಹಳ ಮುಖ್ಯವಾದ ವಿಚಾರ. ಕೇವಲ ಮೈಸೂರು ಸೀಮೆ ಮತ್ತು ಮದ್ರಾಸ್ ಪ್ರಾಂತ್ಯಕ್ಕೆ ಸಂಬಂಧಪಟ್ಟದ್ದಲ್ಲ. ಇಂಡಿಯಾ ದೇಶದಲ್ಲಿ ಒಂದು ಪ್ರಾಂತ್ಯಕ್ಕೂ ಇನ್ನೊಂದು ಪ್ರಾಂತ್ಯಕ್ಕೂ ಸರಹದ್ದುಗಳನ್ನು ಒಂದು ಕ್ರಮದಲ್ಲಿ ಸರಿಪಡಿಸಬೇಕೆಂದು ಹೇಳಿ ಒಂದು ಸಮ್ಮೇಳನವನ್ನು ಏರ್ಪಡಿಸಿ ಎಲ್ಲಾ ಪ್ರಾಂತ್ಯಗಳ ಮಂತ್ರಿಗಳನ್ನೂ ಬರಮಾಡಿಕೊಂಡು ಸಮಾಲೋಚನೆ ನಡೆಸಿದುದರ ಪರಿಣಾಮವಾಗಿ ಆದದ್ದು. ಆದ್ದರಿಂದ ಜನಾಬ್ ಇಮಾಂರವರು ಮೈಸೂರು ಮತ್ತು ಮದ್ರಾಸ್ ಸರ್ಕಾರಗಳಿಗೆ ಆಗಿರುವ ಒಂದು ಒಪ್ಪಂದದ ಏರ್ಪಾಡೆಂದು ತಿಳಿದುಕೊಳ್ಳಬೇಕಾಗಿಲ್ಲ. ನನಗೆ ಗೊತ್ತಿರುವಂತೆ ಇದರಲ್ಲಿ ಯಾವತೊಂದರೆಯೂ ಇಲ್ಲ. ಏಕೆಂದರೆ,

ಉದಾಹರಣೆಗೆ ನಮ್ಮ ಚಿತ್ರದುರ್ಗ ಡಿಸ್ಟ್ರಿಕ್ಟಿನ ಮೊಳಕಾಲ್ಮುರು ತಾಲ್ಲೂಕಿನ ರಾಮಪುರ ಹೋಬಳಿಯ ವಿಷಯ ಹೇಳುತ್ತೇನೆ. ಈ ಹೋಬಳಿಯ ಕೆಲವು ಗ್ರಾಮಗಳಿಗೆ ಹೋಗಬೇಕಾದರೆ ಮಧ್ಯೆ 5–6 ಮೈಲಿಗಳ ದೂರ ಮದ್ರಾಸ್ ಪ್ರಾಂತ್ಯದೊಳಗೆ ಹೋಗಬೇಕಾಗುತ್ತದೆ. ದಾವಣಗೆರೆ ಮತ್ತು ಹರಿಹರ ತಾಲ್ಲೂಕುಗಳ ಸರಹದ್ದಿನಲ್ಲಿಯೂ ಅದೇ ರೀತಿಯಾಗಿವೆ. ಇದನ್ನೆಲ್ಲಾ ಯೋಚನೆ ಮಾಡಿದರೆ ಈ ರೀತಿಯ ಏರ್ಪಾಡಿನಿಂದ ನಮಗೆ ಲಾಭವಿದೆ. ಹೆಚ್ಚು ಜಮೀನುಗಳೂ ಹೆಚ್ಚು ಪ್ರದೇಶಗಳೂ ನಮ್ಮ ಆಡಳಿತಕ್ಕೆ ಬಂದಿವೆ. ಇದಕ್ಕಾಗಿ ನಿಜವಾಗಿಯೂ ನಮ್ಮ ಸರ್ಕಾರದವರನ್ನು ಅಭಿನಂದಿಸುವುದಕ್ಕೆ ನಾವೆಲ್ಲರೂ ಕಾತುರರಾಗಿದ್ದೇವೆಂದು ಹೇಳುತ್ತೇನೆ. ಜನಾಬ್ ಮಹಮದ್ ಇಮಾಂರವರು ಈ ತರಹ ಮಾಡಿರುವುದರಿಂದ ಒಂದು ಲೋಪವಾಗಿದೆ, ತೊಂದರೆಯಾಗಿದೆ ಎಂದು ಹೇಳಿದರು. ಆದರೆ ಈ ವಿಚಾರದಲ್ಲಿ ಸಾಕಷ್ಟು ಅವರು ಯೋಚನೆ ಮಾಡಿಲ್ಲವೆಂದು ಹೇಳುತ್ತೇನೆ. ಈಗಲಾದರೂ ಸರ್ಕಾರದವರು ಮಾಡಿರುವ ಈ ಕೆಲಸಕ್ಕಾಗಿ ಅವರನ್ನು ಅಭಿನಂದಿಸಬೇಕೆಂದು ತಿಳಿಸಿ, ಈಗಲಾದರೂ ಜನಾಬ್ ಇಮಾಂರವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುವರೆಂದು ನಂಬಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

*ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಈ ವಿಷಯದಲ್ಲಿ ನಾನು ಒಂದು ಪ್ರಶ್ನೆಯನ್ನು ತಂದಿದ್ದೆ. ನಮ್ಮ ಪಕ್ಕದ ಎರಡು ಹಳ್ಳಿಗಳನ್ನು ಸರ್ಕಾರದವರು ಮದ್ರಾಸಿಗೆ ಕೊಟ್ಟರು. ಆ ಹಳ್ಳಿಗಳಿಂದ ಆಡಳಿತಕ್ಕೆ ಬಹಳ ಅನಾನುಕೂಲವಿತ್ತು. ಅಲ್ಲಿ ಮುಖ್ಯ ಮಂತ್ರಿಗಳ ನೆಂಟರೂ ಇದ್ದರು. ಅವರಿಗೂ ಮನ ನೊಂದಿತು. ಹೆಣ್ಣು ಮಕ್ಕಳನ್ನು ಅತ್ತೆಯ ಮನೆಗೆ ಕಳುಹಿಸಿದಹಾಗೆ ಅವಕಾಶವಿಲ್ಲದೆ ಕೊಡಬೇಕಾಗಿ ಬಂತು. ಕೊಡುವುದಕ್ಕೆ ಇಷ್ಟವಿಲ್ಲದಿದ್ದರೂ ಕೊಡಬೇಕಾದ ಸಂದರ್ಭ ಬಂದುದರಿಂದ ಕೊಟ್ಟಿದ್ದೇವೆಂದು ಮುಖ್ಯ ಮಂತ್ರಿಗಳೂ ಕೂಡ ಪ್ರಕಟಣೆ ಹೊರಡಿಸಿ ವ್ಯಸನ ಸೂಚಿಸಿದ್ದಾರೆ. ಈ 6 ಹಳ್ಳಿಗಳವರೂ ನಮ್ಮಲ್ಲಿಗೆ ಬರುವುದಕ್ಕೆ ಬಹಳ ಸಂತೋಷ ಪಡುತ್ತಾರೆ. ಏಕೆಂದರೆ, ಇಲ್ಲಿಗೆ ಬಂದರೆ ದಸರಾಕ್ಕೆ ಹೋಗಬಹುದು; ಬೇಕಾದ ಹಾಗೆ ವಿದ್ಯುಚ್ಛಕ್ತಿಯ ಸೌಕರ್ಯವೂ ಇದೆ. ಅಲ್ಲಿನವರಿಗೆ ಮೈಸೂರಿಗೆ ಸೇರುವುದಕ್ಕೆ ಬಹಳ ಸಂತೋಷ. ಇಲ್ಲಿನವರು ಹೊರಗೆ ಹೋಗುವುದಕ್ಕೆ ಹೆಣ್ಣು ಮಕ್ಕಳು ಮನ ಬಿಟ್ಟು ಹೊರಗೆ ಹೋಗುವಾಗ ವ್ಯಸನಪಡುವಂತೆ ವ್ಯಸನಪಡುತ್ತಾರೆ. ಆದ್ದರಿಂದ ಜನಾಬ್ ಇಮಾಂರವರು ಹೇಳುವುದು, 'ಸರ್ಕಾರದವರೇನೋ ಕೆಲವು ಕಾರಣಗಳಿಂದ ಕೊಟ್ಟಿದ್ದಾರೆ, ಆದರೆ ಮೈಸೂರು ಪ್ರಜೆಗಳಿಗೆ ಅದು ಇಷ್ಟವಿಲ್ಲದ್ದರಿಂದ, ಅದನ್ನು ಮುಖ್ಯಮಂತ್ರಿಗಳೂ ವ್ಯಕ್ತಪಡಿಸಿರುವುದರಿಂದ, ಕೂಡಲೇ ಪುನರಾಲೋಚನೆ ಮಾಡುವುದು ಒಳ್ಳೆಯದು, ಎಂದು'

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಮಾನ್ಯ ಸದಸ್ಯರಾದ ಜನಾಬ್ ಇಮಾಂರವರು ತಂದಿರುವ ಕತ್ತರಿ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಗಡಿ ಸರಹದ್ದಿನಲ್ಲಿರುವ ಗ್ರಾಮಗಳನ್ನು ಸಂಬಂಧಪಟ್ಟ ತಾಲ್ಲೂಕಿಗೇ ಕೊಡಬೇಕಾದ್ದರಿಂದ ಅವುಗಳನ್ನು ಕೊಡುವುದಕ್ಕೆ ಅವಕಾಶವೇ ಇರಲಿಲ್ಲ. ಮೊಳಕಾಲ್ಮುರು ತಾಲ್ಲೂಕಿಗೆ 6 ಹಳ್ಳಿಗಳ ಜೊತೆಗೆ ಇನ್ನೂ 4 ಸೇರುತ್ತಿದ್ದುವು. ಆಗ ಅಡ್ಮಿನಿಸ್ಟ್ರೇಟಿವ್ ಯೂನಿಟ್ ಸಹ ಚೆನ್ನಾಗಿರುತ್ತಿತ್ತು. ಈ ವಿಚಾರವನ್ನು ಡೆಪ್ಯುಟಿ ಕಮಿಷನರು, ಅಮಲ್ದಾರರು ಮುಂತಾದ ಅಧಿಕಾರಿಗಳಿಗೆ ತಿಳಿಸಿದ ಮೇಲೆ ಅವರೂ ಸಹ ಈ ವಿಚಾರವನ್ನು ತಿಳಿಸಿದ್ದಾರೆ, ಕೆರೆಯ ತೊಂದರೆಯೂ ಇದೆ. ಈ ಕಡೆ 2 ಹಳ್ಳಿ, ಆ ಕಡೆ 4 ಹಳ್ಳಿ ಸೇರುವುದರಿಂದ ತೊಂದರೆ ಜಾಸ್ತಿ. ಹಿಂದೆ ಆ 6 ಹಳ್ಳಿಗಳ ನಕ್ಷೆಯನ್ನು ತಯಾರಿಸಿ ಇಂಡಿಯಾ ಸರ್ಕಾರಕ್ಕೂ, ಮದ್ರಾಸ್ ಸರ್ಕಾರಕ್ಕೂ ತೋರಿಸಿದ್ದರೆ, ಈ 6 ಹಳ್ಳಿಗಳನ್ನೂ ಸುಖವಾಗಿ ಮೈಸೂರಿಗೇ ಸೇರಿಸುವುದಕ್ಕೆ ಅವಕಾಶವಿತ್ತು. ಇಂಡಿಯಾ ಸರ್ಕಾರದವರು ಮುಖ್ಯವಾದ ಆಡಳಿತ ತತ್ವವನ್ನು ಒಪ್ಪಿದ್ದಾರೆ. ಸಾರ್ವಜನಿಕರ ಅಭಿಪ್ರಾಯವನ್ನು ತಿಳಿಯಲು ಪ್ರಯತ್ನ ಮಾಡದೆ, ಡೆಲ್ಲಿಯ ವೈಶಿಷ್ಟ್ಯವೇನಿತ್ತೆಂಬುದನ್ನೂ ಗಮನಿಸದೆ, ಆಡಳಿತದ ಕಷ್ಟವಿದೆಯೆ, ತೊಂದರೆಯೇನು ಎಂಬುದನ್ನೂ ಯೋಚಿಸದೆ ಈ ರೀತಿ ಮಾಡಿದ್ದಾರೆ. ಶ್ರೀ ಜಿ. ವೀರಪ್ಪನವರು ಬರುತ್ತಿರುವುದು ದಾವಣಗೆರೆ ಸಬ್ ಡಿವಿಜನಿಂದ. ರಾಂಪುರ ಎಂಬ ಊರಿನ ಪ್ರಸ್ತಾಪ ಅವರು ಮಾಡಿದರು. ಆ 6 ಹಳ್ಳಿಗಳನ್ನು ಖುದ್ದಾಗಿ ನಾನು ಪರಿಶೀಲಿಸಿದ್ದೇನೆ. ಅಲ್ಲಿನ ಪ್ರಜೆಗಳು ಮೈಸೂರು ಸರ್ಕಾರದಲ್ಲಿ ತಮ್ಮ ಕುಂದುಕೊರತೆಗಳನ್ನು ಮನವಿ ಮಾಡಿಕೊಂಡಿದ್ದಾರೆ. ಆದರೆ ಮೈಸೂರು ಸರ್ಕಾರದವರು ಅಷ್ಟು ವಿಷಯ ತಮಗೆ ಗೊತ್ತಿರಲಿಲ್ಲವೆಂದು ಹೇಳಿದ್ದಾರೆ. ಹಿಂದೆ ಶ್ರೀಮನ್ಮಹಾರಾಜರು ಈ ವಿಷಯ ಬಂದಾಗ ಕೇಂದ್ರ ಸರ್ಕಾರದೊಡನೆ ಹೊಡೆದಾಡಿದ್ದಾರೆ. ಅಲ್ಲಿನ ಬೆಂಬಲವಿದೆ. ಈಗಲೂ ಮೈಸೂರು ಸರ್ಕಾರದವರು ಅದನ್ನು ವಾಪಸ್ಸು ಪಡೆಯುವುದರಿಂದ ಅನುಕೂಲವಿದೆ, ಅಲ್ಲಿನ ದೇವರು ಹೆಸರುವಾಸಿಯಾದ್ದರಿಂದಲೇ ಆ ಊರಿಗೆ ದೇವರ ಬಣ್ಣ ಘಟ್ಟವೆಂದು ಕರೆಯುತ್ತಾರೆ. ಅರಮನೆಯಿಂದ ಈಗಲೂ ಪೂಜಾದಿಗಳು ಅಲ್ಲಿ ನಡೆಸಲ್ಪಡುತ್ತಿವೆ. ರೆವಿನ್ಯೂ ಮಂತ್ರಿಗಳೂ ಮತ್ತು ಮುಖ್ಯ ಮಂತ್ರಿಗಳೂ ಈ ವಿಚಾರಗಳನ್ನು ಪರಿಶೀಲಿಸಬೇಕಾಗಿತ್ತು. ಈಗಲಾದರೂ ಕೂಡ ಇಂಡಿಯಾ ಸರ್ಕಾರಕ್ಕೆ ಬರೆದು ಈ ಹಳ್ಳಿಗಳನ್ನು ಸಂಸ್ಥಾನಕ್ಕೆ ಸೇರಿಸಿಕೊಂಡು ಅನುಕೂಲ ಪಡೆಯಬೇಕು. ಅದಕ್ಕೆ ಭರವಸೆ ಬೇಕೆಂದು ಸೂಚಕರು ಕೇಳಿದ್ದಾರೆ. ದಯವಿಟ್ಟು ಇಂಡಿಯಾ ಸರ್ಕಾರದೊಡನೆ ಹೊಡೆದಾಡಿ ಅವನ್ನು ಉಳಿಸಿಕೊಳ್ಳಲು ಪ್ರಯತ್ನ ಮಾಡಿದರೆ ಈಗಲೂ ಅದಕ್ಕೆ ಅವಕಾಶವಿದೆ. ಸರ್ಕಾರದವರು ಮಾಡುತ್ತಿರುವುದು ತಪ್ಪೆಂದು ಹೇಳುವುದಿಲ್ಲ. ನಿಜವಾಗಿ ಅನಾನುಕೂಲವಿರುವುದರಿಂದ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಸರ್ಕಾರವನ್ನು ಅತಿ ವಿನಯದಿಂದ ಪ್ರಾರ್ಥಿಸುತ್ತೇನೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಅಧ್ಯಕ್ಷರೇ, ಈ ಕತ್ತರಿ ಪ್ರಯೋಗದ ಪರವಾಗಿ ನಾನು ಏನು ಹೇಳಬೇಕೆಂದಿದ್ದೆನೋ ಅದನ್ನು ವಿಶದವಾಗಿ ಶ್ರೀ ಎ. ಭೀಮಪ್ಪನಾಯಕರೇ ಹೇಳಿದ್ದಾರೆ. ಆಡಳಿತ ಸೌಕರ್ಯಕ್ಕೆ ಬಹಳ ತೊಂದರೆಯಿತ್ತೆಂದು ಶ್ರೀ ಜಿ. ವೀರಪ್ಪನವರು ಹೇಳಿದರು. ಜನರಿಗೆ ಬಹಳ ತೊಂದರೆಯಿತ್ತೆಂದೂ ಹೇಳಿದರು. ಆದರೆ ನಿಜವಾಗಿಯೂ ಆ ಜನರಿಗೆ ಮೈಸೂರು ಸಂಸ್ಥಾನದ ಕೋರ್ಟು ಕಛೇರಿಗೆ ಬಂದು ಹೋಗುವುದು ತೊಂದರೆಯಾಗಿದ್ದರೆ ಅವರೇ ಅದನ್ನು ಸರ್ಕಾರದಲ್ಲಿ ಮನವಿ ಮಾಡುತ್ತಿದ್ದರು. ಮೊನ್ನೆ ಈ ಸಭೆಯ ಮುಂದೆ ಈ ವಿಚಾರವಾಗಿ ಒಂದು ಪ್ರಶ್ನೆ ಕೂಡ ಬಂದಿತ್ತು. ಆಗ ಉತ್ತರ ಕೊಟ್ಟಿರುವುದನ್ನು ನೋಡಿದರೆ ಅಲ್ಲಿಯ ಜನಗಳು ಇದನ್ನು ಬಹಳ ಪ್ರಬಲವಾಗಿ ವಿರೋಧಿಸುತ್ತಿದ್ದಾರೆ, ಇದರಿಂದ ಬಹಳ ತೊಂದರೆಯಿದೆ, ಆದ್ದರಿಂದ ಮೈಸೂರು ದೇಶದಲ್ಲಿ ಹಳ್ಳಿಗಳನ್ನು............

Sri K CHENGALARAYA REDDY.—Not all.

ಶ್ರೀ ಎಲ್. ಸಿದ್ದಪ್ಪನವರು.—I do not know. ಶ್ರೀ ಎಂ. ವಿ. ಕೃಷ್ಣಪ್ಪನವರ ಭಾಷಣದಿಂದ ಹಾಗೆ ಕಂಡು ಬರುತ್ತಿದೆ. ಮುಖ್ಯ ಮಂತ್ರಿಗಳ ಸಂಬಂಧಿಗಳು ಅಲ್ಲಿದ್ದಾರೆ, ಅವರು ಹೋಗುವುದಕ್ಕೆ ವ್ಯಥೆಪಟ್ಟರು ಎಂದು ಹೇಳಿದರು. ಯಾರೂ ಅಲ್ಲಿಗೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಅಂಥವರ ವಿಚಾರದಲ್ಲಾದರೂ ಸರ್ಕಾರದವರು ಏರ್ಪಾಡು ಮಾಡಿ ಮೈಸೂರು ಸರ್ಕಾರದಲ್ಲೇ ಅವರಿಗೆ ಸಂಬಂಧಪಟ್ಟ ಗ್ರಾಮಗಳನ್ನು ಇಟ್ಟುಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು. ಅಲ್ಲದೆ 3-4 ಗ್ರಾಮ ಮೈಸೂರಿಗೆ ಸೇರಿಸಬೇಕೆಂದು ಪ್ರಯತ್ನಪಟ್ಟಿದ್ದರೆ ಮದ್ರಾಸಿಗೆ ಸೇರುತ್ತಿರಲಿಲ್ಲ ಎಂದು ಶ್ರೀ ಎ. ಭೀಮಪ್ಪನಾಯಕರು ಹೇಳಿದರು. ಆಗಲೇ ಇಂಡಿಯಾ ಸರ್ಕಾರದೊಡನೆ ಪತ್ರವ್ಯವಹಾರ ನಡೆಸಿದ್ದರೆ ಚೆನ್ನಾಗಿತ್ತು, ಎಂದು ಅಭಿಪ್ರಾಯ ಪಡುತ್ತೇನೆ.

ಶ್ರೀ ಎಚ್. ಸಿದ್ದಯ್ಯನವರು.—ಸ್ವಾಮಿ, ವ್ಯಾಪಾರ ದೃಷ್ಟಿಯಿಂದ ಈ ಕಾರ್ಯ ನೆರವೇರಿಲ್ಲವೆಂದು ಪ್ರಾರಂಭದಲ್ಲೇ ತಿಳಿಸಬೇಕಾಗಿದೆ. ವ್ಯಾಪಾರ ದೃಷ್ಟಿಯಿಂದ ಆದರೆ ಜನಾಬ್ ಇಮಾಂರವರು ಹೇಳುವ ಹಾಗೆ ನಮ್ಮದನ್ನು ಅವರಿಗೂ ಕೊಡಬೇಡಿ, ಅವರದನ್ನು ತೆಗೆದು ಕೊಳ್ಳಲೂ ಬೇಡಿ ಎಂದು ಹೇಳುವುದು ಯಾರೂ ಒಪ್ಪುವುದಕ್ಕಾಗುವುದಿಲ್ಲ, ಶ್ರೀ ಸಿದ್ದವೀರಪ್ಪನವರು ಹೇಳಿರುವ ಹಾಗೆ mostly and mainly the point for consideration is whether such an exchange is in the interest of administrative convenience. ಅಷ್ಟೇ ಹೊರತು ಮತ್ತ್ಯಾವುದೂ ಹೇಳುವುದು ಸರಿಯಲ್ಲವೆಂದು ನಾನು ಒತ್ತಿ ಹೇಳಬೇಕಾಗಿದೆ. ಅವರು ಹೇಳಿದ ಹಾಗೆ ಇಡೀ ಇಂಡಿಯಾದ ನೀತಿಯ ಒಂದು ಭಾಗವಾಗಿ ಈ ಸಮಸ್ಯೆ ನಮ್ಮ ಮುಂದೆ ಬಂದಿದೆ. ಈ ಬಗ್ಗೆ ಸಂಬಂಧಪಟ್ಟ ಅನೇಕ ಸಂಸ್ಥಾನಗಳೂ ಮತ್ತು ಪ್ರಾಂತಗಳೂ ಒಂದು ಸಮ್ಮೇಳನದಲ್ಲಿ ಭಾಗವಹಿಸಿದ್ದುವು. ಮದ್ರಾಸು, ಬೊಂಬಾಯಿ, ಹೈದರಾಬಾದು, ಮೈಸೂರು, ತಿರುವಾಂಕೂರು ಇತ್ಯಾದಿ ಪ್ರಾಂತಗಳ ಪ್ರತಿನಿಧಿಗಳೂ ಕೂಡ ಈ ಸಮ್ಮೇಳನದಲ್ಲಿ ಡೆಲ್ಲಿಯಲ್ಲಿ ಸೇರಿ ನಾನಾ ಅಂಶಗಳನ್ನು ಪರಿಶೀಲಿಸಿದರು. ಮದ್ರಾಸಿನವರು ಸ್ವಾಭಾವಿಕವಾಗಿಯೇ ತಮ್ಮ ಹೆಚ್ಚಿನ ಪ್ರದೇಶ ಅಂದರೆ 67 ಗ್ರಾಮಗಳನ್ನು ಮೈಸೂರು ಸಂಸ್ಥಾನಕ್ಕೆ ವಹಿಸುವಾಗ, ಅದರ ಸಂಪೂರ್ಣ ಜನಾಂಗ, ಅಲ್ಲಿ ಅವರಿಗಿರುವ ವರಮಾನ ಕೊಟ್ಟ ಮೇಲೆ, ಆ ಅಂಶವನ್ನು ಪರಿಶೀಲಿಸಿ ನಮಗೆ ಹೆಚ್ಚಿನ ಅನುಕೂಲವಿರುವುದನ್ನು ನಷ್ಟಪಡಿಸಿಕೊಳ್ಳುವುದಕ್ಕೆ ಮೈಸೂರಿನವರಿಗೆ ಒಂದು ಪರಿಹಾರ ಕೂಡ ಕೊಡಬೇಕೆಂದು ಕೆಲವರು ಹೇಳಿದರು. ಅದು ಮೈಸೂರು ಸರ್ಕಾರಕ್ಕೆ ತಪ್ಪಲಿಲ್ಲ ಎಂದು ಈ ಸಮಯದಲ್ಲಿ ತಿಳಿಸಬೇಕಾಗಿದೆ. ಆ ಮೇಲೆ ಇಂಡಿಯಾ ಸರ್ಕಾರದವರು ಆ ಪರಿಹಾರ ಪ್ರಶ್ನೆ ಬೇಡಿ ಎಂದು ಹೇಳಿರುವುದಕ್ಕೆ ಮದ್ರಾಸ್ ಸರ್ಕಾರ ಒಪ್ಪಿ ಅದರ ಮೇಲೆ ಮುಂದುವರೆದರು.

ನಂತರ ಪರಿಹಾರದ ಪ್ರಶ್ನೆ ಹೋದರೂ ಗ್ರಾಮಾಂತರಗಳ ವಿಸ್ತೀರ್ಣವನ್ನು ತಿಳಿಯಬೇಕಾದ್ದು ಅವಶ್ಯಕವೆಂದು ಜನಾಬ್ ಇಮಾಂರವರು ತಿಳಿಸಿದರು. ಆದರೆ ಇಂಡಿಯಾ ಸರ್ಕಾರವನ್ನು ಆಡಳಿತದ ದೃಷ್ಟಿಯಿಂದ ಅದನ್ನು ಕೇಳುವುದಕ್ಕೆ ಮುಂದುವರೆದಿಲ್ಲ. Under the powers vested with them, the Government of India have full powers to make any adjustments and re-adjustments. ತಮ್ಮಲ್ಲಿ ವಿಚಾರ ತಿಳಿಸುವುದು ಸೂಕ್ತ ಮುಂದೆ ಸಾಧ್ಯವಾದ ಮಟ್ಟಿಗೆ ಈ ರೀತಿ ಮುಂದುವರೆಯುವುದು ಅನುಕೂಲವೆಂದು ಹೇಳಿದರೂ ಪರಿಹಾರದ ವಿಚಾರ ಸರಿಯಲ್ಲವೆಂದು ಸೂಚನೆ ಕೊಟ್ಟ ಮೇಲೆ ಅವರು ಒಪ್ಪಿದರು. ಒಟ್ಟಿನಲ್ಲಿ ಆ (ಮ್ಯಾಪ್) ಇರುವಾಗ ಕೆಲವು ಸದಸ್ಯರು ವಿರೋಧವಾಗಿ ಅಭಿಪ್ರಾಯಪಟ್ಟವರೂ ಮ್ಯಾಪ್ ನೋಡಿದರೆ, ಇದು ನಮ್ಮ ಸಂಸ್ಥಾನದಿಂದ ಹೊರಗಿರುವುದು, ಒಳಗೆ ತೆಗೆದುಕೊಳ್ಳುವುದಲ್ಲವೆಂದು ತಕ್ಷಣ ಹೇಳುತ್ತಾರೆ. ನಮ್ಮ ಸರ್ಕಾರದಿಂದ ಅವರಿಗೆ ಕೊಡುವ ಪ್ರಶ್ನೆ ಹೇಳುತ್ತಿದ್ದಾಗ ಮೈಸೂರು ಮ್ಯಾಪ್ ಯಾವ ರೀತಿಯಿದೆ, ಕೆಲವು ಜಿಲ್ಲೆಗಳಲ್ಲಿ— ಕೋಲಾರ, ಚಿತ್ರದುರ್ಗ, ಶಿವಮೊಗ್ಗ ಇಂಥ ಕಡೆಗಳಲ್ಲಿರುವುದನ್ನು, ಶ್ರೀ ವೀರಣ್ಣಗೌಡರು ಹೇಳಿದ ಹಾಗೆ ಕ್ರಿಮಿನಲ್ ಕೇಸ್ ಇತ್ಯಾದಿ ಅಕೃತ್ಯ ನಡೆದಾಗ ಎಷ್ಟು ತೊಂದರೆ ಇದೆ ಎಂಬ ವಿಚಾರ ವಿವರಿಸಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈ ಒಂದು ದೊಡ್ಡ ಅಂಶವನ್ನು ಕೂಡ ಮನಸ್ಸಿನಲ್ಲಿಟ್ಟು ಸರಹದ್ದು ಗೊಳಿಸಲ್ಪಟ್ಟಿರುವುದು ನಮಗೇ ಆಗಲಿ, ಅವರಿಗೇ ಆಗಲಿ ಯಾವ ಪ್ರಾಂತ ಸೇರಿದೆಯೋ ಆ ಪ್ರಾಂತ ಕೊಡಬೇಕೆಂದು ತೀರ್ಮಾನ ಮಾಡಿದೆಯೇ ಹೊರತು ಒಂದು ಪ್ರಾಂತ ಹೆಚ್ಚಿಸಬೇಕು ಅಥವಾ ಒಂದು ಪ್ರಾಂತ ಕಡಮೆ ಮಾಡಬೇಕು ಎಂಬ ಒಂದು ದೃಷ್ಟಿಯಿಂದ ಮುಂದುವರಿದಿಲ್ಲ. ವ್ಯಾಪಾರ ದೃಷ್ಟಿಯಿಂದ ಸ್ವಲ್ಪ ಹೇಳಬೇಕಾದರೆ ಲಾಭದಾಯಕವೆಂದು ಎಲ್ಲರೂ ಒಪ್ಪಬೇಕು. ಆ ದೃಷ್ಟಿಯಿಂದ ಜನಾಬ್ ಇಮಾಂರವರು ಬಹಳ ಸಂತೋಷಪಡಬೇಕು.

Sri L. SIDDAPPA.—It is not mere quantity ; we want quality.

ಶ್ರೀ ಎಚ್. ಸಿದ್ದಯ್ಯನವರು.— ನಮಗೆ ಬರುವುದು 67 ; ಕೊಡುವುದು 15. ಈ ಸಂದರ್ಭದಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳುವುದಕ್ಕೆ ಅವಕಾಶವಿತ್ತೆಂದು ಒಂದು ವಾದ ಸೂಕ್ಷ್ಮವಾಗಿ ಹೇಳಿದ್ದಾರೆ. ನಮಗೆ ಬರುವ ವಿಸ್ತೀರ್ಣ 30 ಸಾವಿರ; ನಾವು ಕೊಡಬೇಕಾದ್ದು ಸುಮಾರು 8,800 ಎಕರೆ. ಜನಾಂಗ ಒಂದಕ್ಕೆ ಎರಡರಷ್ಟು ನಮಗೆ ಬರುತ್ತದೆ. ಮತ್ತು ಅಲ್ಲಿಯ ಜನರು ಬಹಳ ಪುಣ್ಯವಂತರಾಗಿದ್ದಾರೆಂದು ಗೊತ್ತಾಗಿದೆ. ಆದರೆ ಮುಂಚಿತವಾಗಿ ಬಡವರೇ ಬೇಕು, ಅಥವಾ ಶ್ರೀಮಂತರೇ ಬೇಕು ಎಂಬ ದೃಷ್ಟಿ ಇಲ್ಲ. ಅವರಿಗೆ ತಕ್ಕ ಸೌಕರ್ಯ ಕೊಡಬೇಕು, ರಸ್ತೆ ಆಗಬೇಕು, ಅವರು ಬಹಳ ದುಸ್ಥಿತಿಯಲ್ಲಿದ್ದಾರೆ. ಅವರಿಗೆ ಹಾಗೆ ಅನುಕೂಲ ಮಾಡಿ ಕೊಡುವಾಗ ನಮ್ಮ ಹಣ ಹೆಚ್ಚು ಖರ್ಚು ಮಾಡಬೇಕು ಎಂದು ವಾದ ಹೂಡಿದ್ದಾರೆ. ಆದರೆ ಆ ರೀತಿಯಾಗಿ ಪರಿಣಮಿಸಿಲ್ಲ. ಇದನ್ನು ಕೂಲಂಕಷವಾಗಿ ಸರ್ಕಾರದವರು ಪರಿಶೀಲಿಸಿದ್ದಾರೆಂದು ಹೇಳಬೇಕಾಗಿದೆ.

ಎರಡನೆಯದಾಗಿ, ಶ್ರೀ ಎ. ಭೀಮಪ್ಪನಾಯಕರು ಸ್ವಲ್ಪಮಟ್ಟಿಗೆ ಅವಕ್ಕೆ ಸಹಾನುಭೂತಿ ವ್ಯಕ್ತಪಡಿಸಿದ್ದಾರೆ. ಕಾರಣ, ಅವರ ದೃಷ್ಟಿಯಿಂದ ಅದು ನ್ಯಾಯವಾಗಿದೆ. ನನಗೂ ಸಹ ಸಹಾನುಭೂತಿಯಿದೆ. ಏಕೆಂದರೆ, ಕೆಲವು ಕಾಲದಿಂದ ಮೊಳಕಾಲ್ಮುರು ತಾಲ್ಲೂಕಿಗೆ ಸೇರಿ ಮದ್ರಾಸು ಪ್ರಾಂತದಲ್ಲಿರುವ 6 ಗ್ರಾಮಸ್ಥರಿಗೂ ಇಲ್ಲೇ ರೂಢಿಯಾಗಿದೆ. ಸ್ವಲ್ಪ ಚೆನ್ನಾಗಿ ಸಂಪರ್ಕವಿಟ್ಟುಕೊಂಡು ಇಲ್ಲೇ ಓಡಾಡುತ್ತಿದ್ದ ಜನರಿಗೆ ಇಲ್ಲೇ ಇರಬೇಕೆಂಬ ಅಭಿಲಾಷೆಯಿರುವುದು ಸ್ವಾಭಾವಿಕವಾಗಿಯೇ ಇದೆ. ಮತ್ತು ಚರಿತ್ರಾರ್ಹ

ವಾದ ಅಂಶ ಹೇಳಿದ್ದಾರೆ. ಆ ಆರು ಗ್ರಾಮದ ಜನರಿಗೆ ಮೈಸೂರು ಸರ್ಕಾರಕ್ಕೆ ಸೇರಬೇಕೆಂಬ ಆಕಾಂಕ್ಷೆ ಮತ್ತು ಆಸೆ ಇಗುವುದರಿಂದ ಮತ್ತು ಈ ಸಂಸ್ಥಾನದಲ್ಲೇ ಬಹಳ ಕಾಲವಿರಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರ ಮೇಲೆ, ಸರ್ಕಾರದವರು ಇಂಡಿಯಾ ಸರ್ಕಾರದವರೊಂದಿಗೆ ಆಲೋಚಿಸಿ ಸಾಧ್ಯವಾದರೆ ಅವನ್ನು ನಮ್ಮಲ್ಲೇ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆಂದು ಅವರಿಗೆ ಭರವಸೆ ಕೊಡುತ್ತೇನೆ.

ಇನ್ನೊಂದು ಅಂಶವನ್ನು ಸೂಚಿಸಿದ್ದಾರೆ. ಶಾಸನಸಭೆಗಳ ಅಭಿಪ್ರಾಯ ಪಡೆಯಬಹುದಾಗಿತ್ತು ಎಂದು ಹೇಳಿದ್ದಾರೆ. ಆದರೆ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ ಆಗ ಇರಲಿಲ್ಲ, ಎಂದು ಹೇಳಬೇಕಾಗಿದೆ.

Janab J. MAHOMED IMAM.—Legislatures will never die.

ಶ್ರೀ ಎಚ್. ಸಿದ್ದಯ್ಯನವರು. ಶಾಸನ ವಿಧಾಯಕ ಸಭೆಯಿದ್ದರೂ ಅದರ ಅಧಿವೇಶನ ಇರಲಿಲ್ಲ. ಇದು ಬಹಳ ಜಾಗ್ರತೆ ಆಗಬೇಕಾಗಿಬಂತು. 21-1-1950ರಲ್ಲೇ ತೀರ್ಮಾನವಾಗಬೇಕಾಗಿತ್ತು. ಆ ಕಾರಣದಿಂದ ಇಂಡಿಯಾ ಸರ್ಕಾರದವರು ಆತುರ ಮಾಡಿದ್ದರಿಂದ ಅವಕ್ಕೆ ಒಪ್ಪಿಗೆ ಕೊಡಬೇಕಾಯಿತು. ನಮಗಿಂತ ಮುಂಚೆ ಇಷ್ಟೊಂದು ಭಾರಿ ಪ್ರದೇಶ, ಜನಾಂಗ, ವರಮಾನ ಕಳೆದುಕೊಂಡ ಮದರಾಸು ಸರ್ಕಾರದವರು 13-'-1950ರಲ್ಲೇ ಒಪ್ಪಿಗೆ ಕೊಟ್ಟರು. ಆದ್ದರಿಂದ ಸುಮಾರು 17-1-1950ರಲ್ಲೇ ನಾವೂ ಒಪ್ಪಿದೆವು. ಇಂಡಿಯಾ ಸರ್ಕಾರದವರು 21-1-1950ರಲ್ಲೇ ಆಗಬೇಕೆಂದು ಹೇಳಿದ್ದರಿಂದ ಆ ರೀತಿ ಮಾಡಿದೆವು. ಆದ್ದರಿಂದ ಈ ಗ್ರಾಮಸ್ಥರ ಅಭಿಪ್ರಾಯವು ಈಗಾಗಲೇ ತಿಳಿದಿರುವುದರಿಂದ ನಾವು ಇಂಡಿಯಾ ಸರ್ಕಾರದೊಂದಿಗೆ ಪ್ರಯತ್ನಪಟ್ಟು, ಈ ಗ್ರಾಮಗಳನ್ನು ಕೂಡ ಸಾಧ್ಯವಾದರೆ ನಮ್ಮಲ್ಲೇ ಉಳಿಸಿಕೊಳ್ಳುವುದಕ್ಕೆ ಸಾಹಸಮಾಡುತ್ತೇವೆಂದು ಭರವಸೆ ಕೊಟ್ಟರೆ ಸಾಕಾಗಿದೆ.

Sri M. GOVINDA REDDY (Chitaldrug District-General).—Sir, will the history and antecedents of these villages also play a part in coming to this arrangement?. Will they also influence the decision on this matter?

Sri H. SIDDAIYA.—Yes.

Janab J. MAHOMED IMAM.—Sir, I am glad that the Revenue Minister is going to take up this question seriously for reconsideration............

Sri T. SUBRAMANYA.—............ relating only to Molakalmuru Taluk.

Janab J. MAHOMED IMAM.—I may tell him that he will have the full support and co-operation of all of us. In view of this assurance, I withdraw this cut motion.

Sri K. CHENGALARAYA REDDY.—May I personally add that this question has to be resolved in accordance with the Constitution of India?

The Cut motion was, by leave of the Assembly, withdrawn.

Preservation of Avenue Trees.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).— ಸ್ವಾಮಿ ನನ್ನ ಖೋತಾ ಸೂಚನೆಯು ಈ ರೀತಿ ಇದೆ:

"The demand under the head '1. Land Revenue' for Rs. 48,82,000 be reduced by Rs. 100 (to raise a debate on the indiscriminate cutting of avenue trees in the State and for making necessary arrangements to preserve them."

ಸಂಸ್ಥಾನದ ಸಾಲು ಮರಗಳನ್ನು ಕಡಿಯುವುದನ್ನು ತಪ್ಪಿಸಿ, ಅವುಗಳನ್ನು ಸಾರ್ವೋದ್ಧಾರವಾಗಿ ಕಾಪಾಡಿಕೊಂಡು ಬರುವ ವಿಚಾರವನ್ನು ವ್ಯಕ್ತಪಡಿಸಿ ಚರ್ಚಿಸಲು ರೆವೆನ್ಯೂ ಬಾಬಿನಲ್ಲಿರುವ 48,82,000 ರೂಪಾಯಿಗಳಲ್ಲಿ ಒಂದು ನೂರು ರೂಪಾಯನ್ನು ಖೋತಾ ಮಾಡಬೇಕೆಂದು ಈ ಕತ್ತರಿ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ. ಈ ನಿರ್ಣಯದ ವಿಚಾರ ಇಷ್ಟೆ. ಸಂಸ್ಥಾನದ ಸಾಲುಮರಗಳನ್ನು ತಾವು ನೋಡಿರಬಹುದು. ಅವು ಹಿಂದೆ ಇದ್ದಂತೆ ಈಗಿಲ್ಲ. ಅನೇಕ ಮರಗಳನ್ನು ಜನರು ಕಡಿದು ಹಾಳುಮಾಡಿದ್ದಾರೆ. ಅನೇಕ ಕಡೆ ಸಾಲುಮರಗಳೇ ಇಲ್ಲ. ಪೂರ್ವದಲ್ಲಿ ಯಾವ ಉದ್ದೇಶದಿಂದ ಪೂರ್ವಿಕರು ಅವನ್ನು ಹಾಕಿದರೋ ಆ ಉದ್ದೇಶ ಈಗ ನೆರವೇರುತ್ತಿಲ್ಲ. ಅನೇಕ ಕಡೆಗಳಲ್ಲಿ, ನೆರಳಿಗಾಗಿ ಮಾಡಿದ ಮರಗಳು ಈ ದಿವಸ ಒಂದೂ ಇಲ್ಲ. ಬೇಸಿಗೆ ಕಾಲದಲ್ಲಿ ನೆರಳಿಗಾಗಿ ಬೇಕಾದ ಸಾಲುಮರಗಳು ಒಂದು ವೇಳೆ ಒಣಗಿ ಹೋದರೂ ಹೊಸದಾಗಿ ಹಾಕುತ್ತಿಲ್ಲ. ಆಡಳಿತ ಕ್ರಮ ಕೂಡ ಕೆಟ್ಟಿದೆ. ಏಕೆಂದರೆ, ಹರಾಜು ವಗೈರೆ ರೆವೆನ್ಯೂ ಬಾಬಿಗೆ ಸೇರುತ್ತದೆ. ರಸ್ತೆ ಆಡಳಿತ ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಸೇರಿದೆ. ಒಂದೇ ಇಲಾಖೆಗೆ ಇವೆರಡು ಬಾಬೂ ಸೇರಿರುವುದಿಲ್ಲ. ಹೀಗೆ ಎರಡು ಇಲಾಖೆಗಳಿಗೆ ಇದರ ಆಡಳಿತ ಒಳಪಟ್ಟಿರುವುದರಿಂದಲೇ ಸಾಲುಮರಗಳ ಕಡೆ ಸರಿಯಾದ ನಿಗಾ ಇಲ್ಲವೆಂದು ಹೇಳಬಹುದು. ಆದ್ದರಿಂಧ ಅವುಗಳ ಉದ್ಧಾರಕ್ಕೆ ಮತ್ತು ಜವಾಬ್ದಾರಿಗೆ ಒಂದು ಕ್ರಮವನ್ನು ಸೂಚಿಸಬೇಕಾಗಿದೆ. ಒಂದೇ ಇಲಾಖೆಗೆ ಇದರ ಆಡಳಿತವನ್ನು ವಹಿಸಬೇಕು. ಹಾಗೆ ಮಾಡುವಾಗ ಆ ಒಂದು ಇಲಾಖೆಗೆ ಅದರಿಂದ ಬರುವ ವರಮಾನ ಖರ್ಚು ವಹಿಸಿದರೆ ಚೆನ್ನಾಗಿ ಆಡಳಿತ ನಡೆಸಿಕೊಂಡು ಬರಲು ಅವಕಾಶವಾಗುತ್ತದೆ ಮತ್ತು ಅವರ ಮೇಲೆ ಜವಾಬ್ದಾರಿಯೂ ಇರುತ್ತದೆ. ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಪ್ರತಿನಿತ್ಯವೂ ರಸ್ತೆ ಕಾಮಗಾರಿಗಾಗಿ ಹೋಗುತ್ತಾರೆ. ರೆವೆನ್ಯೂ ಇಲಾಖೆಯವರು ಯಾವಾಗಲೋ ಆರು ತಿಂಗಳಿಗೊಂದು ಸಾರಿ ಹೋಗುತ್ತಾರೆ. ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಆ ಸಾಲುಮರಗಳನ್ನು ಯಾರಾದರೂ ಕತ್ತರಿಸಿಕೊಂಡು ಹೋದರೂ ಕೂಡ ಕೇಳುತ್ತಿಲ್ಲ. ಅದಕ್ಕೆ ಕಾರಣ ಇದು ಅವರ ಜವಾಬ್ದಾರಿ ಅಲ್ಲ. ಹೀಗಾಗಿ ಅನೇಕ ಮರಗಳು ಹಾಳಾಗುವುದಕ್ಕೆ ಅವಕಾಶವಿದೆ. ಆದ್ದರಿಂದ ಇವರ ಜವಾಬ್ದಾರಿಯನ್ನು ಒಂದೇ ಇಲಾಖೆಯ ಆಡಳಿತಕ್ಕೆ ವಹಿಸುವ

ವಿಚಾರದಲ್ಲೂ, ಸಾಲುಮರಗಳನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲೂ ಮತ್ತು ಇನ್ನೂ ಹೆಚ್ಚು ಹೆಚ್ಚಾಗಿ ಮರಗಳನ್ನು ನೆಡಿಸತಕ್ಕ ವಿಚಾರದಲ್ಲೂ ಸರ್ಕಾರದವರು ತೀವ್ರಗಮನ ಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ಎಷ್ಟೇ ಖರ್ಚಾದರೂ ಸರಿಯೇ ಸರ್ಕಾರದವರೂ ಸಾಧ್ಯವಾದಷ್ಟು ಸಾಲುಮರಗಳನ್ನು ಹಾಕುವುದು ಧರ್ಮ. ಅದರಿಂದ ಬೇಕಾದಷ್ಟು ಉತ್ಪತ್ತಿ ಬರುತ್ತದೆ. ಹಳೇ ಮರಗಳನ್ನು ತೆಗೆಸಿ ಹೊಸ ಮರಗಳನ್ನು ಹಾಕಿ ದೇಶದ ಏಳಿಗೆಗೆ ಸಹಾಯಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—Cut Motion moved:

"That the demand under the head '1. Land Revenue' for Rs. 43,82,000 be reduced by Rs. 100."

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ಮರಗಳ ವಿಷಯದಲ್ಲಿ ಶ್ರೀಮಾನ್ ಹೊನ್ನಪ್ಪನವರು ತಂದಿರತಕ್ಕ ಈ ಕತ್ತರಿ ನಿರ್ಣಯವನ್ನು ಪೂರ್ಣವಾಗಿ ಅನುಮೋದಿಸುತ್ತೇನೆ. ಇದಕ್ಕೆ ಹಲವಾರು ಕಾರಣಗಳಿವೆ. ಸಾಧಾರಣವಾಗಿ ರಸ್ತೆಯ ಪಕ್ಕದಲ್ಲಿರತಕ್ಕ ಮರಗಳು ನಮ್ಮ ದೇಶಕ್ಕೆ ಒಂದು ದೊಡ್ಡ ಸ್ವತ್ತು ಎಂದು ಭಾವಿಸಿದರೆ ತಪ್ಪಾಗಲಾರದು. ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕ ಮರಗಳು ಇವತ್ತು ರಸ್ತೆಗಳ ಪಕ್ಕದಲ್ಲಿವೆ ಎಂಬುದನ್ನು ಸರ್ಕಾರದವರು ಖಂಡಿತವಾಗಿ ಗಮನಿಸಬೇಕು. ಈಗ ಎಲ್ಲಿ ನೋಡಿದರೂ ಏನು ಕಾಣುತ್ತಿದೆ ಎಂದರೆ ದಾರಿಯುದ್ದಕ್ಕೂ ಮೋಟಕುಮಾಡಿವ ಮರಗಳೇ. ಎಲೆಗಳಿಂದ ನೆರಳು ಆಗತಕ್ಕ ಮರಗಳು ಬಹಳ ಕಡಮೆ. ಅದಕ್ಕೆ ಕೆಲವು ಕಾರಣಗಳನ್ನು ಹೇಳಿದರು. ದ್ವಿಮುಖವಾದ ಆಡಳಿತ ಇದ್ದರೆ ಯಾರು ಅದರ ಜವಾಬ್ದಾರಿ ವಹಿಸಿ ನೋಡಿಕೊಳ್ಳಬೇಕು ಎಂಬುದು ಕಷ್ಟವಾಗಿ, ಅವರ ಮೇಲೆ ಇವರು, ಇವರ ಮೇಲೆ ಅವರು, ತಪ್ಪುಹಾಕಿ ಪ್ರಯೋಜನವಾಗುತ್ತಾ ಇಲ್ಲ ಎಂದು ರಸ್ತೆ ಮರಗಳ ವಿಷಯ ಏಕೆ ಹೀಗಾಗಿದೆ ಎಂದರೆ, ಕೆಲವು ಸಂದರ್ಭಗಳಲ್ಲಿ ರಸ್ತೆಯ ಪಕ್ಕದಲ್ಲಿ ಹಿಡುವಳಿ ಜಮೀನು ಇದೆ ಎಂಬುದು ಬಹುಮಟ್ಟಿಗೆ ನಿಜ. ಆ ಹಿಡುವಳಿ ಜಮೀನುದಾರರಿಗೆ ಈ ಮರಗಳ ಮೇಲೆ ಹಕ್ಕು ಇರುವುದಿಲ್ಲ. ಅವರು ಸರ್ಕಾರದವರಿಗೆ ಆ ಮರಗಳು ನಮ್ಮ ಪೂರ್ವೀಕರು ಹಾಕಿದ್ದು ಎಂಬ ರುಜುವಾತು ಕೊಟ್ಟರೆ ಹಿಡುವಳಿದಾರರಿಗೇ ಸೇರಬೇಕೆಂದು ಮಾಡುತ್ತಾರೆ ಇಲ್ಲದೇ ಇದ್ದರೆ ಇಲ್ಲ. ಅನೇಕ ಸಂದರ್ಭಗಳಲ್ಲಿ ರುಜುವಾತು ಒದಗಿಸುವುದು ಕಷ್ಟ. ಊರಿನವರು ಮೂಗರ್ಜಿ ಹಾಕುತ್ತಾರೆ. ಅವರದೇ ಆಗಿದ್ದರೂ ಅವರದಲ್ಲ ಎಂದು ಹೇಳಿ ಹರಾಜುಮಾಡುತ್ತಾರೆ. ಆದ್ದರಿಂದ ಆ ಜಮೀನ್ದಾರರಿಗೆ ನಿಗಾ ಇಡಬೇಕೆಂದು ಆಸಕ್ತಿ ಇರುವುದಿಲ್ಲ. ಯಾರೋ ತೆಗೆದುಕೊಳ್ಳುತ್ತಾರೆ, ನಮಗೇನು ಎಂದು ಉದಾಸೀನಮಾಡುತ್ತಾರೆ. ದೊಡ್ಡ ದೊಡ್ಡ ಮರಗಳು ಅನೇಕ ಸಂದರ್ಭಗಳಲ್ಲಿ ಒಣಗದೇ ಇದ್ದರೂ ಕಡಿದುಹಾಕುವುದರಿಂದ ನಷ್ಟವಾಗುತ್ತಿದೆ.

ಎರಡನೆಯದಾಗಿ ಗ್ರಾಮಪಂಚಾಯಿತಿಯವರಿಗೇ ....

Mr. SPEAKER.—Hon'ble Member cannot make a new suggestion.

ಶ್ರೀ ಕೆ. ಸುಬ್ಬರಾಯರು.—'Preservation of trees' ಯಾವ ರೀತಿ ಮಾಡಬೇಕು ಎನ್ನುವುದನ್ನು ಅವರು ಹೇಳಿದ್ದಾರೆ. ನಾನು ಹೇಳುವುದೇನೆಂದರೆ ಅದರ ಆಡಳಿತವನ್ನು...............

Mr. SPEAKER.—Hon'ble Member cannot go beyond what the mover has said. ಮರಗಳು ಉಳಿಯಬೇಕಾದರೆ ಅದರ ಮೇಲಿನ ಜವಾಬ್ದಾರಿ ರೆವೆನ್ಯೂ ಇಲಾಖೆಗೆ ಇರುವುದು ಸರಿಯಲ್ಲ. ಪಬ್ಲಿಕ ವರ್ಕ್ಸ್ ಇಲಾಖೆಗೆ ವಹಿಸಿಕೊಡಬೇಕೆಂದು ಅವರು ಹೇಳಿದ್ದಾರೆ. ಅದು ಅವರ ಸೂಚನೆ.

ಶ್ರೀ ಕೆ. ಸುಬ್ಬರಾಯರು.—ಹಾಗಾದರೆ ಆಡಳಿತ ಯಾರಿಗೆ ಇರಬೇಕೆಂಬ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳುವುದಿಲ್ಲ. ಒಂದು ಗಾದೆ ನನಗೆ ಜ್ಞಾಪಕಕ್ಕೆ ಬರುತ್ತದೆ. "ಹೊಟ್ಟೆಗೆ ಹಿಟ್ಟು ಇಲ್ಲದೇ ಇದ್ದರೂ ಜುಟ್ಟಿಗೆ ಮಲ್ಲಿಗೆ ಹೂವು" ಎನ್ನುವ ಹಾಗೆ, ರಸ್ತೆಗಳ ಪಕ್ಕದಲ್ಲಿ ಸುಂದರವಾಗಿ ಕಾಣುವ, ಅಲಂಕಾರವಾದ ಮರಗಳನ್ನು ಹಾಕುತ್ತಿದ್ದಾರೆ. ಇದು ಯಾವ ಇಲಾಖೆಯವರ ಆಡಳಿತಕ್ಕೆ ಹೋಗಲಿ, ಉಪಯೋಗ[illegible]ವಂಥ ಮರಗಳನ್ನು ಹಾಕಿದರೆ ಬಹುಮಟ್ಟಿಗೆ ಪ್ರಯೋಜನವಾಗುತ್ತದೆ. ಹೊಂಗೆ, ಹುಣಸೇ, ಮಾವು ಇತ್ಯಾದಿ ಮರಗಳನ್ನು ಬೆಳೆಸಿದರೆ ಒಳ್ಳೆಯದು. ಮರಮುಟ್ಟುಗಳಿಗೆ ಬರುತ್ತದೆ. ಆಗಸ್ಟ್ 15 ಮತ್ತು ಜನವರಿ 26ನೇ ತಾರೀಖುಗಳಲ್ಲಿ ಯಾವ ಮರ ಬಿದ್ದುಹೋಗಿದೆಯೋ ಆ ಜಾಗದಲ್ಲಿ ಹೊಸ ಗಿಡ ನೆಡುವ ಕಾರ್ಯ ನಡೆಯಿತು. ಅದರ ವೈಚಿತ್ರ್ಯ ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಆಲದ ಮರದ ಕೊನೆ, ಬೇವಿನ ಮರದ ಕೊನೆ ಹಾಕಿದ್ದಾರೆ, ಅದು ಚಿಗುರುವ ಹಾಗಿಲ್ಲ, ದೊಡ್ಡದಾಗುವ ಹಾಗಿಲ್ಲ. ಈ ಸ್ಥಿತಿಯಲ್ಲಿದೆ. ಇದಕ್ಕೆ ಬದಲಾಗಿ ಅರಣ್ಯ ಇಲಾಖೆಯವರಿಗೆ.........

Mr. SPEAKER.—Hon'ble Member cannot make a new suggestion.

ಶ್ರೀ ಕೆ. ಸುಬ್ಬರಾಯರು.—ಇದು ಹೊಸ ಸಲಹೆ ಅಲ್ಲ. ಮರಗಳನ್ನು ನೆಡತಕ್ಕ ವಿಧಾನದಲ್ಲೂ ಮತ್ತು ಪೋಷಣೆಮಾಡತಕ್ಕ ವಿಧಾನದಲ್ಲೂ ಸರಿಯಾದ ಕ್ರಮವನ್ನನುಸರಿಸಿ ಮಾಡಬೇಕು. ರಸ್ತೆ ಪಕ್ಕದಲ್ಲೂ ಮತ್ತು ಜಮೀನುಗಳ ಮಗ್ಗುಲಲ್ಲೂ ಇರತಕ್ಕ ಮರಗಳ ಉಸ್ತುವಾರಿಯನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೂ ಮತ್ತು ಆಯಾಯಾ ಜಮೀನುಗಳವರಿಗೂ ವಹಿಸಿಕೊಟ್ಟರೆ ಅವರಿಗೆ ಉತ್ಸಾಹ, ಶ್ರದ್ಧೆ ಇರುತ್ತದೆ. ಚೆನ್ನಾಗಿ ನೋಡಿಕೊಳ್ಳುತ್ತಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೆ ಗ್ರಾಮಾಂತರ ರಸ್ತೆಗಳ ಮೇಲೆ ಪೂರ್ಣ ಹತೋಟಿ ಇರುವುದರಿಂದ ಅವರು ಪಂಚಾಯ್ತಿಗಳವರಿಗೂ ವಹಿಸಿಕೊಡಬಹುದು. ಅದರಿಂದ ಏನೂ ಬಾಧಕವಿಲ್ಲ. ಆ ಪ್ರಾಂತ್ಯಗಳಲ್ಲಿ ಹಳ್ಳಿಯವರಿಗೂ, ರೈತರಿಗೂ ಪ್ರಯೋಜನವಾಗುತ್ತದೆ. ಈ ರೀತಿ ಸೂಕ್ತ ಬದಲಾವಣೆ ಮಾಡಿದರೆ ಮರಗಳ ಅಭಿವೃದ್ಧಿಯಾಗುತ್ತದೆಂದು ಹೇಳುತ್ತೇನೆ.

*ಶ್ರೀ ಟಿ ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ನಮ್ಮ ದೇಶದಲ್ಲಿ ಸಾಲುಮರಗಳನ್ನು ಬಹಳ ಕಾಲದಿಂದಲೂ ಒಂದು ಪವಿತ್ರ ವಸ್ತುವಿನಂತೆ ಭಾವಿಸಿ ಕಾಪಾಡಿಕೊಂಡು ಬರುತ್ತಾ ಇದ್ದಾರೆ. ನಮ್ಮ ಹಿರಿಯರು ಅಷ್ಟೆ ಅಲ್ಲ. ಹಿಂದೆ ಕಮಿಷನರ ಕಾಲದಲ್ಲೂ ಕೂಡ ಸಾಲುಮರಗಳ ಅಭಿವೃದ್ಧಿ ಮತ್ತು ಪೋಷಣೆಗೆ ನಿಗಾ ಕೊಡತಕ್ಕ ವಿಚಾರದಲ್ಲಿ ಎಷ್ಟುಮಟ್ಟಿಗೆ ಅವರು ಕಣ್ಣಿನಲ್ಲಿ ಕಣ್ಣಿಟ್ಟು ನೋಡುತ್ತಾ ಇದ್ದರು ಎಂಬುದನ್ನು ನಾವೆಲ್ಲರೂ ಕೇಳಿದ್ದೇವೆ. ಹೀಗಿರಬೇಕಾದರೆ ಹಠಾತ್ತಾಗಿ ಯುದ್ಧ ಪ್ರಾರಂಭವಾದ ಮೇಲೆ ಈ ವೃಕ್ಷ ಸಂಪತ್ತನ್ನು ನಿರ್ಮೂಲಮಾಡುವುದಕ್ಕೆ ಜನ ಪ್ರಯತ್ನಪಟ್ಟು, ಈ ದಿನ ಈ ಸಾಲುಮರಗಳ ಸ್ಥಿತಿಯನ್ನು ನೋಡಿದರೆ ಕಣ್ಣಿನಲ್ಲಿ ನೀರು ಬರುವುದಕ್ಕೆ ಬದಲಾಗಿ ರಕ್ತ

ಬರುತ್ತದೆ. ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕ ನಮ್ಮ ದೇಶದ ಆಸ್ತಿ ಈ ಸಾಲುಮರಗಳು. ಈ ಆಸ್ತಿ ಅನ್ಯಾಯವಾಗಿ ಹಾಳಾಗುತ್ತಿರುವುದನ್ನು ಅಧಿಕಾರಿಗಳು, ಖಾಸಗಿಯವರು ಮತ್ತು ಅದನ್ನು ಯಾರು ಸಂರಕ್ಷಣೆಮಾಡಬೇಕೋ ಅವರು ಎಲ್ಲರೂ ಪ್ರತಿದಿನವೂ ನೋಡುತ್ತಿದ್ದರೂ ಕೂಡ ಏನು ಒಂದು ನಿಗಾ ಕೊಡಬೇಕೋ, ಯಾವ ಎಚ್ಚರಿಕೆ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳುತ್ತಿಲ್ಲವಲ್ಲಾ ಎಂದು ಬಹಳ ವಿಷಾದದಿಂದ, ಒಂದು ಸಂಕಟದಿಂದ ಹೇಳಬೇಕಾಗುತ್ತದೆ. ಇಷ್ಟು ಕೋಟ್ಯಾಂತರ ರೂಪಾಯಿಗಳ ಆಸ್ತಿ ಹೋಗುತ್ತಾ ಇರುವಾಗ ಏಕೆ ಸರ್ಕಾರದವರು ನಿಗಾ ಕೊಡುತ್ತಿಲ್ಲವೋ ನನಗಂತೂ ಅರ್ಥವಾಗುತ್ತಿಲ್ಲ. ಒಂದು ಮಾತು ನಿಜ. ದೇಶದಲ್ಲಿ ಸೌದೆ ಅಭಾವ ಜಾಸ್ತಿ, ಪಟ್ಟಣಗಳವರಿಗೂ ಮತ್ತು ಫ್ಯಾಕ್ಟರಿಗಳವರಿಗೂ ಸೌದೆ ಬೇಕು. ಸೌದೆ ಬೇಕಾದರೆ ಯಾವ ರೀತಿ ಸಂಪಾದನೆಮಾಡಿಕೊಳ್ಳಬೇಕೋ ಆ ರೀತಿ ಮಾಡಿಕೊಳ್ಳುವುದನ್ನು ಬಿಟ್ಟು, ಕಾಳಸಂತೆ ವ್ಯಾಪಾರ ಮಾಡತಕ್ಕವರು ಮತ್ತು ಇತರ ಕೆಲವು ಜನಗಳು ಇದೇ ಒಂದು ದೊಡ್ಡ ವ್ಯಾಪಾರವಾಗಿಟ್ಟುಕೊಂಡು ಈ ಸಾಲುಮರಗಳನ್ನು ಕಡಿಯುತ್ತಾ ಇದ್ದಾರೆ.

ತಾವು ಇದರ ಬಗ್ಗೆ ಆದಷ್ಟು ಜಾಗ್ರತೆ ಕಾರ್ಯಕ್ರಮವನ್ನು ಕೈಗೊಳ್ಳದಿದ್ದರೆ ನಿಜವಾಗಿಯೂ ಒಂದು ದೊಡ್ಡ ಆಸ್ತಿ ನಿರ್ನಾಮವಾಗಿ ಹೋಗುತ್ತದೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಈಗಾಗಲೇ ಸೇಕಡ 60ರಷ್ಟು ಮರಗಳು ನಿರ್ನಾಮವಾಗಿ ಹೋಗಿವೆ. ಈ ದಿವಸವಿದ್ದ ಮರಗಳನ್ನು ನಾಳೆ ಹೋಗಿ ನೋಡಿದರೆ ಅವು ಇದ್ದ ಸ್ಥಳದಲ್ಲಿ ಇರುವುದೇ ಇಲ್ಲ. ಕೆಲವರು ಮಚ್ಚಿನಿಂದ ಅಲ್ಲಲ್ಲೇ ಕತ್ತರಿಸಿರುತ್ತಾರೆ. ಇನ್ನು ಕೆಲವು ಕಡೆ ದೊಡ್ಡ ದೊಡ್ಡ ಗರಗಸಗಳನ್ನು ತೆಗೆದುಕೊಂಡು ಹೋಗಿ ಕೊಯ್ದಿರುವ ಗುರುತುಗಳೂ ಅಲ್ಲಲ್ಲೇ ಕಂಡುಬರುತ್ತಿವೆ. ಹೀಗೆ ದೊಡ್ಡ ದೊಡ್ಡ ಮರಗಳೆಲ್ಲ ಹಾಳಾಗಿ ಹೋಗಿವೆ. ಇಷ್ಟೆಲ್ಲವನ್ನೂ ಕಣ್ಣಾರೆ ನೋಡಿಕೊಂಡು ಸ್ಥಳದ ಅಧಿಕಾರಿಗಳು, ತಾಲ್ಲೂಕಿನಲ್ಲಿರುವ ಅಧಿಕಾರಿಗಳು ಏನುಮಾಡುತ್ತಿದ್ದಾರೋ ಅದು ನನಗೆ ಗೊತ್ತಾಗುತ್ತಿಲ್ಲ. ಇದರ ಜವಾಬ್ದಾರಿ ರೆವೆನ್ಯೂ ಇಲಾಖೆಯವರ ಮೇಲೆ ಇದೆಯೋ ಅಥವಾ ಮರಾಮತ್ತು ಇಲಾಖೆಯವರ ಮೇಲಿದೆಯೋ ಯಾವುದೂ ಗೊತ್ತೇ ಆಗುವುದಿಲ್ಲ. ಅಂತೂ ಇಂತು ಈ ಬಾಬು ರೆವೆನ್ಯೂ ಇಲಾಖೆಯವರಿಗೇ ಆಗಲಿ, ಮರಾಮತ್ ಇಲಾಖೆಯವರಿಗೆ ಆಗಲೀ, ಅಥವಾ ಪೋಲೀಸ್ ಇಲಾಖೆಯವರಿಗೇ ಆಗಲೀ ಒಬ್ಬರಿಗೂ ಬೇಡವಾಗಿದೆಯೆಂದು ಕಾಣುತ್ತಿದೆ. ಇದು ನಮ್ಮ ಕರ್ತವ್ಯ, ನಮ್ಮ ಜವಾಬ್ದಾರಿಗೆ ಸೇರಿದ್ದು, ಇದನ್ನೆಲ್ಲಾ ನಾವು ನೋಡಿಕೊಳ್ಳಬೇಕು, ನಾವು ಇದನ್ನೆಲ್ಲಾ ನೋಡಿಕೊಳ್ಳದೆ ಕೈಬಿಟ್ಟರೆ ಮೇಲ್ಪಟ್ಟ ಅಧಿಕಾರಿಗಳು ನಮಗೇನು ಮಾಡುತ್ತಾರೋ ಎನ್ನುವ ಭಯ ಕೆಳಗಿನ ಅಧಿಕಾರಿಗಳಿಗಿದ್ದಿದ್ದರೆ ಬಹುಶಃ ಇಷ್ಟೆಲ್ಲಾ ಅನರ್ಥಕ್ಕೆ ಕಾರಣವಾಗುತ್ತಿರಲಿಲ್ಲವೆಂದು ಕಾಣುತ್ತದೆ. ನಮ್ಮ ಹಿಂದಿನವರೂ ಪೂರ್ವೀಕರೂ ಇದನ್ನೆಲ್ಲಾ ಎಷ್ಟು ಪ್ರೀತಿ ವಿಶ್ವಾಸಗಳಿಂದ ನಮಗಾಗಿ ಬೆಳೆಸಿದ್ದರು! ಆದರೆ ನಾವು ಅದನ್ನು ಸಂರಕ್ಷಣೆಮಾಡಿಕೊಂಡು ಬಾರದಿದ್ದುದರ ಅನರ್ಥಗಳು ನಮಗೀಗ ಕಂಡುಬರುತ್ತಿವೆ. ಎಲ್ಲೆಲ್ಲಿ ಸಾಲುಮರಗಳು ಇರುವುದಿಲ್ಲವೋ ಅಲ್ಲೆಲ್ಲಾ ಮಳೆ–ಬೆಳೆ ಕಡಿಮೆಯಾಗಿ, ಧನಧಾನ್ಯ ಸಂವೃದ್ಧಿ ಇಲ್ಲದೆ ಹೋಗುತ್ತದೆಂದು ಶಾಸ್ತ್ರೋಕ್ತವಾಗಿ ತಿಳಿಸಿದ್ದಾರೆ. ನಾವು ಇದಕ್ಕಾಗಿ ವಿಶ್ವಪ್ರಯತ್ನಗಳನ್ನೂ ಮಾಡಬೇಕಾಗಿದೆ. ಇದಕ್ಕಾಗಿಯೇ ಹಿಂದಿನಿಂದಲೂ ಸರ್ಕಾರದವರು ಒಂದು ಒಂದೂವರೆ ಲಕ್ಷ ಮರಗಳನ್ನು ಹಾಕಿ ಬೆಳೆಸಿಕೊಂಡು ಬಂದಿದ್ದಾರೆ. ಹಾಗೆ ಮೊದಲಿಂದಲೂ ಹೆಚ್ಚಿನ ನಿಗಾವಣೆಯಲ್ಲಿ ಬೆಳಸಿಕೊಂಡು ಬಂದಿರುವ ಮರಗಳು ನಿರ್ನಾಮವಾಗದಂತೆ ನೋಡಿಕೊಳ್ಳಲು ಅನುಕೂಲವಾಗಲೆಂದು ಈ ಕತ್ತರಿ ನಿರ್ಣಯವನ್ನು ಮಾನ್ಯಸದಸ್ಯರು ಸದುದ್ದೇಶದಿಂದ ತಂದಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಈ ಬಗ್ಗೆ ನಾನು ಈ ಒಂದೆರಡು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತಂದು ಈ ಕತ್ತರಿ ನಿರ್ಣಯಕ್ಕೆ ಸಂಪೂರ್ಣ ಬೆಂಬಲವನ್ನು ನೀಡುತ್ತೇನೆ.

* ಜನಾಬ್ ಜೆ. ಮಹಮದ್ ಇಮಾಂರವರು.—ಸ್ವಾಮಿ, ಈ ಕತ್ತರಿ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಪುಷ್ಟೀಕರಿಸುತ್ತ ಈಗಾಗಲೆ ಶ್ರೀಮಾನ್ ಮಾದಯ್ಯಗೌಡರು ಏನ ಹೇಳಿದ್ದಾರೋ ಅದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲವೆಂದು ಹೇಳುತ್ತೇನೆ. ವಾಸ್ತವವಾಗಿ ನಿಜಾಂಶ ತಿಳಿಸಬೇಕಾಗಿದ್ದರೆ ಅದೂ ಕೂಡ ಇನ್ನೂ ಕಡಿಮೆಯೆಂದೇ ಹೇಳಬೇಕಾಗಿದೆ. ಹಿಂದಿನವರು ಕಷ್ಟಪಟ್ಟು ಬೆಳೆಸಿದ್ದಾರೆ. ನಮಗೆ ಹಾಗೆ ಬೆಳೆಸುವ ಶಕ್ತಿ ಇಲ್ಲದೆಹೋದರೂ ಚಿಂತೆಯಿಲ್ಲ. ಇರುವುದನ್ನಾದರೂ ಸರಿಯಾಗಿ ಕಾಪಾಡಿಕೊಂಡು ಬರುವುದಕ್ಕೆ ಶಕ್ತಿ ಇದೆಯೇ ಎಂದರೆ, ಅದೂ ಕೂಡ ಇಲ್ಲ. ಇತ್ತೀಚೆಗೆ ಕೆಲವು ವರ್ಷಗಳಿಂದಲಂತೂ ಸಾವಿರಾರು ಮರಗಳು ನಿರ್ಮೂಲವಾಗಿ, ನಿರ್ನಾಮವಾಗಿರುತ್ತವೆ.

ಶ್ರೀ ಎಚ್. ಸಿದ್ದಯ್ಯನವರು.—ಯಾವ ಕಡೆಯಲ್ಲಿ?

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಮೊನ್ನೆ ನಾನೂ ಮತ್ತು ಶ್ರೀಮಾನ್ ಭೀಮಪ್ಪನಾಯಕರೂ ಜೊತೆಯಲ್ಲೇ ಹೋಗುತ್ತಿರುವಾಗ ಒಂದೇ ಒಂದು ಮೈಲ್ಲಿಯಲ್ಲಿ ಸುಮಾರು 120 ಸಾಲುಮರಗಳನ್ನು ಕತ್ತರಿಸಿ ಹಾಕಿರತಕ್ಕದ್ದನ್ನು ನೋಡಿರುತ್ತೇವೆ.

ಕೆಲವು ಮಾನ್ಯಸದಸ್ಯರು.—ತಾವು ಬೆಂಗಳೂರು—ಗೋರಿಬಿದನೂರು ರಸ್ತೆಯನ್ನು ನೋಡಿದರೆ ಏನನ್ನುತ್ತೀರೋ?

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಇತ್ತೀಚೆಗೆ ಸ್ವಾತಂತ್ರ್ಯ ಬಂದಮೇಲಂತೂ, ಈ ರಸ್ತೆಮರಗಳು ಹಾಳಾಗುತ್ತಿರುವುದು ವಿಪರೀತವಾಗಿದೆ. ಈ ಅನರ್ಥಗಳಿಗೆಲ್ಲ ಈಗಿರುವ ಸರ್ಕಾರವೇ ಕಾರಣ. ಎಷ್ಟುಸಾರಿ ಮಂತ್ರಿಗಳೂ ಮತ್ತು ಇತರ ಇಲಾಖಾ ಮುಖ್ಯಾಧಿಕಾರಿಗಳೂ ರಸ್ತೆಗಳ ಮೇಲೆ ಪದೇ ಪದೇ ಹೋಗುತ್ತಿಲ್ಲ! ಹೀಗೆ ಪದೇ ಪದೇ ತಾವು ಸಂಚಾರ ಮಾಡುತ್ತಿರುವಾಗ, ಯಾರಾದರೂ ಮಂತ್ರಿಗಳು, ಅಥವಾ ಇತರೇ ಅಧಿಕಾರಿಗಳು, ಏತಕ್ಕೆ ಹೀಗೆಲ್ಲಾ ಈ ಮರಗಳು ಹಾಳಾಗಿವೆ, ನೀವೇನು ಮಾಡುತ್ತಿದ್ದೀರಿ, ಎಂಬುದಾಗಿ ಸ್ಥಳೀಯ ಅಧಿಕಾರಿಗಳನ್ನೇನಾದರೂ ದಂಡಿಸಿ, ಹಾಗೆ ಯಾರಿಗಾದರೂ ಏನಾದರೂ ಶಿಕ್ಷೆಗಳನ್ನು ವಿಧಿಸಿದ್ದಾರೆಯೇ?

Has any Minister ordered that the cutting of trees must be stopped? The Hon'ble Ministers have travelled hundreds of times on the Bangalore-Harihar Road and thousands of trees are being cut on that road. It is no exaggeration. • In the case of some trees, only branches are cut, and in the case of others they are cut half-way. It is a pitiable sight.

Nobody looks after them. Another thing is :

ಅನೇಕ ಕಡೆ ಜನಗಳು ಕಡಿದು ಹಾಕಿ ಬಿದ್ದು ಹೋಗಿರುವ ನೂರಾರು ಮರಗಳು ಹಾಗೆಯೇ ಬಿದ್ದಿರುತ್ತವೆ. ಅವುಗಳನ್ನೆಲ್ಲಾ ಇವರು ಸೌದೆಗಾಗಿ ಉಪಯೋಗಿಸಬಹುದು. ಸಾವಿರಾರು ಟನ್ನುಗಳಷ್ಟು ಸೌದೆ ಅವುಗಳಿಂದಲೇ ನಮಗೆ ದೊರೆಯುತ್ತದೆ. ಅಂಥಾ ಮರಗಳನ್ನು ಸೌದೆಗಾಗಿ ಈ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವ ಡಿಪೋಗಳಿಗೆ ಒದಗಿಸಲು ಸಾಧ್ಯವಿದೆ ಎಂಬ ಇಷ್ಟು ಅಂಶವನ್ನೂ ಕೂಡ ಸರ್ಕಾರದವರು ತಿಳಿಯದೆ ಹೋಗಿದ್ದಾರೆ.

Let the Minister go and examine the state of things. There are hundreds and thousands of stems, roots and branches lying on the road and you will see the villagers coming there and gradually taking them away. Will the Government think of making use of these stems etc. for fuel supply and getting revenue? Even this thing is not thought of by the Government. Practically, no arrangement is made for the protection of these trees. The avenue trees which are nearer the municipalities and District headquarters have disappeared. Who cut these trees? Police Constables and Sepoys cut these trees. Since the fuel difficulty is increasing, the only source of getting fuel is by these means. People also are responsible. Our people have not got civic responsibility.

ಈ ಮರಗಳನ್ನೆಲ್ಲಾ ಒಂದು ಒಳ್ಳೆಯ ಉದ್ದೇಶ ಸಾಧನೆಗಾಗಿ ಜನರ ನೆರಳಿಗೋಸ್ಕರವಾಗಿ, ಉಪಕಾರವಾಡಲು, ಬೆಳಸಿದ್ದಾರೆ. ಇಂಥಾದ್ದನ್ನು ಕಡಿಯಬಾರದು ಎಂಬ ವಿವೇಕ ಜನಗಳಲ್ಲಿ ಇಲ್ಲದೆ ಹೋಗಿದೆ, ಜನಗಳು ಅಷ್ಟು ಬುದ್ಧಿಯನ್ನು ಉಪಯೋಗಿಸುತ್ತಿಲ್ಲ. ಈ ಕಾಂಗ್ರೆಸ್ ಸರ್ಕಾರ ಬಂದ ಮೇಲಂತೂ ಜನಗಳಲ್ಲಿ ಆ ಹೆದರಿಕೆಯೆಂಬುದೇ ಇರುವುದಿಲ್ಲ. ಪೂರ್ತಿಯಾಗಿ ಹೊರಟೇ ಹೋಗಿಬಿಟ್ಟಿದೆ.

I would make a suggestion. The Revenue Department is being worked much. It is not possible for them to look after these trees. There is perhaps some excuse for them on account of the multifarious duties they have to perform. The Public Works Department also may not be able to look after the trees. I made a suggestion a few years back and I am making the same now. Sri Chennigaramiah is not here. These trees must be entrusted to the charge of the Forest Department with a special staff. Let them appoint one or two men for every hundred or two hundred trees. Let them be paid for their work, and be made responsible for a length of one or two miles. Afforestation, planting of trees and other things must be entrusted to the Forest Department.

Sri T. SUBRAMANYA.—What about the financial implication?

Janab J. MAHOMED IMAM.—If they grow more trees, they will get more revenue. Let them issue an order. Let them make use of these cut trees—stems, branches and all that. They will get thousands of rupees by way of revenue.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಈ ಕತ್ತರಿ ನಿರ್ಣಯವನ್ನು ಪುಷ್ಟೀಕರಿಸುತ್ತ ನಾನು ಒಂದೆರಡು ಮಾತುಗಳನ್ನು ಹೇಳತಕ್ಕದ್ದು ಅತ್ಯಾವಶ್ಯಕವೆಂದು ಕಾಣುತ್ತಿದೆ. ನೂರಾರು ವರ್ಷಗಳಿಂದಲೂ ನೀರೆರದು ಬೆಳೆಸಿಕೊಂಡು ಬಂದಿರುವಂಥ ಮರಗಳೆಲ್ಲ ಕೇವಲ ಒಂದೆರಡು ವರ್ಷಗಳಲ್ಲಿ ನಿರ್ನಾಮವಾಗಿ ಹೋಗಿರುತ್ತವೆಂಬುದನ್ನು ಕೇಳಿದರೆ ಯಾವ ಸದಸ್ಯರಿಗೇ ಆಗಲೀ ಅಥವಾ ಜವಾಬ್ದಾರಿಯನ್ನರಿತಿರುವ ಸರ್ಕಾರಿ ಅಧಿಕಾರಿಗಳಿಗೇ ಆಗಲೀ ಒಂದು ನಿರುತ್ಸಾಹ ಮತ್ತು ವ್ಯಥೆ ಉಂಟಾಗುವುದರಲ್ಲಿ ಸಂದೇಹವೇ ಇಲ್ಲ. ಇಷ್ಟೆಲ್ಲಾ ಅನರ್ಥಗಳಿಗೆ ಯಾರು ಕಾರಣರು? ಏನು! ಅಧಿಕಾರಿಗಳೇ ಕಾರಣರೇ ಅಥವಾ ಯಾರು ಕಾರಣರು ಎಂಬುದನ್ನೆಲ್ಲಾ ವಿಮರ್ಶೆಮಾಡಿದರೆ ಸರ್ಕಾರವೇ ಅದಕ್ಕೆಲ್ಲಾ ಕಾರಣವೆಂದು ಹೇಳಬೇಕಾಗಿದೆ. ಈ ಬಗ್ಗೆ ಇಲ್ಲಿಗೆ 3-4 ವರ್ಷಗಳಿಂದಲೂ ಈ ಅನರ್ಥ ಜರುಗುತ್ತಿರುವುದಕ್ಕೆ ಸರ್ಕಾರದವರು ಹೊರಡಿಸಿರುವ ಒಂದು ಆಜ್ಞೆಯೇ ಕಾರಣವಾಗಿದೆಯೆಂದು ಹೇಳಬಹುದಾಗಿದೆ. ಆ ಹುಕುಂನಲ್ಲಿ ಏನು ತಿಳಿಸಲಾಗಿದೆಯೆಂದರೆ ಇಲ್ಲಿಯವರೆಗೂ ಯಾವ ಯಾವ ರಸ್ತೆ ಮರಗಳು ಯಾರ ಯಾರ ಜಮೀನುಗಳ ಪಕ್ಕಕ್ಕೆ ಇರುತ್ತವೆಯೋ ಅಂಥಾ ಮರಗಳನ್ನು ಅವರೇ ನೋಡಿಕೊಳ್ಳಬೇಕೆಂದೂ, ಅದು ಬಿದ್ದು ಹೋದನಂತರ ಅದನ್ನು ಅವರೇ ತೆಗೆದುಕೊಂಡು, ಆ ಸ್ಥಳದಲ್ಲಿ ಹೊಸದಾಗಿ ಮರವನ್ನು ನೆಟ್ಟು, ಅದಕ್ಕೆ ನೀರು ಹಾಕಿ, ಅದನ್ನು ಬೆಳೆಸಬೇಕೆಂಬುದು ಹಿಂದಿನಿಂದಲೂ ವಾಡಿಕೆಯಾಗಿ ಬಂದಿದ್ದನ್ನು ತಪ್ಪಿಸಿ, ಆ ಮರಗಳೆಲ್ಲ ಸರ್ಕಾರಕ್ಕೇ ಸೇರಬೇಕೆಂದೂ ಅಂಥಾ ಮರಗಳ ಮೇಲೆ ಅಕ್ಕ ಪಕ್ಕದ ಜಮೀನ್ದಾರರ ಹಕ್ಕೇನೂ ಇರುವುದಿಲ್ಲವೆಂದೂ, ಆ ಆಜ್ಞೆಯಲ್ಲಿ ತಿಳಿಸಲಾಗಿದೆ. ಹಾಗೆ ತಾವು ಒಂದು ಅಜ್ಞೆಯನ್ನು ಹೊರಡಿಸಿದ್ದರಿಂದ ಈ ರೀತಿ ನಡೆಯಲು ಕಾರಣವಾಯಿತೆಂಬುದನ್ನು ನಾನು ಬಹಳ ವ್ಯಥೆಯಿಂದ ತಿಳಿಸಬೇಕಾಗಿದೆ.

ಶ್ರೀ ಎಲ್. ಸಿದ್ದಪ್ಪನವರು.—ಆ ರೀತಿ ರೈತನಿಗೆ ಅಕ್ಕ ಪಕ್ಕದ ರಸ್ತೆ ಮರಗಳ ಮೇಲೆ ಯಾವ ಹಕ್ಕೂ ಇರುವುದಿಲ್ಲವೆಂಬುದಾಗಿ ಒಂದು ಸರ್ಕಾರಿ ಆಜ್ಞೆ ಆಗಿರುತ್ತದೆಯೇ?

ಶ್ರೀ ಎಚ್. ಸಿದ್ದಯ್ಯನವರು.—ಹೇಳುತ್ತೇನೆ.

ಶ್ರೀ ಎಸ್. ಕರಿಯಪ್ಪನವರು.—ಹಾಗೆ ತಾವು ಒಂದು ಸರ್ಕಾರಿ ಹುಕುಮನ್ನು ಹೊರಡಿಸದೆ ಇದ್ದಿದ್ದರೆ ಇಷ್ಟೆಲ್ಲಾ ಆಗುತ್ತಿರಲಿಲ್ಲ. ಆದ್ದರಿಂದ ಈಗಲಾದರೂ

ತಾವು ಆ ರೀತಿ ಹಿಂದೆ ಹೊರಡಿಸಿರುವ ಹುಕುಮಿಗೆ ತಕ್ಕ ತಿದ್ದುಪಡಿ ಮಾಡಿ. ಇಲ್ಲವೇ ಆ ಹುಕುಮನ್ನೇ ಸಂಪೂರ್ಣವಾಗಿ ಮಾರ್ಪಾಡು ಮಾಡಿದರೆ ಮತ್ತು ಮೊದಲಿದ್ದಂತೆ ಆ ರೈತರಿಗೆ ಅವುಗಳ ಹಕ್ಕನ್ನೂ ಮತ್ತು ಅದರ ಜವಾಬ್ದಾರಿಯನ್ನೂ ವಹಿಸಿದರೆ ಈ ಬಗ್ಗೆ ಎಷ್ಟೋ ಅನುಕೂಲವಾಗುತ್ತದೆಂದು ನಾನು ಇಷ್ಟು ಮಾತ್ರ ತಿಳಿಸಲಿಚ್ಛಿಸುತ್ತೇನೆ.

ಸರ್ಕಾರದ ಹುಕುಮು ಒಂದೇ ಅಲ್ಲದೆ ಇತ್ತೀಚೆಗೆ ಬೆಳೆದು ಬಂದಿರತಕ್ಕ ಹಲವಾರು ಸಾಮಾಜಿಕ ಮತ್ತು ವ್ಯಾಪಾರಿಕ ನಡೆವಳಿಕೆಗಳು ಕೂಡ ಇದಕ್ಕೆ ಬಹುಮಟ್ಟಿಗೆ ಕಾರಣವಾಗಿದೆಯೆಂದು ಹೇಳಬಹುದು. ಲಾರಿಗಳು ಹೆಚ್ಚಾಗಿ ರಸ್ತೆಗಳಲ್ಲಿ ಓಡಾಡುವುದಕ್ಕೆ ಪ್ರಾರಂಭವಾದುದು ಈಚೆಗೆ 5-6 ವರ್ಷಗಳಿಂದ. ನಮಗೆಲ್ಲ ತಿಳಿದಿರುವ ಹಾಗೆ ಈ ಲಾರಿಗಳು ಸಾಮಾನ್ಯವಾಗಿ ಪಟ್ಟಣಗಳಿಂದ ಬಂದು ವಾಪಸ್ಸು ಪಟ್ಟಣಕ್ಕೆ ಹೋಗುತ್ತಿರುತ್ತವೆ. ಇತ್ತೀಚಿನ ಈ ಸೌದೆಯ ಅಭಾವದ ದೆಶೆಯಿಂದ ಈ ಲಾರಿಗಳವರು ಕಳ್ಳತನದಿಂದ ಈ ಮರಗಳನ್ನು ಕಡಿದು ತೆಗೆದುಕೊಂಡು ಹೋಗುತ್ತಿರುತ್ತಾರೆ. ಈ ಸಾರಿ ತಾವು ಹೊಸದಾಗಿ ಮರಗಳನ್ನು ನೆಡುವ ಕಾರ್ಯಕ್ರಮ ಹಾಕಿಕೊಂಡಿದ್ದೀರಷ್ಟೆ. ಅದರಂತೆ, ಜನರು ಈ ಕಡೆಯಿಂದ ಮರದ ಕೊಂಬೆಗಳನ್ನು ನೆಟ್ಟುಕೊಂಡು ಹೋದರೆ, ಇನ್ನೊಂದು ಕಡೆಯಿಂದ ಅವುಗಳನ್ನೆಲ್ಲಾ ಕಳ್ಳತನದಿಂದ ಕಡಿದುಕೊಂಡು ಹೋಗಿರುವುದು ನಮ್ಮ ಗಮನಕ್ಕೆ ಬಂದಿದೆ. ಅದ್ದರಿಂದ ಲಕ್ಷಾಂತರ ಮರಗಳನ್ನು ನೀವು ನೆಟ್ಟಿದ್ದರೂ ಅವುಗಳೆಲ್ಲಾ ಬಹುಮಟ್ಟಿಗೆ ಆಗಲೇ ಹೋಗಿವೆಯೆಂದು ಹೇಳಬಹುದು. ಇದಕ್ಕಾಗಿ ನಾನು ಎರಡು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಒಂದನ್ನು ಹೇಳುವುದೇನೋ ಅನಾವಶ್ಯಕವೆಂದೇ ಕಾಣುತ್ತದೆ. ಸರ್ಕಾರದ ವಿವಿಧ ಇಲಾಖೆಯವರು ಈ ವಿಚಾರದಲ್ಲಿ ನಿಗಾ ಕೊಟ್ಟು ಈ ರೀತಿ ವೃಕ್ಷ ಸಂಪತ್ತು ನಷ್ಟವಾಗುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಪಟ್ಟರೆ ಅನುಕೂಲವಾಗುತ್ತದೆ ಎಂದ ಮಾತ್ರಕ್ಕೇ ಈ ಸಂಬಂಧದಲ್ಲಿ ಸಾರ್ವಜನಿಕರ ಜವಾಬ್ದಾರಿಯೇನೂ ಇಲ್ಲವೆಂದು ನಾನು ಹೇಳುವುದಿಲ್ಲ. ಸಾರ್ವಜನಿಕರೂ ಈ ಬಗ್ಗೆ ತಮ್ಮ ಮನೋವೃತ್ತಿಯನ್ನು ಬದಲಾಯಿಸಿಕೊಳ್ಳಬೇಕಾದ್ದು ಅವಶ್ಯಕವಾಗಿದೆ. ಇದಕ್ಕಾಗಿ ತಕ್ಕಮಟ್ಟಿಗೆ ಪ್ರಚಾರ ಕಾರ್ಯಗಳನ್ನೂ ಕೈಕೊಳ್ಳುವುದು ಸರ್ಕಾರದವರ ಮತ್ತು ಸಾರ್ವಜನಿಕರ ಕರ್ತವ್ಯ. ನಾನು ನೋಡುತ್ತಿದ್ದೇನೆ. ಕಳೆದ ನಾಲ್ಕೈದು ವರ್ಷಗಳಿಂದ ಮಳೆ ಬೆಳೆಗಳು ಬಹಳ ಮಟ್ಟಿಗೆ ಕಡಮೆಯಾಗುತ್ತಿದೆ. ಕಾಡುಗಳಲ್ಲಿಯೂ ವೃಕ್ಷ ಸಂಪತ್ತು ಕಡಿಮೆಯಾಗಿದೆ. ಜೊತೆಗೆ ಕಾಡಿನ ವೃಕ್ಷ ಸಂಪತ್ತಿನ ಬೆಲೆಯ ವಿಷಯದಲ್ಲಿ ಜನರ ತಿಳಿವಳಿಕೆಯೂ ಕಡಿಮೆಯಾಗಿರುವುದು ಈ ಪರಿಸ್ಥಿತಿಗೆ ಕಾರಣವಾಗಿದೆ. ನಮ್ಮ ತಾಲ್ಲೂಕಿನಲ್ಲಿ 33 ಇಂಚುಗಳಷ್ಟು ಮಳೆ ಬೀಳುತ್ತಿದ್ದುದು, ಈಗ ಕೇವಲ 25 ಇಂಚುಗಳ ಮೇಲೆ ಬೀಳುವುದಿಲ್ಲ. ಹೀಗಿರುವಾಗ ನಮ್ಮ ಆಹಾರದ ಅಭಾವ ಹೇಗೆ ಪರಿಹಾರವಾದೀತು? ಅದ್ದರಿಂದ ಸರ್ಕಾರದವರು ಸರಿಯಾದ ಕಾರ್ಯಕ್ರಮ ಕೈಕೊಂಡು, ನಮ್ಮ ವೃಕ್ಷಸಂಪತ್ತನ್ನು ಉಳಿಸಿಕೊಳ್ಳಬೇಕಲ್ಲದೆ ಇನ್ನೂ ಹೆಚ್ಚಿಗೆ ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಬೇಕಾದಷ್ಟು ಚರ್ಚೆಯಾಗಿದೆ. ಮಾನ್ಯ ಸದಸ್ಯರು ಹೇಳಿದ್ದನ್ನೇ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಅನುಭವಕ್ಕೆ ಬಂದ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ರಸ್ತೆ ಮರಗಳನ್ನು ಬಹಳವಾಗಿ ಕಡಿದು ಹಾಕುತ್ತಾರೆಂದು ದೂರು ಬಂದು ಪರಿಶೀಲನೆ ಮಾಡಿ ಬರೋಣವೆಂದು ಹೆಮ್ಮಿಗೆ ಗ್ರಾಮಕ್ಕೆ ಹೋಗಿದ್ದೆ. ಅಲ್ಲಿ ನೋಡಿದ್ದರಲ್ಲಿ ಕೇವಲ 6 ಮೈಲುಗಳಲ್ಲಿ ಸುಮಾರು 1,400 ಮರಗಳನ್ನು ಬುಡಮಟ್ಟ ಕಡಿದುಹಾಕಿರುವುದು ಕಂಡುಬಂತು. ಒಂದೊಂದು ಮರಕ್ಕೆ 50 ಗಾಡಿ ಸೌದೆಗಳಾಗುತ್ತದೆಂದು ಲೆಕ್ಕ ಹಾಕಿದರೂ ಸುಮಾರು 7 ಲಕ್ಷ ರೂಪಾಯಿಗಳಷ್ಟು ವೃಕ್ಷ ಸಂಪತ್ತು ನಷ್ಟವಾಗಿದೆ. ಹಾಗೆಯೇ ಮುಂದಕ್ಕೆ ಕಾರಿನಲ್ಲಿ ಹೋಗುತ್ತಿರುವಾಗ ಮರ ಕಡಿಯುತ್ತಿದ್ದವನೇ ಸಿಕ್ಕಿಬಿದ್ದ. ಅವನನ್ನು ಸೌದೆ ಕೂಡಲೆ ಸಮೇತ ಕರೆದುಕೊಂಡು ಬಂದು ನಾನೇ ಪೋಲೀಸಿಗೆ ಅರ್ಜಿ ಕೊಟ್ಟೆ. ಅವನ ಕೇಸನ್ನು ಅವತ್ತೇ ಕೈಬಿಟ್ಟರೆಂದು ಗೊತ್ತಾಯಿತು. ಆ ಪೋಲೀಸ್ ಇನ್ಸ್‌ಪೆಕ್ಟರಿಗೆ ಬಡ್ತಿ ಸಹ ಬಂದಿದೆಯೆಂದು ನನಗೆ ತಿಳಿದು ಬಂದಿದೆ. ಇದಕ್ಕೆ ಕಾರಣರಾದವರು ಯಾರು? ಸಾರ್ವಜನಿಕರೇ ಅಥವಾ ಸರ್ಕಾರಿ ನೌಕರರೇ? ಸರ್ಕಾರಿ ನೌಕರರ ಸಹಾನುಭೂತಿ ಪ್ರತ್ಯಕ್ಷವಾಗಿ ಇಲ್ಲವೇ ಅಪ್ರತ್ಯಕ್ಷವಾಗಿ ಇದೆ ಎಂದೇ ನನ್ನ ನಂಬಿಕೆ. ಅಥವಾ ಸರ್ಕಾರಿ ಅಧಿಕಾರಿಗಳ ಭಯ ಜನರಿಗೆ ಇಲ್ಲವೆಂದು ಹೇಳಬಹುದು. ಈಗ ಹೇಳಿದ ಸಂದರ್ಭದಲ್ಲಿ ಮಾತ್ರ ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ಅವರ ಸಹಾನುಭೂತಿಯೂ ಇದ್ದೇ ಇರಬೇಕು. ಈ ಮರಗಳೆಲ್ಲಾ ಎಲ್ಲಿಗೆ ಹೋಗಿವೆ ಎಂಬುದನ್ನು ಪರಿಶೀಲಿಸಬೇಕು. ಹಳ್ಳಿಯವರು ಖಂಡಿತ ಅವುಗಳನ್ನು ಮುಟ್ಟುವುದಿಲ್ಲ. ಎಲ್ಲಿದ್ದರೂ ಶೇಕದಾರರು, ಅಮಲ್ದಾರರು, ಸಬ್‌ಡಿವಿಜನ್ ಆಫೀಸರು, ಎಂಜಿನಿಯರು, ಅಸಿಸ್ಟೆಂಟ್ ಎಂಜಿನಿಯರೇ ಮೊದಲಾದ ಹಲವು ಸರ್ಕಾರಿ ಅಧಿಕಾರಿಗಳ ಮನೆಗೆ ಸೌದೆ ಸರಬರಾಯಿಯಾಗುತ್ತದೆಂದು ಹೇಳಿದರೆ ತಪ್ಪಲ್ಲವೆಂದು ನನ್ನ ಭಾವನೆ.

ಒಬ್ಬ ಸದಸ್ಯರು.—ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಮನೆಗೂ ಸ್ವಲ್ಪ ಬರುತ್ತದೆಯೊ!

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಮೈಸೂರಿನ ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರ ಮನೆಗಂತೂ ಖಂಡಿತ ಬರುವುದಿಲ್ಲ. ಅವರದೇ 500 ಎಕರೆಗಳ ಕಾಡಿದೆ!!

ಅದ್ದರಿಂದ ಈ ನಷ್ಟ ತಪ್ಪಬೇಕಾದರೆ ಜನರಲ್ಲಿ ನೈತಿಕಮಟ್ಟ ಜಾಸ್ತಿಯಾಗಬೇಕು. ಅಧಿಕಾರಗಳಲ್ಲೂ ಅದು ಹೆಚ್ಚಬೇಕು. ಸಾಲು ಮರಗಳ ಮೇಲಿನ ಹೊರೆ ಯಾರದು ಎಂಬುದೇ ಅನುಮಾನವಾಗಿದೆ. They seem to be nobody's property. ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಕೇಳಿದರೆ ಅವರು ತಮ್ಮದಲ್ಲ ಎನ್ನುತ್ತಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೆ ಅಧಿಕಾರವಿಲ್ಲ!! ರೆವಿನ್ಯೂ ಅಧಿಕಾರಿಗಳು ತಮ್ಮ ಅಧಿಕಾರ ಅಷ್ಟು ಸೂಚಿತವಾಗಿಲ್ಲ, ರೆವಿನ್ಯೂ ಕೋಡಿನಲ್ಲಿ ಅನಿರ್ದಿಷ್ಟವಾಗಿದೆಯೆಂದು ಹೇಳುತ್ತಾರೆ.

ಅದ್ದರಿಂದ ಈಗ ಮುಖ್ಯವಾಗಿ ತಾವು ಈ ಲ್ಯಾಂಡ್ ರೆವಿನ್ಯೂ ಕೋಡನ್ನು ತಿದ್ದುಪಡಿ ಮಾಡಬೇಕಾದ್ದು ಅವಶ್ಯಕ. ಜನಾಬ್ ಇಮಾಂ ರವರು ಇದರ ಅಧಿಕಾರವನ್ನು ಅರಣ್ಯದ ಇಲಾಖೆಗೆ ಕೊಡಿ ಎಂದು ಹೇಳಿದರು. ಅದಕ್ಕಿಂತ ಹೆಚ್ಚಿನ ತಪ್ಪು ಬೇರೆ ಇಲ್ಲ. ರಸ್ತೆ ಮಾಲೀಕರು ಯಾರೋ ಅವರಿಗೆ ಇದನ್ನು ವಹಿಸುವುದು ನ್ಯಾಯವೆಂದು ತೋರುತ್ತದೆ. ರಸ್ತೆಯಲ್ಲಿ ಮರಗಳು ಆಗ ಉಳಿಯುತ್ತವೆ. ರಸ್ತೆ ಚಾರ್ಜ್ ಕೊಡುವಾಗ ಎಷ್ಟು ಮರಗಳಿದ್ದವು, ಎಂಬುದನ್ನು ಲೆಕ್ಕ ಹಾಕಿ ಜವಾಬ್ದಾರಿ ವಹಿಸಿಕೊಳ್ಳಬೇಕು. ಈ ಕಳ್ಳ ಸೌದೆ ಮಾರುವವರು ಅನುಸರಿಸುವ ರೀತಿ ವಿಚಿತ್ರವಾಗಿವೆ. ಒಂದು ರಾತ್ರಿ ಮರದ ತೊಗಟೆಯನ್ನೆಲ್ಲಾ

ಕೆತ್ತಿ ಬಿಡುತ್ತಾರೆ. ಮತ್ತೊಂದು ದಿನ ಬಂದು ಮರವನ್ನು ಕೊಡ ಯಿಂದ ಕೊರೆದು ಬಿಡುತ್ತಾರೆ. ಇದಾದ ಸ್ವಲ್ಪ ದಿವಸಗಳಲ್ಲೇ ಮರ ಒಣಗಿಹೋಗುತ್ತದೆ. ಕಾನೂನು ಪ್ರಕಾರ ಶೇಕದಾರರು ಮರ ಒಣಗಿಹೋಯಿತೆಂದು ಹೇಳಿ ಆತನಿಗೆ ಲೈಸೆನ್ಸ್‌ಕೊಟ್ಟು ಮರವನ್ನು ಕಡಿಸಿಬಿಡುತ್ತಾರೆ! ಈ ಮರವನ್ನು ಇವರಿಬ್ಬರೂ ಸೇರಿ ಸ್ವಂತಕ್ಕೆ ಉಪಯೋಗಿಸಿದರೂ ಸೈರಿಸಬಹುದು. ವ್ಯಾಪಾರಮಾಡಿ ಹಣ ಸಂಪಾದನೆ ಮಾಡುತ್ತಾರೆ. ಟಿ. ನರಸೀಪುರ ರಸ್ತೆಯಲ್ಲಿ ಆರು ಮೈಲಿ ದೂರದಷ್ಟು ರಸ್ತೆಯಲ್ಲಿ ಸುಮಾರು 7½ಲಕ್ಷ ರೂಪಾಯಿಗಳಷ್ಟು ಮರವನ್ನು ಸಾಗಿಸಿದ್ದಾರೆ. ಇಷ್ಟೊಂದು ನಷ್ಟಕ್ಕೆ ಅವಕಾಶ ಕೊಟ್ಟ ಅಮಲ್ದಾರರುಗಳಿಗೆ ಸರ್ಟಿಫಿಕೇಟ್ ಕೊಡುವುದಕ್ಕೆ ಮಾಡಬಾರದು? ಅದು ಬಿಟ್ಟು ಸುಮ್ಮನೆ ಬಿಟ್ಟರೆ ನೀತಿ ಬಾಹಿರರು ನಾಳೆ ಅತಾರಾ ಕಚೇರಿಯನ್ನು ಸಹ ಮಾರಿಬಿಡಬಹುದು!! ಆದ್ದರಿಂದ ಸರ್ಕಾರದವರು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri H. C. LINGA REDDY.—I move for closure, Sir.

ಶ್ರೀ ಎಲ್. ಸಿದ್ದಪ್ಪನವರು.—ಈ ವಿಷಯದಲ್ಲಿ ದೀರ್ಘವಾಗಿ ಚರ್ಚೆಯಾಗಿದೆ, ಇದು ಹೇಯಕೃತ್ಯ, ಪಾಪಕೃತ್ಯ, ಇದನ್ನು ತಡೆಗಟ್ಟಬೇಕಾದ್ದು ಅವಶ್ಯಕವೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದಕ್ಕಾಗಿ ಒಂದು ಸೂಚನೆಯನ್ನು ಕೊಡಬೇಕೆಂದಿದ್ದೇನೆ. ಪ್ರತಿಯೊಬ್ಬ ಮಂತ್ರಿಗಳೂ ತಾವು ಪ್ರವಾಸ ಹೋಗುವಾಗ ಅಲ್ಲಿನ ಆಫೀಸರುಗಳಿಗೆ ಈ ಅಂಶವನ್ನು ಮನದಟ್ಟುಮಾಡಿಸಬೇಕು. ಜಿಲ್ಲೆಯಲ್ಲಿರತಕ್ಕ ಪ್ರತಿಯೊಬ್ಬ ಅಧಿಕಾರಿಯ ಜವಾಬ್ದಾರಿ ಮತ್ತು ಕರ್ತವ್ಯವೆಂಬುದನ್ನು ಅವರು ಮನವರಿಕೆ ಮಾಡಿಕೊಳ್ಳಬೇಕು. ಸಾಲು ಗಿಡಗಳನ್ನು ಸರಿಯಾಗಿ ನೋಡದೆ ಹೋದರೆ ಸರ್ಕಾರ ಆಡಳಿತ ಸರಿಯಾಗಿ ನಡೆಸಿಲ್ಲವೆಂದು ತಿಳಿದುಕೊಳ್ಳಬೇಕಾಗುತ್ತದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು. ಇಷ್ಟುಮಟ್ಟಿಗೆ ಅವರಿಗೆ ತಿಳಿಯಪಡಿಸಿದರೆ ಪರಿಣಾಮಕಾರಿಯಾಗಬಹುದು. ಶ್ರೀ ಕರಿಯಪ್ಪನವರು ಹೇಳಿದರು, ಸರ್ಕಾರದವರು ಮೊದಲು ಒಂದು ಸರ್ಕಾರಿ ಆರ್ಡರ್ ಮಾಡಿದರು, ಈಗ ಅದನ್ನು ಬದಲಾವಣೆ ಮಾಡಿದ್ದಾರೆ ಎಂದು. ಆ ರೀತಿಯಾಗಿ ಏನೂಮಾಡಿಲ್ಲ. ಜನರು ಹೊಸದಾಗಿ ಮರಗಳನ್ನೂ ನೆಡಲು ಪ್ರೋತ್ಸಾಹಿಸಲು ಒಂದು ಹುಕುಂಮಾಡಿದರು. ಏನೆಂದರೆ ಯಾರ್‍ಯಾರು ಅವರ ಜಮೀನಿನ ಹತ್ತಿರ ಮರಗಳನ್ನು ನಡೆಸಿ ಬೆಳೆಸುತ್ತಾರೋ, ಆ ಮರಗಳ ಮೇಲಿನ ಹಕ್ಕುಬಾಧ್ಯತೆ ಅವರಿಗೇ ಎಂದು ಎಂದರೆ, ಆ ಮರಗಳ ಫಸಲನ್ನು ಅನುಭವಿಸುವುದಕ್ಕೆ ಅವರಿಗೆ ಹಕ್ಕಿರುತ್ತದೆ, ಮತ್ತು ಮರ ಒಣಗಿಹೋದರೆ ಆ ಮರ ಅವನಿಗೇ ಸೇರತಕ್ಕದ್ದು ಎಂದು. ಅಷ್ಟೇಹೊರತು ಮರ ಹಸಿಯಾಗಿರುವಾಗ ಆತನಿಗೆ ಅದನ್ನು ಕಡಿಯುವುದಕ್ಕೆ ಹಕ್ಕಿಲ್ಲ. ಈ ಎಲ್ಲಾ ಕಾರಣಗಳಿಂದ ಸರ್ಕಾರದವರು ಕೂಡಲೆ ಎಲ್ಲಾ ಇಲಾಖೆಗಳಿಗೂ ಒಂದು ಸರ್ಕ್ಯುಲರನ್ನು ಕಳುಹಿಸುವುದೂ ಅಲ್ಲದೆ, ಆಫೀಸರುಗಳು ಸರಿಯಾದ ನಿಗಾ ಇಡುವಂತೆ ಒತ್ತಾಯಪಡಿಸಬೇಕು. ಮತ್ತು ಪ್ರಜೆಗಳಿಗೆ ಇದರ ಉಪಯೋಗವೆಷ್ಟು, ಇದರಿಂದ ದೇಶದ ಸಂಪತ್ತು ಎಷ್ಟು ಮಟ್ಟಿಗೆ ಹೆಚ್ಚುತ್ತದೆ ಎಂಬುದನ್ನು ಪ್ರಚಾರ ಮಾಡಬೇಕು ಎಂದು ಸೂಚನೆಕೊಡುತ್ತೇನೆ.

* ಶ್ರೀ ಎಚ್. ಸಿದ್ದಯ್ಯನವರು.—ನೂರಾರು ವರ್ಷಗಳಿಂದ ಸಂಸ್ಥಾನಾಮಳೆ ಪೂರ್ವೀಕರು ಹಾಕಿರುವ ಲಕ್ಷಾಂತರ ಮರಗಳು ಕೋಟ್ಯಾಂತರ ರೂಪಾಯಿಗಳು ಬೆಲೆ ಬಾಳುತ್ತವೆ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲವೆಂಬುದು ಎಲ್ಲರಿಗೂ ತಿಳಿದೇ ಇದೆ. ಆದರೆ ಇತ್ತೀಚೆಗೆ ಇಂಥ ಬೆಲೆಯಾದ ಮರಗಳನ್ನು ಅನ್ಯಾಯವಾಗಿ ಕಡಿದು ಹಾಕಿ ಆಸ್ತಿಯನ್ನು ಹಾಳು ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರದವರು ತಕ್ಕನಿಗಾಕೊಡತ್ತಿಲ್ಲ ಎಂದು ಆರೋಪಣೆಬರುತ್ತಿದೆ. ಇದಕ್ಕೆ ಕೆಲವು ಮಾನ್ಯ ಸದಸ್ಯರು ತಿಳಿಸಿದಂತೆ ಯುದ್ಧಕಾಲದಲ್ಲಿ ಸೌದೆಬೆಲೆ ವಿಪರೀತ ಏರಿದ್ದರ ಫಲವಾಗಿ ಮತ್ತು ಸೌದೆ ಸಿಕ್ಕದೇ ಇದ್ದುದರಿಂದ ಕಾರಣವಾಯಿತೆಂದು..............

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಈಗಲೂ ಅದಕ್ಕೆ ಬೆಲೆ ಹೆಚ್ಚಾಗಿಯೇ ಇದೆ.

ಶ್ರೀ ಎಚ್. ಸಿದ್ದಯ್ಯನವರು.—ಅದರಲ್ಲೂ ದೊಡ್ಡ ದೊಡ್ಡ ನಗರಗಳ ಸಮೀಪದಲ್ಲಿರುವ ಸಾಲುಮರ ಕಡಿದು ಸೌದೆ ರೂಪವಾಗಿ ಕೆಲವರು ಹಣ ಸಂಪಾದನೆ ಮಾಡುವ ದುರ್ವ್ಯಾಪಾರ ನಡೆಸುವ ಪದ್ಧತಿ ಕೆಲವರಲ್ಲಿ ಬೆಳೆದಿದೆಯೆಂದು ಹೇಳುವುದನ್ನು ಕೇಳಿ ಬಹಳ ಸಂಕಟವಾಯಿತು. ಆದರೆ ಅದಕ್ಕೆ ಕಾರಣರು ಯಾರೆಂದರೆ ಈಗಿನ ಪ್ರಜಾ ಸರ್ಕಾರವೆಂದು ಹೇಳಿದರೆ ಅದರ ಅರ್ಥ ಎಷ್ಟು ಮಟ್ಟಿಗಿದೆಯೆಂಬುದನ್ನು ಮಾನ್ಯ ಸದಸ್ಯರೇ ಯೋಚನೆ ಮಾಡಬೇಕಾಗಿದೆ. ಯುದ್ಧಕಾಲದಲ್ಲಿ ಮರಗಳನ್ನು ನಿರ್ಭಯದಿಂದ ಹೆಚ್ಚು ಹೆಚ್ಚಾಗಿ ಕಡಿಯುವ ದುಷ್ಟ ಪದ್ಧತಿಯನ್ನು ಜಾರಿಗೆ ತಂದಿದ್ದರ ಫಲವಾಗಿ ಮರಗಳು ಅಲ್ಲಲ್ಲಿ ಹೋಗಿ ಪ್ರದೇಶ ಬಯಲಾಗಿ ದುರ್ವ್ಯಾಪಾರವು ಪ್ರತಿಯೊಬ್ಬರಿಗೂ ಕಂಡುಬಂದು, ವ್ಯಥೆಯುಂಟಾಗುತ್ತಿದೆಯೆಂದು ಹೇಳಿದರೆ ಯಾರದೂ ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದೆಲ್ಲವನ್ನೂ ಅರಿತು ಈಗಿನ ಸರ್ಕಾರದವರು ಈ ವಿಚಾರದಲ್ಲಿ ವಿಶೇಷ ರೀತಿಯ ಶ್ರದ್ಧಾಸಕ್ತಿಗಳಿಂದ ಹೆಚ್ಚು ಹೆಚ್ಚಾಗಿ ಸಾಲುಮರಗಳನ್ನು ರಕ್ಷಣೆಮಾಡಬೇಕು, ಎಲ್ಲಿ ಹೋಗಿದೆಯೋ ಅಂಥ ಸ್ಥಳಗಳಲ್ಲಿ ಬೇಗ ಬೇಗ ಹೆಚ್ಚು ಆಸಕ್ತಿಯನ್ನು ವಹಿಸಿ ಹೊಸದಾಗಿ ಹಾಕಿ ಬೆಳೆಸತಕ್ಕದ್ದು ಅಗತ್ಯ ಎಂದು ತಿಳಿದು ಕಳೆದ 1½ ವರ್ಷದಿಂದ ಈ ಬಗ್ಗೆ ಬಹಳಮಟ್ಟಿಗೆ ದ್ರವ್ಯವನ್ನು ವೆಚ್ಚಮಾಡುತ್ತಿರುವುದೂ ಅಲ್ಲದೆ ಆಯಾ ಪ್ರದೇಶದಲ್ಲಿರುವ ಜನರಿಗೆ ಒಂದು ರಿಯಾಯಿತಿ ವಿಶೇಷ ಬಗೆಯ ಪ್ರೋತ್ಸಾಹ ಪ್ರಚಾರ ರೂಪವಾಗಿ ಮತ್ತು ಇನ್ನೂ ಅನೇಕ ಮೂಲಕವಾಗಿ ಕೊಟ್ಟಿದ್ದರ ಫಲವಾಗಿ ಕಳೆದ ಒಂದು ವರ್ಷದಲ್ಲಿ ಸಂಸ್ಥಾನಾಮಳೆ ಸುಮಾರು 5 ಲಕ್ಷ ಮರಗಳನ್ನು ಹೊಸದಾಗಿ ಹಾಕಿದ್ದಾರೆ. ಇದರಲ್ಲಿ ಒಂದು ವಿಶೇಷ ಸಂದರ್ಭವೇನೆಂದರೆ ಕೋಲಾರ ಜಿಲ್ಲೆಯಲ್ಲಿ 1½ ಲಕ್ಷ ಗಿಡಗಳಷ್ಟು ಒಣಗಿಹೋಗಿವೆ. ಆದರೆ ಅದು ನಮ್ಮ ಕೈಲಲ್ಲ ಎಂದು ಅರಿಕೆಮಾಡಿಕೊಳ್ಳಬೇಕಾಗಿಲ್ಲ. ಇದಕ್ಕೆ ಸುಮಾರು ಶೇಕಡ 40ರಷ್ಟು ಮಾರ್ಜಿನ್ ಕೊಡಬಹುದು. ಹೊಸದಾಗಿ ಹಾಕಿರುವುದರಲ್ಲೂ ಕೆಲವು ಮರ ಹುಟ್ಟಿವೆ; ಕಣ್ಣಾರೆ ಅದನ್ನು ನೋಡುತ್ತಿದ್ದೇವೆ. ಮಂತ್ರಿಗಳೂ ಮತ್ತು ಇತರರೂ ಕಾರು ಬಸ್ಸುಗಳಲ್ಲಿ ಹೋಗುವಾಗ ಕಣ್ಣಾರೆ ನೋಡಿದ್ದಾರೆ. ಸಾವಿರಾರು ಮರಗಳು ಹೊಸದಾಗಿ ಎದ್ದಿವೆ. ಜನಾಬ್ ಇವರಾಂರವರು ಚಿತ್ರದುರ್ಗ ಮತ್ತು ಇತರ ಪ್ರದೇಶಗಳಿಗೆ ನೂರಾರು ಸಾರಿ ಓಡಾಡಿದ್ದರೂ ಎಲ್ಲೂ ಉತ್ತಮ ಪರಿಸ್ಥಿತಿ ಕಂಡಿಲ್ಲವೆಂದು ಹೇಳುತ್ತಾರೆ. ಆದರೆ ಎಲ್ಲೆಲ್ಲಿ ಮರಗಳಿಗೆ ಅಪೋಹವುಂಟಾಗಿದೆಯೋ ಅಂಥ ಸಂದರ್ಭವನ್ನು ನೋಡಿದಾಗ ಪಬ್ಲಿಕ್‌ವರ್ಕ್ಸ್ ಮತ್ತು ಇತರ ಇಲಾಖಾ ಅಧಿಕಾರಿಗಳು ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದು ತಿಳವಳಿಕೆಯನ್ನು ಆಗಾಗ್ಗೆ ಕೊಡುತ್ತಿದ್ದಾರೆಂದು ನಂಬಬಹುದು ಎಂದು ಹೇಳಲು ಸಂತೋಷಪಡುತ್ತೇನೆ.

ಇಷ್ಟೇ ಅಲ್ಲದೆ ಕಳೆದ ಆಫೀಸರುಗಳ ಸಮ್ಮೇಳನದಲ್ಲಿ ಅದರಲ್ಲಿ ಜಿಲ್ಲಾಧಿಕಾರಿಗಳಿದ್ದಾಗ ಬಹಳವಾಗಿ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಉಪಯುಕ್ತ ಸಲಹೆ ಕೊಟ್ಟಿದ್ದಾರೆ. ಮರಗಳನ್ನು ವಿವೇಚನೆಯಿಲ್ಲದೆ ಅತಿಕ್ರಮಿಸಿ ಕಡಿಯುವುದಕ್ಕೆ ಯಾವ ಸಂದರ್ಭದಲ್ಲೂ ಅವಕಾಶ ಕೊಡಕೂಡದೆಂದು ಒತ್ತಿ ಹೇಳಿದ್ದರ ಪರಿಣಾಮವಾಗಿ ಇತ್ತೀಚೆಗೆ ಕಳೆದ ಆರು ತಿಂಗಳಿಂದ ಮರಗಳನ್ನು ಆ ರೀತಿ ಕಡಿಯುತ್ತಿರುವುದೂ ಬಹಳ ವಿರಳವಾಗುತ್ತಿದೆ ಯೆಂದು ವರದಿ ಬರುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಮರ ಕಡಿಯುವುದನ್ನು ಕಾಗ್ನೈಜಬಲ್ ಅಫೆನ್ಸ್ ಎಂದು ಮಾಡದೆಯೆ ?

ಶ್ರೀ ಎಚ್. ಸಿದ್ದಯ್ಯನವರು.—ಮಾಡಿದ್ದಾರೆ. ಅಷ್ಟೆ ಅಲ್ಲ, ಕೆಲವು ಪಟೇಲ ಶ್ಯಾನುಭೋಗರ ಮೇಲೆ ಕ್ರಿಮಿನಲ್ ಕೇಸಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಜುಲ್ಮಾನೆಯನ್ನು ಹಾಕಿದ್ದಾರೆ. ಅದಕ್ಕೆ ಸ್ಟೇ ಆರ್ಡರನ್ನು ಕೂಡ ನಾವು ಕೊಡುತ್ತಿಲ್ಲ. ಇದರ ಪರಿಣಾಮವಾಗಿ ಕಳೆದ ಒಂದು ವರ್ಷದಿಂದ ಅನಾವಶ್ಯಕವಾಗಿ, ಅನ್ಯಾಯವಾಗಿ ಮರ ಕಡಿಯುವುದು ಬಹಳ ಕಡಮೆಯಾಗಿದೆ ಯೆಂದು ಅಂಕಿ ಅಂಶಗಳಿಂದ ರುಜುವಾತು ಕೊಡಬಲ್ಲೆ ಎಂದು ಹೇಳಬಲ್ಲೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಹೊಸ ಮರ ಹಾಕುವಾಗ ಎಂಥ ಮರಗಳನ್ನು ಹಾಕಬೇಕೆಂದು ಮಾಡಿದ್ದೀರಿ ?

ಶ್ರೀ ಎಚ್. ಸಿದ್ದಯ್ಯನವರು.—ಗ್ರಾಮಾಭಿವೃದ್ಧಿ ಇಲಾಖೆಯವರು ಈ ವಿಚಾರದಲ್ಲಿ ಜನರಿಗೆ ಸೂಕ್ತವಾಗಿ ತಿಳಿವಳಿಕೆ ಕೊಟ್ಟಿದ್ದಾರೆ. ಎಲ್ಲಿ ಯಾವ ಮರ ಬೆಳೆಯಬಹುದು, ಎಲ್ಲಿ ಫಲ ಕೊಡುವ ಮರ ಹಾಕಬೇಕು, ಎಲ್ಲಿ ನೆರಳಿನ ಅನುಕೂಲತೆ ಬೇಕು ಎಂದು ತಿಳಿದು ವಿಚಾರ ಮಾಡಿ ಒಂದು ತೀರ್ಮಾನ ಕೊಟ್ಟಿದ್ದಾರೆ.

ಇನ್ನು ಕೆಲವುಕಡೆ ಪಬ್ಲಿಕ್‌ವರ್ಕ್ಸ್ ಇಲಾಖೆ ಮತ್ತು ರೆವೆನ್ಯೂ ಇಲಾಖೆ ಎರಡಕ್ಕೂ ಈ ಬಾಬು ಸೇರಿರುವುದರಿಂದ ಸರಿಯಾಗಿ ಕರ್ತವ್ಯ ನಿರ್ವಹಣೆಯಾಗುತ್ತಿಲ್ಲವೆಂದು ಶ್ರೀ ಟಿ. ಸಿ. ಹೊನ್ನಪ್ಪನವರು ಹೇಳಿದರು. ಅದು ನಿಜ. ಉದಾಹರಣೆಗೆ, ಬೆಂಗಳೂರಿನಿಂದ ಮೈಸೂರಿನವರೆಗಿರುವ ರಸ್ತೆ ಪಬ್ಲಿಕ್‌ವರ್ಕ್ಸ್ ಇಲಾಖೆಗೆ ಬಹಳವಾಗಿ ಸೇರಿದೆ. ಆ ರಸ್ತೆಯ ನಿಗಾವಣೆ, ದುರಸ್ತಿ ಕೆಲಸಕ್ಕೆ ಅವರಿಗೆ ಹಣ ಹೋಗುತ್ತದೆ. ಯಾವ ಮರವನ್ನೂ ಕಡಿಯಕೂಡದೆಂದು ನಿರ್ಬಂಧ ಮಾಡಿ ನಿಗಾ ಇಟ್ಟಿದ್ದಾರೆ. ಚಿತ್ರದುರ್ಗ—ದಾವಣಗೆರೆ ರಸ್ತೆಯು ರೆವೆನ್ಯೂ ಇಲಾಖೆಗೆ ಸೇರಿದೆ. ಅದಕ್ಕೆ ಯಾರು ನಿಗಾ ಇಡಬೇಕು ? ಪೋಲೀಸ್ ಮತ್ತು ಇತರ ಇಲಾಖೆಯವರು ಗಮನಕೊಡುವುದು ಅವಶ್ಯಕವೆಂದು ಸೂಚನೆಯಿದೆ. ಹೀಗೆ ಸರ್ಕಾರದವರು ಎಲ್ಲವನ್ನೂ ನೋಡಿ ಯೋಚನೆಮಾಡಿ ಮರಗಳ ಅಭಿವೃದ್ಧಿಯಾಗುವುದಕ್ಕೆ ಯಾವ್ಯಾವ ಕೆಲಸವಾಗಬೇಕೋ ಅದನ್ನು ಮಾಡುವುದು ಅವಶ್ಯಕವಾಗಿದೆ ಎಂಬುದು ಒಪ್ಪಿಕೊಳ್ಳತಕ್ಕ ವಿಚಾರವೇ ಆಗಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ವಯಸ್ಕರ ವಿದ್ಯಾಭ್ಯಾಸದ ಇಲಾಖೆಯಲ್ಲಿ ಬೇಕಾದಷ್ಟು ಜನ ಇದ್ದಾರೆ. ಅದಕ್ಕೆ 5 ಲಕ್ಷ ರೂಪಾಯಿಗಳ ಗ್ರಾಂಟಿದೆ. ಆದ್ದರಿಂದ ಅವರಿಗೆ ಈ ಕೆಲಸ ವಹಿಸಬಹುದಲ್ಲವೆ ?

ಶ್ರೀ ಎಚ್. ಸಿದ್ದಯ್ಯನವರು.—ಯೋಚನೆಮಾಡೋಣ. ಜಮೀನುದಾರರಿಗೆ ಬದ್ಧರಂಬೆ ಮತ್ತು ಫಲ ವಹಿಸಿದರೆ ಅವರು ಹೆಚ್ಚಿನ ಮುತವರ್ಜಿಯಿಂದ ಮರವನ್ನು ನೋಡಿಕೊಳ್ಳುತ್ತಾರೆ. ಇದರಲ್ಲಿ ಸತ್ಯಾಂಶವಿದೆ. ಅದು ಯೋಚನೆ ಮಾಡತಕ್ಕದ್ದು. ಕೆಲವು ಕಡೆ ಆ ರೀತಿ ಮಾಡಲು ರೆವೆನ್ಯೂ ಇಲಾಖೆಗೆ ಅವಕಾಶ ಕೊಟ್ಟಿದೆ. ಇನ್ನೂ ಹೆಚ್ಚು ಹಕ್ಕನ್ನು ಕೊಡುವುದು ಅವಶ್ಯಕವೆಂದು ಕಂಡರೆ ಯೋಚನೆಮಾಡುತ್ತೇವೆ. ಯಾವ ರೀತಿ ಯೋಚನೆಮಾಡಿದರೂ ಕೂಡ ಸಾಲುಮರ ಹೆಚ್ಚಬೇಕೆಂದು ಹೇಳುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದ್ದರಿಂದ ಯಾವ್ಯಾವ ಪ್ರಯತ್ನವನ್ನು ಹೆಚ್ಚು ಹೆಚ್ಚಾಗಿ ಮಾಡಬೇಕೋ ಅದೆಲ್ಲವನ್ನೂ ಬೇಗ ಮಾಡುವುದಕ್ಕೆ ಸಿದ್ಧರಾಗಿದ್ದೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ರೆವೆನ್ಯೂ ಸಚಿವರು ಕೊಟ್ಟಿರುವ ಭರವಸೆಯ ಮೇಲೆ ಸಭೆಯು ಅನುಮತಿ ಕೊಟ್ಟರೆ ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

(The cut motion was, by leave of the Assembly, withdrawn.)

Empowering Local Officers under Section 17 of the Land Acquisition Act.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ಪಂಗಡ).—ಸ್ವಾಮಿ, ನನ್ನ ಖೋತಾ ಸೂಚನೆಯು ಈ ರೀತಿ ಇದೆ.—

"The demand under the head "1. Land Revenue" for Rs. 48,82,000 be reduced by Re. 1 (to urge the Government to empower local fficers under Section 17 of the Land Acquisition Act)."

ಸ್ವಾಮಿ, ಗ್ರಾಮಾಂತರಗಳಲ್ಲಿ ನಿಮ್ನ ವರ್ಗದವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಗ್ರಾಮಾಂತರಗಳಲ್ಲಿ ಅನೇಕ ಕಡೆ ನಿಮ್ನ ವರ್ಗದವರು ಕಟ್ಟಿರತಕ್ಕ ಮನೆಗಳು ಸ್ಯಾನಿಟರಿ ರೂಲ್ಸ್ ಪ್ರಕಾರ ಇಲ್ಲದೇ ಇರುವುದರಿಂದಲೂ ಮತ್ತು ಅವರ ಮನೆಗಳು ಹುಲ್ಲು ಗುಡಿಸಲುಗಳಾಗಿರುವುದರಿಂದಲೂ ಕಾರಣಾಂತರಗಳಿಂದ ಅವು ಸುಟ್ಟು ಹೋಗುತ್ತದೆ. ಸುಟ್ಟುಹೋದಾಗ ಅವರು ನಮಗೆ ಆ ಜಾಗ ಸಾಲದು, ಬೇರೆ ಜಾಗ ಮನೆ ಕಟ್ಟಿಕೊಳ್ಳಲು ಕೊಡಿಸಿಕೊಟ್ಟು ಸಹಾಯಮಾಡಿರಿ ಎಂದು ಸರ್ಕಾರದವರಿಗೆ ಅರ್ಜಿ ಕೊಟ್ಟರೆ ವರ್ಷಗಟ್ಟಲೆ—10–12 ವರ್ಷಗಳಾದರೂ—ನಿಧಾನವಾಗುತ್ತದೆ. ಇದಕ್ಕೆ ಏನು ಕಾರಣ ಎಂದರೆ ಈ ದಿನ ಒಬ್ಬ ತಾಲ್ಲೂಕು ಅಮಲ್ದಾರರಿಗೆ ಅರ್ಜಿ ಕೊಟ್ಟರೆ, ಅವರು ಅದನ್ನು ಶೇಕದಾರರಿಗೆ ಕಳುಹಿಸುತ್ತಾರೆ. ಅವರು ಆ ಹಳ್ಳಿಗೆ ಹೋಗಿ ಯಾವ ಜಮೀನು ಅಕ್ವೈರ್ ಮಾಡಬೇಕೆಂದು ಅರ್ಜಿ ಕೊಟ್ಟಿರುತ್ತಾರೋ ಆ ಜಮೀನಿನ ಮಾಲೀಕರನ್ನು ವಿಚಾರಿಸಿ ನಿನ್ನ ಜಮೀನನ್ನು ಅಕ್ವೈರ್ ಮಾಡದಂತೆ ಮಾಡುತ್ತೇನೆ, ಎಷ್ಟು ದುಡ್ಡು ಕೊಡುತ್ತೀ ಎನ್ನುವುದು ದುಡ್ಡು ತೆಗೆದುಕೊಳ್ಳುವುದು ಮತ್ತು ನಿಮ್ನ ವರ್ಗದವರಿಗೆ ನಿಮಗೆ ಜಾಗ್ರತೆ ಜಾಗ ಕೊಡಿಸಿಕೊಡುತ್ತೇನೆ, ಎಷ್ಟು ದುಡ್ಡು ಕೊಡುತ್ತೀರಿ ಎನ್ನುವುದು, ದುಡ್ಡು ವಸೂಲುಮಾಡುವುದು—ಈ ರೀತಿ ಮಾಡಿ ರೆಕಾರ್ಡ್‌ನಲ್ಲಿರತಕ್ಕ ಜಮೀನಿನ ನಂಬರಿಗೆ ಬೇರೆ ಯಾವುದೋ ನಂಬರು ಸೇರಿಸಿ ರಿಕಾರ್ಡನ್ನು ಫೈನಲುಮಾಡದೇ ಮುಂದುವರಿಸುವುದು, ನಿಮ್ನವರ್ಗದವರು ಯಾರಾದರೂ ಹೋಗಿ ನಮ್ಮ ರಿಕಾರ್ಡು ಏನಾಯಿತು ಎಂದು ಕೇಳಿದರೆ ಮುಂದಿನ ಅಧಿಕಾರಿಗಳಿಗೆ

ಕಳುಹಿಸಿದ್ದೇನೆ ಎಂದು ಹೇಳುವುದು—ಹೀಗೆಲ್ಲಾ ಮಾಡಿ... ....

ಅಧ್ಯಕ್ಷರು.—ನಿಮ್ಮ ಖೋತಾ ನಿರ್ಣಯದಲ್ಲಿ ಸೆಕ್ಷನ್ 17ರ ಪ್ರಕಾರ ಕೆಲವು ಆಫೀಸರುಗಳಿಗೆ ಅಧಿಕಾರ ಕೊಡಬೇಕೆಂದು ಹೇಳಿದ್ದೀರಿ. ಅದಕ್ಕೆ ಸಂಬಂಧಪಟ್ಟಂತೆ ಹೇಳಿ.

ಶ್ರೀ ಟಿ. ಹನುಮಯ್ಯನವರು.—ಪೀಠಿಕಾರೂಪವಾಗಿ ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ. ಇಲ್ಲದೇ ಇದ್ದರೆ ಅರ್ಥವಾಗುವುದಿಲ್ಲ. ಆದ್ದರಿಂದ ನನಗೆ ಸ್ವಲ್ಪ ಜಾಸ್ತಿ ಕಾಲಾವಕಾಶ ಕೊಡಬೇಕು.

Mr. SPEAKER.—It is not possible. Honourable Member is requested to finish within the time-limit.

ಶ್ರೀ ಟಿ. ಹನುಮಯ್ಯನವರು.—ಈ ರಿಕಾರ್ಡು ಸಬ್ ಡಿವಿಜನ್ ಆಫೀಸರು, ಡೆಪ್ಯೂಟಿ ಕಮೀಷನರು ಇವರುಗಳಿಗೆಲ್ಲಾ ಹೋಗಿ, ಆ ಮೇಲೆ ಎಕ್ಸಿಕ್ಯೂಟೀವ್ ಎಂಜಿನಿಯರ ಸಲಹೆಗೆ ಕಳುಹಿಸುತ್ತಾರೆ. ಅಷ್ಟೇ ಅಲ್ಲದೆ ಹೆಲ್ತ್ ಆಫೀಸರನ್ನು ಕೇಳಬೇಕೆನ್ನುತ್ತಾರೆ. ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು ಒಂದು ಪಕ್ಷ ಜಮೀನು ಚೆನ್ನಾಗಿದ್ದರೂ ಚೆನ್ನಾಗಿಲ್ಲ ಎಂದು ಹೇಳಿದರೆ ಬೇರೆ ಜಮೀನಿಗೆ ಹೋಗಬೇಕಾಗುತ್ತದೆ. ಸದಸ್ಯರೆಲ್ಲರಿಗೂ ಗೊತ್ತಿರುವಹಾಗೆ ಲಂಚ ರುಷುವತ್ತುಗಳ ಹಾವಳಿಯಿಂದ ಆ ರೀತಿ ಜಮೀನು ಚೆನ್ನಾಗಿದ್ದರೂ ಚೆನ್ನಾಗಿಲ್ಲವೆಂದು ಹೇಳುತ್ತಾರೆ. ಹೀಗಾಗಿ ವರ್ಷಗಟ್ಟಲೆ ಪ್ರಯತ್ನಪಟ್ಟು ಅಕ್ವೈರ್‌ಮಾಡಿದ್ದ ಜಮೀನನ್ನು ಹೆಲ್ತ್ ಆಫೀಸರು ಪ್ರಯೋಜನವಿಲ್ಲ ಎಂದು ಹೇಳಿದರೆ ಅದೂ ಸಿಕ್ಕುವುದಿಲ್ಲ. ಬೇರೆ ಜಮೀನು ಸಿಕ್ಕಬೇಕಾದರೆ ಪುನಃ ವರ್ಷಗಟ್ಟಲೆ ಆಗುತ್ತದೆ. ಸಬ್ ಡಿವಿಜನ್ ಆಫೀಸರಿಗೆ ಹೋಗಬೇಕು, ಡೆಪ್ಯುಟಿಕಮಿಷನರಿಗೆ ಹೋಗಬೇಕು, ಪುನಃ ಗೆಜೆಟಿನಲ್ಲಿ ಫಾಯಿಷ್ ಆಗಬೇಕು. ಇಷ್ಟಾಗಬೇಕೆಂದರೆ ಬಹಳಕಾಲ ತೆಗೆದುಕೊಳ್ಳುತ್ತದೆ.

ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಸೆಕ್ಷನ್ 17ರಲ್ಲಿ ಈ ರೀತಿ ಇದೆ:—

"17 (1) In cases of urgency, whenever the Government of Mysoro so directs, the Deputy Commissioner, though no such award has been made, may, on the expiration of fifteen days from the publication of the notice mentioned in section 9, sub-section (1), take possession of any waste or arable land needed for public purposes or for a company. Such land shall thereupon vest absolutely in the Government, free from all encumbrances."

ಆದ್ದರಿಂದ ತೊಂದರೆಗಳು ಬೇಕಾದಷ್ಟಿವೆ. ಆಯಾ ಸ್ಥಳಗಳಲ್ಲಿರತಕ್ಕ ಲೋಕಲ್ ಆಫೀಸರುಗಳಿಗೆ ಹೆಚ್ಚು ಅಧಿಕಾರ ಕೊಟ್ಟರೆ ಅವರು ಜಮೀನು ಅಕ್ವೈರ್‌ಮಾಡಿ ಕೊಡಬಹುದು. ಮತ್ತು ಮನೆಗಳನ್ನು ಕಟ್ಟಿಕೊಳ್ಳಲು ಅನುಕೂಲಮಾಡಿಕೊಟ್ಟ ಹಾಗಾಗುತ್ತದೆ. ಸಾಧಾರಣವಾಗಿ ಊರಿನ ಪಕ್ಕದಲ್ಲಿರತಕ್ಕ ಜಮೀನುಗಳು ಪಟೇಲ, ಶ್ಯಾನುಭೋಗರ ಅಥವಾ ದೊಡ್ಡ ಸಾಹುಕಾರರ ಜಮೀನಾಗಿರುವುದರಿಂದ ಆ ಜಮೀನುಗಳನ್ನು ಅಕ್ವೈರ್‌ಮಾಡಿಕೊಳ್ಳಲಿಕ್ಕೆ ಅವಕಾಶ ಕೊಡುವುದಿಲ್ಲ. ತಕರಾರುಗಳನ್ನು ಹಾಕುತ್ತಾರೆ. ಆದ್ದರಿಂದ ಸೆಕ್ಷನ್ 17ನ್ನು ಉಪಯೋಗವಮಾಡಿ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ತಕ್ಷಣ ನಡೆಸಬೇಕೆಂದು ಸರ್ಕಾರದವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಎರಡನೆಯದಾಗಿ, ಮೈಸೂರು ದೇಶದಲ್ಲಿ ನಿಮ್ನವರ್ಗದವರಿಗೆ ಸೈಟುಗಳ ಅಕ್ವಿಜಿಷನ್ ಹೆಚ್ಚಾಗಿ ನಡೆಯುತ್ತಿದೆ. 19 ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಉಪಯೋಗಿಸಬಹುದೆಂದು ಸ್ಥಳೀಯ ಸಂಸ್ಥೆಗಳ ಸಚಿವರು ಹೇಳಿದರು.

ಆದುದರಿಂದ ಸರ್ಕಾರದವರು ಸ್ಥಳೀಯ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ನಿಮ್ನ ಪಂಗಡದವರಿಗೆ ಬೇಕಾಗುವ ಜಮೀನುಗಳು ಬೇಗ ಅಕ್ವೈರ್ ಆಗುವಂತೆ ಏರ್ಪಾಡು ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ಬಿನ್ನಹಮಾಡಿಕೊಳ್ಳುತ್ತೇನೆ.

Mr. SPEAKER.—Cut motion moved:

"That demand under the head '1. Land Revenue' for Rs. 48,82,000 be reduced by Re. 1"

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಸ್ವಾಮಿ, ಈ ಖೋತಾ ಸೂಚನೆಯ ಪ್ರಕಾರ ಸ್ಥಳೀಯ ರೆವೆನ್ಯೂ ಅಧಿಕಾರಿಗಳಿಗೆ ಲ್ಯಾಂಡ್ ಅಕ್ವಿಜಿಷನ್ ಕಾನೂನಿನ 17ನೆಯ ಸೆಕ್ಷನ್‌ನಲ್ಲಿರುವ ಅಧಿಕಾರವನ್ನು ಕೊಡಬೇಕು. ಈಗ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಗೊತ್ತುಮಾಡಿದೆ. ಜಮೀನನ್ನು ಅಕ್ವೈರ್ ಮಾಡಲು ಅಗತ್ಯ ಬಂದಾಗ ಮೊದಲು ಪ್ರಿಲಿಮಿನರಿ ನೋಟಿಫಿಕೇಷನ್ ಆಗಬೇಕು, ಆ ಮೇಲೆ ಜನಗಳಿಂದೇನಾದರೂ ಅಭ್ಯಂತರವಿದ್ದರೆ ಅದನ್ನು ಪರಿಶೀಲಿಸಬೇಕು, ಆ ಮೇಲೆ ಫೈನಲ್ ನೋಟಿಫಿಕೇಷನ್ ಗೆಜೆಟ್ಟಿನಲ್ಲಿ ಪ್ರಕಟವಾಗಬೇಕು. ಆ ಮೇಲೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕು. ಇದೆಲ್ಲವನ್ನೂ ಮಾಡಬೇಕಾದರೆ ಕೆಲವು ಸಂದರ್ಭಗಳಲ್ಲಿ ಮೂರು ನಾಲ್ಕು ವರ್ಷಗಳಾಗುತ್ತವೆ. ಅವರು ಹೇಳಿದಹಾಗೆ ಈ ಕೊರತೆ, ಈ ಅನಾನುಕೂಲ ಯಾವ ಒಂದು ಕೋಮಿಗೇ ಆಗುತ್ತಿಲ್ಲ. ಇಡೀ ಸಂಸ್ಥಾನದಲ್ಲಿ ಗ್ರಾಮ ಬಡಾವಣೆಗೆ ಕೇಳುವ ಎಲ್ಲ ಕೋಮುಗಳ ಪ್ರಜೆಗಳಿಗೂ ಆಗುತ್ತಿದೆ. ಇದು ನಿವಾರಣೆಯಾಗಬೇಕು, ಈಗ ಅನೇಕ ಗ್ರಾಮಗಳಲ್ಲಿ ಹೊಸ ಗ್ರಾಮ ಬಡಾವಣೆ ಮಾಡಬೇಕಾಗಿದೆ. ಈ ಖೋತಾ ಸೂಚನೆಯಲ್ಲಿ ಈ ಗ್ರಾಮ ಬಡಾವಣೆ ಜಾಗ್ರತೆಯಾಗಲು ಈಗ ಇರುವ ಅಡಚಣೆಗಳ ಪರಿಹಾರವನ್ನು ಕಂಡುಹಿಡಿಯಬೇಕೆಂದು ಕೇಳಿದ್ದಾರೆ. ಈಗ ಸ್ಥಳೀಯ ಮುಖ್ಯಾಧಿಕಾರಿಗಳೆಂದರೆ ಡೆಪ್ಯುಟಿಕಮೀಷನರವರು. ಅವರೂ ಈಗಿನ 17ನೆಯ ಸೆಕ್ಷನ್ ಪ್ರಕಾರ ಕಾರ್ಯಕ್ರಮವನ್ನು ತೆಗೆದುಕೊಂಡರೂ ಸಹ ಸರ್ಕಾರದವರ ಗಮನಕ್ಕೆ ತರದೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಇದರಿಂದ ಈ ರೀತಿಯ ಮಾರ್ಗವನ್ನು ಬಿಟ್ಟು ಸ್ಥಳೀಯ ಅಧಿಕಾರಿಗಳು ಡೆಪ್ಯುಟಿಕಮೀಷನರವರಿಗೆ ವರದಿ ಮಾಡಿದರೆ ಅದರ ಮೇಲೆ ಅವರೇ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಂಡು ಜಮೀನನ್ನು ಸ್ವಾಧೀನಪಡಿಸಿಕೊಡಲು ಅವಕಾಶಮಾಡಿ ಎಂಬುದು ಈ ಸೂಚನೆಯ ಉದ್ದೇಶ. ಇದು ಆಗಬೇಕಾದರೆ ಕೇವಲ ನಿಬಂಧನೆಗಳನ್ನು ಮಾಡುವುದರಿಂದ ಸಾಧ್ಯವಾಗುವುದಿಲ್ಲ. ಈಗಿರತಕ್ಕ ಲ್ಯಾಂಡ್ ಅಕ್ವಿಜಿಷನ್ ಕಾನೂನನ್ನೇ ಬದಲಾಯಿಸಬೇಕು. ಅಂದರೆ ಅಗತ್ಯವಾದ ಪ್ರಕರಣಗಳನ್ನು ತಿದ್ದುಪಡಿ ಮಾಡಬೇಕು.

ಅಧ್ಯಕ್ಷರು.—ಆ ರೀತಿ ಮಾಡಬೇಕೆಂದು ಸೂಚಕರು ಹೇಳಿಲ್ಲ. ತಾವು ಹೇಳುತ್ತಿರುವುದು ಹೊಸ ವಿಷಯ, ಸೆಕ್ಷನ್ನನ್ನೇ ಬದಲಾವಣೆ ಮಾಡಬೇಕೆಂದು ಹೇಳುತ್ತೀರಿ.

ಶ್ರೀ ಎಂ. ಮಾದಯ್ಯನವರು.—ನಾನು ಹೇಳುವುದು ಕೆಲಸ ಜಾಗ್ರತೆ ಆಗಬೇಕಾದರೆ ಸ್ಥಳೀಯ ಅಧಿಕಾರಿಗಳಿಗೇ ಪೂರ್ತಿಯಾಗಿ ಅಧಿಕಾರ ಕೊಡಬೇಕಾಗುತ್ತದೆ. ಈಗಿರುವ ಕ್ರಮದಲ್ಲಿ ತೊಂದರೆಯಿದೆ. ಇದನ್ನು ನಿವಾರಿಸಲು ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇದು ಬಹಳ ಮುಖ್ಯವಾದ ವಿಚಾರ. ಅದಿಕರ್ಣಾಟಕರೊಬ್ಬರಿಗೇ

ಅಲ್ಲದೆ ಎಲ್ಲ ಜನರಿಗೂ ಸಂಬಂಧಪಟ್ಟದ್ದು. ನಮ್ಮ ಸಂಸ್ಥಾನದಲ್ಲಿರುವ 16 ಸಾವಿರ ಗ್ರಾಮಗಳ ಪೈಕಿ ಮುಕ್ಕಾಲು ಭಾಗ ಗ್ರಾಮಗಳಲ್ಲಿ ಈ ಕಷ್ಟವಿದೆ. ಮನೆಗಳನ್ನು ಕಟ್ಟಬೇಕೆಂದರೆ ಜನರಿಗೆ ಬಹಳ ಕಷ್ಟ. ಹಿಂದೆಯೇ ನಾನು ಈ ವಿಷಯವನ್ನು ಸೂಚಿಸಿದ್ದೆ. ಈಗಿರುವುದು ಬಹಳ cumbersome process. ಲ್ಯಾಂಡ್ ಅಕ್ವಿಜಿಷನ್ 17ನೆಯ ಸೆಕ್ಷನ್ ಪ್ರಕಾರ ಡೆಪ್ಯುಟಿ ಕಮಿಷನರಿಗೆ ಅಧಿಕಾರವಿದೆ. ಅವರು ಅದರಂತೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಆದರೆ ಎಲ್ಲಾ ಸಂದರ್ಭಗಳಲ್ಲಿಯೂ ಹೀಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದು ಸಿವಿಲ್ ಕೋರ್ಟುಗಳಿಗೆ, ಕೆಲವು ಸಂದರ್ಭಗಳಲ್ಲಿ ಹೈಕೋರ್ಟಿಗೂ ಕೂಡ ಹೊರಟುಹೋಗುತ್ತದೆ ಕೈಗಾರಿಕೆಗಳಿಗೆ ಬೇಕಾದ ಜಮೀನು ಸ್ವಾಧೀನಪಡಿಸಿಕೊಳ್ಳಲೂ ನಿಧಾನ. ಆದರೆ ಇಂತಹ ಸಂದರ್ಭಗಳು ಅಪರೂಪವಾಗಿ ಬರುತ್ತವೆಯಾದಕಾರಣ ಆ ವಿಷಯ ಈಗ ಬೇಡ. ಆದರೆ ಹಳ್ಳಿಗಳ ಬಡಾವಣೆಯ ವಿಚಾರದಲ್ಲಿ ತೊಂದರೆಗಳಿವೆ. ಡೆಪ್ಯುಟಿಕಮೀಷನರಿಗೇ ಕೊನೆಯ ಅಧಿಕಾರ ಕೊಡುವುದಾದರೆ ಜನರಿಗೆ ಅನುಕೂಲವಾಗುತ್ತದೆ.

Janab MOHAMED VALIULLA (Kolar—Muslim)—In opposing this cut motion, I want to say this, *viz.*, that acquisition is always an encroachment on the rights of the raiyat and the public. In the interest of the public to give such powers to local authorities in a very easy manner will mean greater encroachment than what is intended in the legislation itself. There are various aspects to be considered before an acquisition is made. The Health Officer, for instance, should be given the power to go and see the spot and see whether it is suitable or not. Because there will be marshy lands; there will not be proper layout or proper roads, etc. Otherwise, it will become malarial. For emergency purposes you can do it in 15 days. Under the circumstances, I feel the Rule is quite alright. Every aspect will have to be taken into consideration to expedite the matter and the Land Acquisition Officer will have to see whether there is any other claim or not. It is not as if the Sheikdar or Amildar or anybody can do it. I oppose this.

*ಶ್ರೀ ಎಸ್. ರಂಗರಾಮಯ್ಯನವರು.---ಸ್ವಾಮಿ ಈಗ ತಿದ್ದುಪಡಿ ಕಾನೂನು ಆಗಬೇಕಾಗಿರುವುದು ಅತ್ಯಾವಶ್ಯಕ.

ಅಧ್ಯಕ್ಷರು.—ಕಾನೂನು ತಿದ್ದುಪಡಿಯಾಗಬೇಕೆಂದು ಅವರು ಹೇಳಿಲ್ಲ. 17ನೆಯ ಸೆಕ್ಷನ್ ಪ್ರಕಾರ ಸ್ಥಳೀಯ ಅಧಿಕಾರಿಗಳಿಗೆ ಅಧಿಕಾರ ಕೊಡಬೇಕೆಂದು ಸೂಚಿಸಿದ್ದಾರೆ. Honourble Member cannot go beyond the scope of the cut motion.

ಶ್ರೀ ಎಸ್. ರಂಗರಾಮಯ್ಯನವರು.—ಜನಾಬ್ ವಲೀಯುಲ್ಲಾರವರೇನೋ ಹೇಳಿದರು ತೊಂದರೆಯಾಗುತ್ತದೆ ಎಂದು. ಈಗಿರುವ ಪ್ರಕಾರ ಅನೇಕ ಕಡೆ ತೊಂದರೆಯಾಗಿದೆ. ಉದಾಹರಣೆಗೆ, ಸಾಗಣೆ ಗ್ರಾಮದಲ್ಲಿ ಹರಿಜನರಿಗೆ ಮನೆಕಟ್ಟಲು ಒಂದು ಜಮೀನನ್ನು ಅಕ್ವೈರ್ ಮಾಡಲು ಗೆಜೆಟ್ಟಿನಲ್ಲಿ ಪ್ರಕಟವಾಗಿದ್ದರೂ ಯಾರೋ ಅರ್ಜಿ ಕೊಟ್ಟರೆಂದು ಅಕ್ವಿಜಿಷನ್ ಅಲ್ಲಿಗೇ ನಿಲ್ಲಿಸಿದರು. ಹೀಗೆ ಹರಿಜನರಿಗೆ ಆಗುತ್ತಿರುವ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ, ನರಕವಾಸ. ಆಮೇಲೆ ಪುನಃ ನಾನೂ ಡೆಪ್ಯುಟಿ ಕಮಿಷನರೂ ಅಲ್ಲಿಗೆ ಹೋಗಿ ನೋಡುವುದರಲ್ಲಿ ಅಲ್ಲಿ ಏನೋ ಒಂದು ಅಡ್ಡಿ ಮಾಡಿದ್ದರು. ಹೀಗೆ ತಡವಾಗುವುದರಿಂದ ಎಷ್ಟೋ ವ್ಯತ್ಯಾಸವಾಗುತ್ತದೆ. ಡೆಪ್ಯುಟಿ ಕಮಿಷನರಿಗೇ ಅಧಿಕಾರ ಕೊಟ್ಟರೆ ಅನಾಹುತವಾಗುತ್ತದೆಂದು ಹೇಳಿದರು. ಕೆಲವು ಜನ ಹೇಗಿದ್ದರೂ ತೊಂದರೆ ಕೊಡುತ್ತಾರೆ, ಅಡ್ಡಿಆತಂಕಗಳನ್ನು ತಂದೊಡ್ಡುತ್ತಾರೆ. ಡೆಪ್ಯುಟಿ ಕಮೀಷನರು ಹೋಗಿ ನೋಡಿ ಒಂದು ಜಮೀನು ಅತ್ಯಾವಶ್ಯಕವೆಂದು ತೀರ್ಮಾನಿಸಿದರೆ ಅದನ್ನು ವಶಪಡಿಸಿಕೊಳ್ಳಲು ಅವರಿಗೆ ಅಧಿಕಾರವಿರಬೇಕು. ಹಳ್ಳಿಗಳಲ್ಲಿ ಜನರಲ್ಲಿ ಎಷ್ಟೋ ಮೂಢ ನಂಬಿಕೆಗಳಿರುತ್ತವೆ. ನಾವು ಸಗೂರು ಎಂಬ ಗ್ರಾಮಕ್ಕೆ ಹೋಗಿದ್ದೆವು. ಅಲ್ಲಿನ ಜನ 'ನಾವು ಪಶ್ಚಿಮದ ಕಡೆ ಹೋಗುವುದಿಲ್ಲ, ಅಲ್ಲಿ ಮನೆಗಳನ್ನು ಕಟ್ಟಿ ಜನ ಹಾಳಾಗಿದ್ದಾರೆ' ಎಂದು ಹೇಳಿದರು. ಅಂತಹ ಸಂದರ್ಭಗಳಲ್ಲಿ ಕಾಲವಿಳಂಬವಾಗುತ್ತದೆ. ಜನರು ಒಪ್ಪಿ ಅಧಿಕಾರಿಗಳಿಗೂ ಅವಶ್ಯಕವೆಂದು ಕಂಡುಬಂದರೆ ಅಂತಹ ಸಂದರ್ಭಗಳಲ್ಲಿ ಮಾಡಲು ಅವಕಾಶವಿರಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅಧ್ಯಕ್ಷರೆ, ಈ ಖೋತಾ ಸೂಚನೆಯನ್ನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಸೂಚಿಸುತ್ತೇನೆ. ದೇಶದಲ್ಲಿ ಸಾರ್ವಜನಿಕ ಉಪಯುಕ್ತ ಕಾರ್ಯಗಳು ನಡೆಯಬೇಕಾಗಿದ್ದರೆ, ಸ್ಕೂಲು, ಆಸ್ಪತ್ರೆ ಮುಂತಾದ ಜನೋಪಯುಕ್ತ ಕಾರ್ಯಗಳು ಜರೂರಾಗಿ ಮುಂದುವರಿಯಬೇಕಾದರೆ, ಗ್ರಾಮಗಳ ಬಡಾವಣೆಗಳು ತ್ವರಿತವಾಗಿ ಜರುಗಬೇಕಾದರೆ ಈ ಖೋತಾ ಸೂಚನೆಯಲ್ಲಿ ಸಲಹೆ ಮಾಡಿರುವಂತೆ ಅಧಿಕಾರವನ್ನು ಡೆಪ್ಯುಟಿ ಕಮೀಷನರಂತಹ ಜವಾಬ್ದಾರಿ ಅಧಿಕಾರಿಗಳಿಗೆ ಕೊಡತಕ್ಕದ್ದು ಸೂಕ್ತ. ಇಲ್ಲಧಿದ್ದರೆ ಖಂಡಿತವಾಗಿಯೂ ಪ್ರಗತಿ ಸಾಧ್ಯವಿಲ್ಲವೆಂದು ಹೇಳಬೇಕಾಗಿದೆ. ಸಾರ್ವಜನಿಕ ಉಪಯೋಗಕ್ಕೆ ಜಮೀನುಗಳನ್ನು ವಶಪಡಿಸಿಕೊಳ್ಳಲು ಡೆಪ್ಯುಟಿ ಕಮೀಷನರಿಗೆ ಸಂಪೂರ್ಣ ಅಧಿಕಾರ ಕೊಡುವುದು ಅತ್ಯಾವಶ್ಯಕ. ಇಂತಹ ಸಮಯಗಳಲ್ಲಿ ಜನರ ಮನೆ ಮಠಗಳನ್ನು ವಶಪಡಿಸಿಕೊಳ್ಳಬೇಕಾಗಿ ಬರಬಹುದು. ಆಗ ಆ ಮನೆಗಳಲ್ಲಿ ವಾಸ ಮಾಡುತ್ತಿರುವವರನ್ನು 24 ಗಂಟೆಗಳೊಳಗೆ ಬಿಟ್ಟು ಹೋಗಬೇಕೆಂದು ಹೇಳಿದರೆ ಸ್ವಲ್ಪ ತೊಂದರೆಯಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸ್ವಲ್ಪ ಪ್ರತಿಬಂಧಕವಿರಬೇಕು. ಸಾಗುವಳಿ ಜಮೀನುಗಳನ್ನು ವಶಪಡಿಸಿಕೊಳ್ಳುವ ಸಂದರ್ಭಗಳಲ್ಲಿ ಸಂಪೂರ್ಣ ಅಧಿಕಾರವನ್ನು ಕೊಟ್ಟರೆ ತೊಂದರೆಯಿಲ್ಲ. ಒಂದು ಕಾಲವನ್ನು ಗೊತ್ತುಮಾಡಿ ಅದು ಮುಗಿದ ಕೂಡಲೆ ಸ್ವಾಧೀನ ತೆಗೆದುಕೊಳ್ಳುವ ಅಧಿಕಾರವನ್ನು ಕೊಟ್ಟರೆ ಸರ್ಕಾರದವರು ಒದಗಿಸಿರುವ 50 ಲಕ್ಷ ರೂಪಾಯಿಗಳು ಖರ್ಚಾಗಿ ಗ್ರಾಮಾಭಿವೃದ್ಧಿ ಕಾರ್ಯ ಸಾಧ್ಯವಾಗುತ್ತದೆ. ಪಾಠಶಾಲೆಗಳ ಕಟ್ಟಡಗಳಿಗೆ, ಆಸ್ಪತ್ರೆ ಕಟ್ಟಡಗಳಿಗೆ ಕೊಟ್ಟಿರತಕ್ಕ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಇಲ್ಲದಿದ್ದರೆ ಅನೇಕ ಸಂದರ್ಭಗಳಲ್ಲಿ ಸರ್ಕಾರದವರು ಮಂಜೂರು ಮಾಡಿ

ರುವ ಹಣ ಖರ್ಚಾಗದೆ ವರ್ಷಾಂತರಗಳಾದರೂ ಆ ಕೆಲಸಗಳು ಮುಗಿಯದೆ ಹಾಗೆಯೇ ಉಳಿಯುತ್ತವೆ. ಆದುದರಿಂದ ಖೋತಾನಿರ್ಣಯದ ಸೂಚನೆಯನ್ನು ಅಂಗೀಕರಿಸುವ ಅವಶ್ಯಕತೆಯಿದೆ. ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಈ ಖೋತಾ ನಿರ್ಣಯವನ್ನು ಅಂಗೀಕಾರ ಮಾಡಿ ಇದರಲ್ಲಿ ಸೂಚಿಸಿರುವಂತೆ ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಎಸ್. ಕರಿಯಪ್ಪನವರು.—ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಈ ನಿರ್ಣಯವನ್ನು ಸಭೆಯ ಮುಂದಿಟ್ಟಿರತಕ್ಕ ಮಹನೀಯರ ಉದ್ದೇಶವಾದರೂ ಇಷ್ಟೇ. ಈಗ ಲ್ಯಾಂಡ್ ಅಕ್ವಿಜಿಷನ್ ಕಾರ್ಯಕ್ರಮಗಳು ಬೇಗ ಬೇಗ ಸಾಗುತ್ತಿಲ್ಲ. ರೆಕಾರ್ಡುಗಳು ಬೇಗಬೇಗ ಫೈಸಲಾಗುತ್ತಾ ಇಲ್ಲ. ಅದರಿಂದ ಜನಗಳಿಗೆ ತುಂಬಾ ತೊಂದರೆಯಾಗಿದೆ. "ಮನುಷ್ಯನಿಗೆ ಇರತಕ್ಕ ನಾಲ್ಕು ಅವಶ್ಯಕತೆಗಳಲ್ಲಿ ಬಹು ಮುಖ್ಯವಾದದ್ದು ಮನೆಯ ಅವಶ್ಯಕತೆ. ಅದು ಸಾರ್ಥಕವಾಗುತ್ತಿಲ್ಲ. ಆದಕಾರಣ ಮನೆಕಟ್ಟತಕ್ಕವರಿಗೆ ಜಾಗ್ರತೆ ಜಾಗ ಒದಗುವಂತೆ ಮಾಡಬೇಕು. ಹಾಗೆ ಮಾಡಬೇಕಾದರೆ ಒಂದು ಹೊಸ ಕಾರ್ಯಕ್ರಮವನ್ನು ಅನುಸರಿಸಬೇಕು" ಎಂಬುದು. ಈ ಬಗ್ಗೆ ಸೂಚನೆಯನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಈ ರೀತಿ ಕೆಲಸ ಕಾರ್ಯಗಳು ನಿಧಾನವಾಗುತ್ತಿರುವುದರಿಂದ ಅನಾಹುತಗಳು ಬಹಳವಾಗುತ್ತಿವೆ. ಮೊನ್ನೆ ತಾನೆ ಕಳೆದ ವರ್ಷ ನಂಜನಗೂಡಿನಲ್ಲಿ ಕಪಿಲಾ ಟೆಕ್ಸ್‌ಟೈಲ್ಸ್‌ನ ಕಟ್ಟಡದ ಕೆಲಸ ನಡೆಯುತ್ತಿದ್ದಾಗ, ಡೈರೆಕ್ಟರು ಹತರಾದರು. ಈ ಅನಾಹುತಕ್ಕೆ ಕಾರಣ ಅಕ್ವಿಜಿಷನ್ ರಿಕಾರ್ಡು ಬೇಗ ಫೈಸಲಾಗದೇ ಇದ್ದದ್ದೇ ಎಂದು ಹೇಳುತ್ತೇನೆ. ಅದು ನಮ್ಮೆಲ್ಲರ ಗಮನಕ್ಕೆ ಬಂದಿರತಕ್ಕ ವಿಚಾರ. ಹಾಗೆ ನಮ್ಮ ಗಮನಕ್ಕೆ ಬಾರದೇ ಆಗುತ್ತಾ ಇರತಕ್ಕ ಅನಾಹುತಗಳು ಅನೇಕವಾಗಿವೆ. 1940–41ರಲ್ಲಿ ಅಕ್ವೈರ್ ಆಗಬೇಕಾದದ್ದು ಇನ್ನೂ ಆಗಿಲ್ಲವೆಂದು ಕೇಳಿದ್ದೇನೆ. ಅಷ್ಟೇ ಏಕೆ, 15 ವರ್ಷಗಳ ಹಿಂದಿನ ರಿಕಾರ್ಡುಗಳೂ ಇವೆ. ಈ ರೀತಿ ಸರ್ಕಾರದವರು ಮಂತ್ರಿಗಳು ಆಫೀಸಿನಲ್ಲಿ ವರ್ಷಗಟ್ಟಲೆ ಫೈಸಲ್ ಮಾಡದೆ ರಿಕಾರ್ಡುಗಳನ್ನು ಇಟ್ಟುಕೊಂಡರೆ ಹೇಗೆ? ಜನಗಳಿಗೆ ಯಾವ ಪರಿಹಾರ ಸಿಕ್ಕುತ್ತದೆ ಎಂಬುದನ್ನು ನಾನು ಹೇಳಲಿ! ಹೀಗೆ ನಿಧಾನವಾಗಿ ಅನೇಕ ಅನಾಹುತಗಳು ಜರುಗುತ್ತಾ ಇವೆ. ಜಗಳಗಳಾಗಿ ಪ್ರಾಣಗಳನ್ನು ಒಪ್ಪಿಸುತ್ತಾ ಇದ್ದಾರೆ. ಒಂದು ಪಾರ್ಟಿಗೂ ಇನ್ನೊಂದು ಪಾರ್ಟಿಗೂ ವ್ಯಾಜ್ಯ ನಡೆದು ಪ್ಲೀಡರುಗಳ ನ್ನಿಟ್ಟುಕೊಂಡು ಜನಗಳು ಕಷ್ಟಕ್ಕೆ ಗುರಿಯಾಗುತ್ತಾ ಇದ್ದಾರೆ. ಆದಕಾರಣ ಈ ನಿರ್ಣಯವನ್ನು ಮಂಡಿಸಿರತಕ್ಕ ಮಹನೀಯರ ಆಶಯ ಬಹಳ ಶ್ಲಾಘನೀಯವಾದದ್ದು. ನಿಜವಾಗಿಯೂ ಅದನ್ನು ಅನುಸರಿಸಿದ್ದೇ ಆದರೆ ಬಹಳ ಪ್ರಯೋಜನವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಏನಿಲ್ಲದೇ ಇದ್ದರೂ ಒಬ್ಬ ಮನುಷ್ಯನಿಗೆ ತೊಂದರೆ ಕೊಡಬೇಕೆಂದು ಮಾಡುವುದೂ ಉಂಟು. ಯಾರಾದರೂ ಆಗದೆ ಇದ್ದವರು ಅಕ್ವೈರ್ ಮಾಡಿಕೊಡಿ ಎಂದು ಅರ್ಜಿ ಹಾಕುವುದೂ ಇದೆ. ಆದಕಾರಣ ಜವಾಬ್ದಾರಿಯುತವಾದ ಅಧಿಕಾರಿಗಳಿಗೆ ಎಂದರೆ ಡೆಪ್ಯುಟಿ ಕಮೀಷನರಿಗೆ ಮತ್ತು ಸಬ್‌ಡಿವಿಜನ್ ಆಫೀಸರಿಗೆ ಅಧಿಕಾರ ಕೊಟ್ಟ ಪಕ್ಷದಲ್ಲಿ ಅಂಥಾ ಅರ್ಜಿಗಳು ಬಂದಾಗ ಅವರು ತಕ್ಷಣ ಆ ಸ್ಥಳಕ್ಕೆ ಬಂದು ನೋಡಿ ಫೈಸಲು ಮಾಡಿದರೆ ಎಷ್ಟೋ ಅನಾಹುತಗಳಾಗುವುದನ್ನು ತಪ್ಪಿಸಬಹುದು. ಕೋರ್ಟುಗಳಿಗೆ ಹೋಗಿ ಬಡವರ ಹಣ ವ್ಯಥಾ ದುರ್ವ್ಯಯವಾಗುವುದನ್ನು ತಪ್ಪಿಸಬಹುದು. ಅನೇಕ ಕೇಸುಗಳಲ್ಲಿ ನೋಡಿದ್ದೇನೆ. ಒಬ್ಬೊಬ್ಬನ ಹತ್ತಿರ ನೂರು ನೂರು ರೂಪಾಯಿಗಳನ್ನು ಕಿತ್ತುಕೊಂಡಿರುವ ನಿದರ್ಶನಗಳಿವೆ. ಆದ್ದರಿಂದ ಈ ನಿರ್ಣಯದ ಉದ್ದೇಶ ಜಾರಿಗೆ ಬಂದರೆ ಅದು ನಿಜವಾಗಿಯೂ ನಿಲ್ಲುತ್ತದೆ ಎಂದು ಹೇಳಿ ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

*ಶ್ರೀ ಎಚ್. ಸಿದ್ದಯ್ಯನವರು.—ಈ ವಿಚಾರ ಬಹು ಮಟ್ಟಿಗೆ ಒಪ್ಪಿಕೊಳ್ಳತಕ್ಕದ್ದಾಗಿದೆ. ಗ್ರಾಮಗಳಲ್ಲಿ, ಅಷ್ಟೇ ಏಕೆ, ಆ ಪಟ್ಟಣಗಳಲ್ಲಿಯೂ ಕೂಡ ಇದರ ಅವಶ್ಯಕತೆ ಹೆಚ್ಚಾಗಿದೆ ಎಂಬುದನ್ನು ಸದಸ್ಯರು ತಿಳಿಸಿದ್ದಾರೆ. ಅನೇಕ ಸಂದರ್ಭಗಳಲ್ಲಿ ಜಮೀನ್ದಾರರ ಆಕ್ಷೇಪಣೆಗಳನ್ನು ಕೇಳತಕ್ಕದ್ದು ನ್ಯಾಯಸಮ್ಮತವಾಗಿದೆ ಎಂಬುದು ಅನೇಕ ಕೇಸುಗಳಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದಕ್ಕೆ ಕಾರಣ ಇಷ್ಟೇ. ಕೆಲವು ಗ್ರಾಮಗಳಲ್ಲಿ ಇರತಕ್ಕ ಪಾರ್ಟಿ ವೈಷಮ್ಯದಿಂದ ಅನ್ಯಾಯವಾಗಿ ಒಂದು ಜಮೀನಿನ ಮಾಲೀಕರಿಗೆ ತೊಂದರೆಯಾಗತಕ್ಕ ಕಾಲದಲ್ಲಿ ಅಕ್ವಿಜಿಷನ್ ರೂಲ್ಸ್ ಸೆಕ್ಷನ್ 4, 5, 6 ರ ಪ್ರಕಾರ ಹೋಗತಕ್ಕದ್ದು ಸರಿಯಾದ ಮಾರ್ಗ ಎಂದು ಹೇಳಬೇಕಾಗಿದೆ. ವಿಶೇಷ ಸಂದರ್ಭಗಳಲ್ಲಿ ನಿಮ್ಮ ವರ್ಗದವರ ಅವಶ್ಯಕತೆಗೆ ಸೈಟುಗಳನ್ನು ಕೊಡಬೇಕಾದಂಥ ಕಾಲದಲ್ಲಿ ಅಥವಾ ಇನ್ನೂ ವಿಶೇಷ ಸಂದರ್ಭಗಳಲ್ಲಿ ವಿಶೇಷರೀತಿಯ ಕ್ರಮ ಸೂಚಿಸತಕ್ಕದ್ದು ಅವಶ್ಯಕ ಎಂದು ಕಂಡು ಬಂದಿದೆ ಎಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಅದನ್ನೂ ತಿಳಿಸುತ್ತೇನೆ. ಈ ಆಕ್ಟಿನ 17ನೆಯ ಸೆಕ್ಷನ್ ಪ್ರಕಾರ ಅವರಿಗೆ ಅಧಿಕಾರ ವಹಿಸಿ ಕೊಟ್ಟಿದೆ. ಯಾವ ಪ್ರದೇಶವನ್ನು ಸ್ವಾಧೀನ ಮಾಡಿಕೊಳ್ಳಬೇಕೆಂದು ನಿರ್ಧರಿಸಲಾಗುತ್ತದೆಯೋ ಅಂಥಾ ಪ್ರದೇಶವನ್ನು ಒಟ್ಟಿಗೆ ಪೂರ್ತಿಯಾಗಿ ಒಂದೇ ಸಾರಿ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಿ, ಹಾಗೆ ಬಹಿರಂಗ ಪಡಿಸಿದ 15 ದಿನಗಳ ವಾಯಿದೆಯೊಳಗಾಗಿ ಆ ಪ್ರದೇಶವನ್ನು ಸ್ವಾಧೀನಕ್ಕೆ ಪಡೆಯಲಾಗುತ್ತೆಂದು ಅದರಲ್ಲಿ ವಿಸ್ತರಿಸಿ ತಿಳಿಸಿರುವುದರಿಂದ, ಇನ್ನು ಮುಂದೆ ಅಷ್ಟು ನಿಧಾನವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇನ್ನೂ ಕೆಲ ಕೆಲವು ಮಹನೀಯರು ಕೆಲವು ರೀತಿಯಲ್ಲಿ ಇದೇ ವಿಚಾರವನ್ನು ಸ್ಪಷ್ಟ ಪಡಿಸಿದ್ದಾರೆ. ಹಿಂದೆ ಕೆಲವು ಸಂದರ್ಭಗಳಲ್ಲಿ ಹಾಗೆ ಕಾರಣಾಂತರಗಳಿಂದ ವರ್ಷಾನುಗಟ್ಟಲೆ ಕೆಲವುವೇಳೆ 15-18 ವರ್ಷಗಳವರೆಗೂ ಪತ್ರ ವ್ಯವಹಾರ ನಡೆದಿರುವಂಥ ನಿದರ್ಶನಗಳೂ ಇವೆ. ಅದೂ ನಿಜ. ಆದರೆ ಅದೆಲ್ಲ ಬಹಳ ಹಿಂದಿನ ಕಥೆಯಾಯಿತು. ಇತ್ತೀಚೆಗೆ 2½ ವರ್ಷಗಳಿಂದ ಈ ನಿವೇಶನಗಳ ಬಗ್ಗೆ ಬಂದಿದ್ದಂಥಾ 650 ಅರ್ಜಿಗಳ ಪೈಕಿ ಈಗಾಗಲೇ 400 ಅರ್ಜಿಗಳು ಮಂಜೂರಾತಿಯನ್ನು ಪಡೆದಿವೆ. ಈ ಅಂಶವನ್ನು ತಿಳಿಸಿದ ಮೇಲೆ ಎಷ್ಟರಮಟ್ಟಿಗೆ ಜಾಗ್ರತೆಯಿಂದ ಈ ಕೆಲಸ ನಡೆಯುತ್ತಿದೆಯೆಂಬುದರ ವಿಷಯವನ್ನು ಇನ್ನೂ ಲಂಬಿಸಿ ಹೇಳಬೇಕಾದುದು ಅನಗತ್ಯ.

ಶ್ರೀಮಾನ್ ಎಚ್. ಬಿ. ಗುಂಡಪ್ಪಗೌಡರು ಈ ಬಗ್ಗೆ ಕೆಲವು ಬದಲಾವಣೆಗಳು ಅವಶ್ಯಕವಾಗಿರುತ್ತೆಂದು ತಿಳಿಸಿದ್ದಾರೆ. ಇದನ್ನು ಸರ್ಕಾರದವರು ಗ್ರಾಮಾಭಿವೃದ್ಧಿಯ ದೃಷ್ಟಿಯಿಂದ ಪರಿಶೀಲನೆ ಮಾಡುತ್ತಾರೆಂದು ತಿಳಿಸಿದರೆ ಸಾಕಾಗಿದೆ. ಈ ಖೋತಾ ಸೂಚನೆಯನ್ನು ತಂದಿರತಕ್ಕ ಶ್ರೀಮಾನ್ ಟಿ. ಹನುಮಯ್ಯನವರ ಮುಖ್ಯೋದ್ದೇಶ. ಈ ಮೂಲಕ ನಿಮ್ಮ ವರ್ಗದವರಿಗೆ ಆದಷ್ಟು ಬೇಗ ನಿವೇಶನಗಳು ದೊರೆಯು

ವಂತೆ ಮಾಡಬೇಕೆಂಬುದೇ ಆಗಿದೆ. ಈ ಬಗ್ಗೆ ಒಂದಂಶವನ್ನು ತಿಳಿಸಿದರೆ ಸಾಕಾಗಿದೆ. ಇಲ್ಲಿಯವರೆಗೆ ಫೈಸಲಾಗಿರುವ ಸುಮಾರು 60) ದರಖಾಸ್ತುಗಳಲ್ಲಿ ಈ ನಿಮ್ನ ವರ್ಗದವರ ದರಖಾಸ್ತುಗಳೇ ವಿಶೇಷವಾಗಿವೆ ಮತ್ತು ಎಲ್ಲೆಲ್ಲಿ ಅನುಕೂಲವಾದ ಸನ್ನಿವೇಶಗಳಿವೆಯೋ ಅಲ್ಲೆಲ್ಲ ಮೊದಲು ಈ ನಿಮ್ನ ವರ್ಗದವರಿಗೆ ಅವುಗಳನ್ನು ಅಕ್ವೈರ್ ಮಾಡಿಕೊಂಡು, ಆದಷ್ಟು ಬೇಗ ಅವುಗಳನ್ನು ಇತ್ಯರ್ಥಪಡಿಸಬೇಕೆಂಬುದಾಗಿ ಕಾನೂನಿನಲ್ಲೇ ಒಂದು ವಿಶೇಷ ಅವಕಾಶವನ್ನು ಒದಗಿಸಲಾಗಿದೆ. ಈ ಬಗ್ಗೆ ಗ್ರಾಮಪಂಚಾಯಿತಿಗೆ ಸಂಬಂಧಪಟ್ಟ ನಿಬಂಧನೆಗಳನ್ನೂ ಇದಕ್ಕನುಗುಣವಾಗಿ ಮಾರ್ಪಾಡು ಮಾಡಲಾಗಿದೆ.

ಇನ್ನು ಈ ನಿಮ್ನವರ್ಗದವರಿಗಾಗಿ ಸ್ವಾಧೀನಪಡಿಸಿಕೊಳ್ಳುವ ನಿವೇಶನದ ಜಮೀನಿನ ಖರ್ಚನ್ನೂ ಸಹ ಸರ್ಕಾರದವರೇ ಸೂಕ್ತ ಕಂಡುಬರುವ ಕಡೆ ವಹಿಸಿಕೊಳ್ಳಲು ಒಂದು ಲಕ್ಷ ಅರವತ್ತೇಳು ಸಾವಿರ ರೂಪಾಯಿಗಳ ನಿಧಿಯನ್ನು ಒದಗಿಸಿದ್ದೇವೆ. ಇದರ ವಿಚಾರದಲ್ಲಿ ಈಗಿನ ಸರ್ಕಾರ ವಿಶೇಷ ಆಸಕ್ತಿ ವಹಿಸಿ, ಹೆಚ್ಚಿನ ಗಮನಕೊಟ್ಟು ಕೆಲಸಗಳನ್ನು ನಡೆಸುತ್ತಿದ್ದಾರೆ. ಇದಕ್ಕಿಂತಲೂ ಹೆಚ್ಚಿನ ಆಸಕ್ತಿ ವಹಿಸಿ ಕೆಲಮಾಡಬೇಕೆಂದು ಹೇಳಿರತಕ್ಕದ್ದನ್ನೂ ನಾನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ಇನ್ನೂ ಹೆಚ್ಚು ತೃಪ್ತಿಕರವಾಗುವ ರೀತಿ ಕೆಲಸ ಕಾರ್ಯಗಳನ್ನು ನೆರವೇರಿಸಲಾಗುತ್ತದೆಂಬ ಭರವಸೆಯನ್ನು ಸಹ ನಾನು ತಮಗೆ ನೀಡುತ್ತೇನೆ.

Sri A. BHEEMAPPA NAIK.—Will the Hon'ble Minister give us an assurance that he would bring in a Bill for making necessary changes just as they have done in Madras?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಾನೂ ಸಹ ಕೆಲವು ಸಲಹೆಗಳನ್ನು ಮಾಡಿದ್ದೆ. ಈಗ ತಾವೇನು ಹೇಳಿದಿರಿ ?

ಶ್ರೀ ಎಚ್. ಸಿದ್ದಯ್ಯನವರು.—ಅವುಗಳನ್ನೆಲ್ಲ ಪರಿಶೀಲನೆ ಮಾಡಲಾಗುತ್ತದೆಂದು ತಿಳಿಸಿದ್ದೇನೆ.

Sri T. HANUMIAH.—In view of the assurance given by the Hon'ble Minister, I wish to withdraw my cut motion.

The cut motion was, by leave of the Assembly, withdrawn.

Revision of rates of Royalty on bricks, li estone, ores, etc.

Sri T. MADIAH GOWDA.—Sir, I beg to move:

"That the demand under the head '1. Land Revenue' for Rs. 48,82,000 be reduced by Re. 1 (to urge the revision of rate of royalty on bricks, limestone, ores, etc.)"

ಸ್ವಾಮಿ, ಈ ಕತ್ತರಿ ನಿರ್ಣಯವನ್ನು ಪುಷ್ಟೀಕರಿಸುತ್ತ ನಾನು ಒಂದೆರಡು ಮಾತುಗಳನ್ನಾಡಲಿಚ್ಛಿಸುತ್ತೇನೆ. ಲ್ಯಾಂಡ್ ರೆವೆನ್ಯೂ ಬಾಬಿನಲ್ಲಿ ಲಕ್ಷಾಂತರ ರೂಪಾಯಿಗಳ ವರಮಾನ ಬರುವ ಕಡೆ, ಈ ಸುಣ್ಣಕಲ್ಲು, ಇತ್ಯಾದಿ ಖನಿಜ ಸಂಪತ್ತುಗಳಿರುವ ಕಡೆ, ನಮ್ಮ ದೇಶದಲ್ಲಿ ಈ ಬಾಬುಗಳಿಂದ ಬರುತ್ತಿರುವ ವರಮಾನ ತೀರಾ ಕಡಿಮೆ. 2 ಲಕ್ಷ ರೂಪಾಯಿಗಳಷ್ಟು ಕೂಡ ಇಲ್ಲ. ಈ ಬಾಬಿನಲ್ಲಿ ಹೆಚ್ಚು ನಷ್ಟವಾಗುತ್ತಿದೆ. ಬಡ್ಜೆಟ್ ಪುಸ್ತಕದ 27ನೆಯ ಪುಟದಲ್ಲಿ 'ಲ್ಯಾಂಡ್ ರೆವೆನ್ಯೂ' ಬಾಬಿನ ಕೆಳಗಡೆ ಮಿಸಲೇನಿಯಸ್ ಎಂಬ ಬಾಬಿನ 9ನೆಯ ಐಟಂನಲ್ಲಿ, ಅನೇಕ ಬಾಬುಗಳನ್ನು ಒಟ್ಟುಗೂಡಿಸಿ ಒಂದು ಲಕ್ಷ 90 ಸಾವಿರ ಚಿಲ್ಲರೆ ರೂಪಾಯಿಗಳನ್ನು ತೋರಿಸಿದ್ದಾರೆ.

ಈ ಲೈಂ ಸ್ಟೋನ್ ಮತ್ತು ಬ್ರಿಕ್ಸ್ ಇತ್ಯಾದಿ ಕೆಲವು ಬಾಬುಗಳಲ್ಲಿ ಕೇವಲ 1 ಲಕ್ಷ 90 ಸಾವಿರ ರೂಪಾಯಿಗಳ ವರಮಾನ ಬರುತ್ತಿರುವುದನ್ನು ನೋಡಿದರೆ, ನನಗೆ ಅನ್ನಿಸುತ್ತಿದೆ, ಒಂದು ನಿಗದಿಯಾದ ತತ್ವವನ್ನಿಟ್ಟುಕೊಂಡು ಒಂದನ್ನೂ ಬಿಡದಂತೆ ನೋಡಿಕೊಂಡಿದ್ದರೆ ಇನ್ನೂ 30—40 ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡಬಹುದಾಗಿತ್ತು ಎಂದು. ಸರ್ಕಾರದವರು ಇದನ್ನು ಆಲೋಚನೆ ಮಾಡಬೇಕಾಗಿದೆ. ನಮ್ಮ ದೇಶದಲ್ಲಿ ಅಂಥಾ ಖನಿಜ ಸಂಪತ್ತು ಹೇರಳವಾಗಿರುವುದರಿಂದ, ದೇಶದ ವರಮಾನವನ್ನು ಆ ಮೂಲಕ ಹೆಚ್ಚಿಸಿಕೊಳ್ಳಲು ನಮಗೆ ಅನುಕೂಲವಾದ ಸನ್ನಿವೇಶಗಳಿವೆ. ಇಂಥಾ ಕೆಲವು ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಲು ನಾನು ಈ ಕತ್ತರೀ ನಿರ್ಣಯವನ್ನು ತಂದಿದ್ದೇನೆ.

ಇದೇ ಸಂದರ್ಭದಲ್ಲಿ ನಾನು ಮತ್ತೊಂದು ಅಂಶವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಈ ಸಂದರ್ಭದಲ್ಲಿ ತಾವು ಇವುಗಳ ಮೇಲೆ ಹಾಕುತ್ತಿರುವ 'ರಾಯಲ್ಟಿ ಟ್ಯಾಕ್ಸನ್ನು' ಸರಿಯಾದ ಕ್ರಮದಲ್ಲಿ ಹಾಕುತ್ತಿಲ್ಲ. ಅದನ್ನು ರಿವೈಸ್ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ತಾವು ತಿಳಿಸುತ್ತಿರುವುದು ಹೆಚ್ಚಿಸಬೇಕೆಂದೋ ಅಥವಾ ತಗ್ಗಿಸಬೇಕೆಂದೋ ?

ಶ್ರೀ ಟಿ. ಮಾದಯ್ಯಗೌಡರು.—ಅದು ಹೇಗಾದರೂ ಆಗಬಹುದು.

Sri L. SIDDAPPA.—What are definite views of the Hon'ble Member ; Has it to be increased or reduced?

ಶ್ರೀ ಟಿ. ಮಾದಯ್ಯಗೌಡರು.— ಅದು ಹೆಚ್ಚಾದರೂ ಆಗಬಹುದು ; ಕಮ್ಮಿ ಆದರೂ ಆಗಬಹುದು.

Mr. SPEAKER.—Cut motion moved:

"That the demand under the head '1. Land Revenue' for Rs. 48,82,000 be reduced by Rs. 100."

* ಶ್ರೀ ಎಸ್. ರಂಗರಾಮಯ್ಯನವರು.—ಈಗ ತಾವು ಸುಣ್ಣ ಸುಡತಕ್ಕವರ ಮೇಲೆ ಮತ್ತು ಇಟ್ಟಿಗೆ ಸುಡತಕ್ಕವರ ಮೇಲೆಯೂ ಯಾವ ರಾಯಲ್ಟಿಯನ್ನೂ ವಿಧಿಸುತ್ತಿಲ್ಲವೆಂಬುದಾಗಿ ತಿಳಿಸಲಾಗಿದೆ. ಇಂಥಾ ಬಾಬುಗಳಿಂದಲೂ ವಿಶೇಷ ವರಮಾನ ಬರುತ್ತದೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ. ಆದಕಾರಣ ಶ್ರೀ ಟಿ. ಮಾದಯ್ಯಗೌಡರು ತಂದಿರುವ ಕತ್ತರಿ ನಿರ್ಣಯವನ್ನು ನಾನು ಸಮರ್ಥಿಸುತ್ತೇನೆ.

ಇತ್ತೀಚೆಗೆ ಅನೇಕ ಕಡೆಗಳಲ್ಲಿ ಈಗ ಮಣ್ಣಿನ ಮನೆಗೆ ಬದಲಾಗಿ ಇಟ್ಟಿಗೆಯಿಂದಲೇ ಮನೆಗಳನ್ನು ಕಟ್ಟಲು ಪ್ರಾರಂಭ ಮಾಡಿದ್ದಾರೆ. ಇದು ಒಂದು ಸಂತೋಷದ ವಿಚಾರವೇ ಹೌದು.

ಆದರೆ ಈ ಉದ್ದೇಶದಿಂದ ಅನೇಕ ಕಡೆ ಫಲವತ್ತಾದ ಜಮೀನುಗಳನ್ನೂ ಮತ್ತೂ ನೀರಿನ ಹತ್ತಿರವಿರತಕ್ಕ ಜಮೀನುಗಳನ್ನೂ ಹಾಳು ಮಾಡಿಬಿಟ್ಟಿದ್ದಾರೆ. ದೊಡ್ಡ ದೊಡ್ಡ ಗುಂಡಿಗಳನ್ನು ತೋಡಿದು ಅಲ್ಲಿ ಯಾವ ವ್ಯವಸಾಯ ಮಾಡಲಿಕ್ಕೂ ಜಮೀನು ನಾಲಾಯಕ್ಕಾಗುವಂತೆ ಮಾಡಿದ್ದಾರೆ. ಆದ್ದರಿಂದ ಈ ಬಾಬಿನ ಮೇಲೂ ತಾವು ಒಂದು ರಾಯಲ್ಟಿ ಹಾಕುವುದಲ್ಲದೆ, ಹಾಗೆ ಜಮೀನುಗಳನ್ನು ಹಾಳು ಮಾಡದಂತೆ, ತಮಗೆ ಬೇಕಾದ ಇಟ್ಟಿಗೆ ವಗೈರೆಗಳನ್ನು ಮಾಡಿಕೊಂಡ ನಂತರ ಆ ಗುಂಡಿಗಳನ್ನೆಲ್ಲಾ ಮುಚ್ಚುವಂತೆ ಮಾಡಬೇಕಾದ್ದು ಅತ್ಯಗತ್ಯ. ಇದಕ್ಕಾಗಿ ಸರ್ಕಾರದವರು ರೆವೆನ್ಯೂ ಇಲಾಖೆಯ ಮೂಲಕ, ರೆವೆನ್ಯೂ ಇನ್‌ಸ್ಪೆಕ್ಟರುಗಳಿಗೆ ಈ ಕೆಲಸ ವಹಿಸಿ ಮಾಡಿಸತಕ್ಕದ್ದು ಅಗತ್ಯವಾದುದೆಂದು ತಿಳಿಸುತ್ತೇನೆ.

ಆಮೇಲೆ, ಎರಡನೆಯದಾಗಿ ಸುಣ್ಣಕಲ್ಲಿನ ವಿಚಾರದಲ್ಲಿ ನಾನು ಹೇಳಬೇಕಾದ್ದಿಷ್ಟೆ. ಇದರ ಮೇಲೂ ಸರಿಯಾಗಿ ರಾಜಾದಾಯವನ್ನು ತೆಗೆದುಕೊಳ್ಳುವುದಕ್ಕೆ ತಕ್ಕ ಏರ್ಪಾಡು ಮಾಡಿದರೆ ಇನ್ನು ಹೆಚ್ಚಿಗೆ ಆದಾಯ ಬರುತ್ತದೆ ಆದ್ದರಿಂದ ಸರ್ಕಾರದವರು ಇದಕ್ಕೆ ಗಮನ ಕೊಟ್ಟು ಹೆಚ್ಚಿಗೆ ಆದಾಯ ಬರುವಂತೆ ಮಾಡಬೇಕು ಮತ್ತು ಜಮೀನು ಹಾಳಾಗದಂತೆ ನೋಡಿಕೊಳ್ಳಬೇಕು.

ಶ್ರೀ ಎ. ಭೀಮಪ್ಪನಾಯಕರು.—ಇಟ್ಟಿಗೆ ಮತ್ತು ಸುಣ್ಣಕಲ್ಲುಗಳಾದ ಮೇಲೆ ಮೂರನೆಯದಾದ ಅದಿರುಗಳ ವಿಷಯದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡಬೇಕಾಗಿದೆ. ಮ್ಯಾಂಗನೀಸ್ ಅದಿರು ಕಬ್ಬಿಣದ ಅದಿರು ಮುಂತಾಗಿ ಅನೇಕ ಅದಿರುಗಳು ನಮ್ಮ ದೇಶದಲ್ಲಿವೆ. ಕಬ್ಬಿಣದ ಅದಿರೇನೋ ಭದ್ರಾವತಿ ಕಬ್ಬಿಣದ ಕಾರ್ಖಾನೆಯವರು ಉಪಯೋಗಿಸಿಕೊಳ್ಳುತ್ತಾರೆ. ಇದು ಬಿಟ್ಟು ಇನ್ನೂ ಅನೇಕ ತರದ ಖನಿಜಗಳು ನಮ್ಮ ದೇಶದಲ್ಲಿವೆ. ಈ ಖನಿಜಗಳಿಂದೆಲ್ಲಾ ಬೇಕಾದಷ್ಟು ರಾಜಾದಾಯವನ್ನು ತೆಗೆದುಕೊಳ್ಳಬಹುದು. ನನ್ನ ಅಭಿಪ್ರಾಯದಲ್ಲಿ ಈ ಖನಿಜ ಸಂಪತ್ತಿಯಿಂದ ಬರುವ ಆದಾಯವನ್ನೇ ಬೇರೆಯಾಗಿ ತೋರಿಸುವುದಕ್ಕೆ ಏರ್ಪಾಡು ಮಾಡಬೇಕು. ಒಂದು ವಿಧದಲ್ಲಿ ಭದ್ರಾವತಿ ಕಬ್ಬಿಣದ ಕಾರ್ಖಾನೆಯ ವಿಚಾರದಲ್ಲೂ ಸಹ ಆ ಕಾರ್ಖಾನೆಯ ಆದಾಯವನ್ನೆಲ್ಲಾ ಒಟ್ಟಾಗಿ ಲೆಕ್ಕಹಾಕುವ ಬದಲು ಅದೇ ಬೇರೆ ಕಂಪೆನಿಯಾಗಿದ್ದು ಕಬ್ಬಿಣದ ಅದಿರನ್ನು ತೆಗೆದುಕೊಂಡಿದ್ದರೆ ಎಷ್ಟು ಕೊಡಬೇಕಾಗುತ್ತಿತ್ತೊ ಅದನ್ನು ಬೇರೆ ಲೆಕ್ಕ ಮಾಡಿದರೆ, ಆಗ್ಗೆ ನಮ್ಮ ಭದ್ರಾವತಿ ಕಾರ್ಖಾನೆಯು ಸರಿಯಾಗಿ ಕೆಲಸ ಮಾಡುತ್ತಿದೆಯೇ ಅಥವಾ ಇಲ್ಲವೇ ಎಂಬುದೂ ಗೊತ್ತಾಗುತ್ತದೆ. ಅದಿರಿನ ಮೇಲೆ ಬೇರೆ ದರ ವಿಧಿಸಿ ಅದನ್ನು ಪ್ರತ್ಯೇಕವಾಗಿ ಈ head ನಲ್ಲಿ ಆದಾಯವೆಂದು ತೋರಿಸಬೇಕೆಂದು ನನ್ನ ಸಲಹೆ. ಅದೇ ರೀತಿ ಮ್ಯಾಂಗನೀಸ್ ಕಂಪೆನಿಯ ವಿಷಯವು ಆಗಿದೆ. ಕಂಪೆನಿಯವರು ನಮ್ಮ ಮ್ಯಾಂಗನೀಸ್ ಅದಿರೆಲ್ಲವನ್ನೂ ಹೊರದೇಶಕ್ಕೆ ಕಳುಹಿಸಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸುತ್ತಿದ್ದಾರೆಂಬುದನ್ನು ಸರ್ಕಾರದವರ ಗಮನಕ್ಕೆ ತರಬಿಚ್ಛಿಸುತ್ತೇನೆ. ಹೀಗೆ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸುತ್ತಿರುವವರು, ಅವರಿಗೆ ಯಾವ ಲಾಭವೂ ಸಿಕ್ಕದೆ ಇರುತ್ತಿದ್ದ ಸಮಯದಲ್ಲಿ ಯಾವ ದರದಲ್ಲಿ ಸರ್ಕಾರಕ್ಕೆ ರಾಜಾದಾಯವನ್ನು ಕೊಡುತ್ತಿದ್ದರೋ ಅದೇ ದರದಲ್ಲಿ ಈಗಲೂ ಕೊಡುತ್ತಿರುವುದು ಸರ್ವಥಾ ಸರಿಯಲ್ಲ. ಇದನ್ನು ತಾವು ಬಹಳಮಟ್ಟಿಗೆ ಹೆಚ್ಚು ಮಾಡಬೇಕು. ಹಾಗೆಯೇ ನಮ್ಮ ಸಂಸ್ಥಾನದಲ್ಲಿ ಕೊಡುತ್ತಿರತಕ್ಕ prospecting licences. ಈಗ 100 ರೂಪಾಯಿಗಳನ್ನು ಕೊಟ್ಟರಾಯಿತು, ಮೈಸೂರು ದೇಶದಲ್ಲಿ ಎಲ್ಲಿ ಬೇಕಾದರೂ prospect ಮಾಡಬಹುದು. ಹಾಗೆಯೇ ಪೋರ್ಸಿಲೀನ್ ಕಂಪೆನಿಯವರು ಒಂದು ತರದ ಬಿಳೀ ಮಣ್ಣನ್ನು ತಂದು ಉಪಯೋಗಿಸುತ್ತಾರೆ. ಇದರಿಂದ ಅವರು ಬೇಕಾದಷ್ಟು ಆದಾಯ ಹೊಂದುತ್ತಾ ಇದ್ದಾರೆ. ಸರ್ಕಾರದವರು ಇದರಲ್ಲೂ ಒಂದು ಭಾಗ ತೆಗೆದುಕೊಳ್ಳುವುದು ಸಮಂಜಸವಾಗಿದೆ. ಆದ್ದರಿಂದ ನಮ್ಮ ದೇಶದ ಖನಿಜ ಸಂಪತ್ತನ್ನೂ ಬೇರೆಯವರು ಏನೇನು ಉಪಯೋಗಿಸುತ್ತಿದ್ದಾರೋ ಅವರಿಂದ ನ್ಯಾಯವಾದ ಆದಾಯ ಬರುತ್ತಿಲ್ಲವೆಂದು ಶ್ರೀ ಮಾದಯ್ಯಗೌಡರು ತೋರಿಸಿಕೊಟ್ಟಿದ್ದಾರೆ. ಈಗ ಬಂಗಾರದಿಂದ ಹೇಗೆ ಲಾಭವನ್ನು ಪಡೆಯುತ್ತಿದ್ದೇವೆಯೋ ಹಾಗೆ ಇತರ ಲೋಹಗಳಿಂದಲೂ ತೆಗೆದುಕೊಳ್ಳುವುದು ಸೂಕ್ತ. ಈ ದೃಷ್ಟಿಯಿಂದ ನಮ್ಮ ದೇಶದಲ್ಲಿರುವ ಲೋಹಸಂಪತ್ತನ್ನು ಪರಿಶೀಲನೆ ಮಾಡಿ ಹೊರಗಡೆ ಯಾವ ದರವಿದೆ, ಮತ್ತು ಹೊರಗಡೆಗೆ ರಫ್ತಾಗುವ ಲೋಹಸಂಪತ್ತನ್ನು ಅಭಿವೃದ್ಧಿಪಡಿಸುವುದಕ್ಕೆ ಏನೇನು ಮಾಡಬೇಕೆಂದು ಮಾನ್ಯಸದಸ್ಯರು ಹೇಳಿದ್ದಾರೋ ಆ ಸಲಹೆಗಳನ್ನು ಸರ್ಕಾರದವರು ಅನುಸರಿಸಬೇಕೆಂದು ಕೋರುತ್ತೇನೆ.

ಶ್ರೀ ಎಂ. ಎಚ್. ಜೋಯಿಸರು.—ಅದಿರಿನ ವಿಷಯದಲ್ಲಿ ಶ್ರೀಮಾನ್ ಭೀಮಪ್ಪನಾಯಕರು ಹೇಳಿದ್ದಕ್ಕೆ ನನ್ನ ಪೂರ್ಣ ಅನುಮೋದನೆಯಿದೆ. ಇಟ್ಟಿಗೆಯ ವಿಚಾರದಲ್ಲಿ ಮಾತ್ರ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ರಾಜಾದಾಯವನ್ನು ನಾವು ಹಾಕುವಾಗ ಸಾಧಾರಣವಾಗಿ ಆಯಾ ಪದಾರ್ಥದ ಮಾರ್ಕೆಟ್ ದರವೇನಿದೆಯೆಂಬದನ್ನು ತಿಳಿದು ಮತ್ತು ಜನರಿಗೆ ಎಷ್ಟು ಉಪಯೋಗವಾಗುತ್ತದೆಂಬುದನ್ನು ಪರಿಶೀಲನೆಗೆ ತೆಗೆದುಕೊಂಡು ಗೊತ್ತುಮಾಡುವುದು ಒಂದು ತತ್ವ. ಹಿಂದೆ ಇಟ್ಟಿಗೆ ಸಾವಿರಕ್ಕೆ 6 ರೂಪಾಯಿ, 8 ರೂಪಾಯಿ ಇದ್ದುದು ಇಂದು 30-40-50 ರೂಪಾಯಿನ ವರೆಗೂ ಹೋಗಿದೆ. ಹೀಗಿದ್ದರೂ ನೀವು ದರವನ್ನು ರಿವೈಸ್ ಮಾಡಿಲ್ಲ. ಶ್ರೀಮಾನ್ ಮಾದಯ್ಯಗೌಡರು ತಮ್ಮ ಸೂಚನೆಯಲ್ಲಿ ಕೇವಲ 'ರಿವೈಸ್ ಮಾಡಬೇಕು' ಎಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಅಷ್ಟೇ ಹೇಳಿದರೆ ಸಾಲದು. ಹೆಚ್ಚಿಗೆ ದುಡ್ಡು ಬರುವ ಉದ್ದೇಶದಿಂದಲೇ ರಿವೈಸ್ ಮಾಡಬೇಕು. ಇದನ್ನು ರಿವೈಸ್ ಮಾಡುವುದರಲ್ಲಿ ಇಟ್ಟಿಗೆಗೂ, ಸೌದೆಗೂ, ಹಾಗೆಯೇ ಸೌದೆಗೂ ಕಾಡಿಗೂ ಬಹಳ ಮಟ್ಟಿಗೆ ಸಂಬಂಧವಿದೆ. ಇಟ್ಟಿಗೆ ಹೆಚ್ಚಿಗೆ ಸುಡುವುದು ಸಾಧುವಾದರೂ ಕೂಡ ಎಷ್ಟರಮಟ್ಟಿಗೆ ನಮ್ಮ natural resources ಉಳಿಸಿಕೊಂಡು ಇದನ್ನು ಸಾಧಿಸಬೇಕಾಗಿದೆಯೆಂಬದನ್ನೂ ಯೋಚನೆಮಾಡಬೇಕು. ಆದ್ದರಿಂದಲೇ ಹೆಚ್ಚಿಗೆ ಉತ್ಪತ್ತಿಬರುವ ರೀತಿಯಲ್ಲೇ ರಿವೈಸ್ ಮಾಡಬೇಕೆಂದು ನನ್ನ ಸಲಹೆ.

ಶ್ರೀ ಬಿ. ಎಚ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಈಗ ನಮ್ಮ ಮಂತ್ರಿಮಂಡಳದವರು ಗ್ರಾನೈಟ್, ಆಸ್ಬೆಸ್ಟಾಸ್ ಮುಂತಾದುವುಗಳನ್ನು ತೆಗೆಯುವುದಕ್ಕೆ ಅವಕಾಶ ಕೊಟ್ಟು ಹೆಚ್ಚಿಗೆ ರಾಜಾದಾಯವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಲ್ಲವೆಂದು ನಾನೂ ಹೇಳುತ್ತೇನೆ. ಅನೇಕ ಕಡೆ ಈ ಪದಾರ್ಥಗಳನ್ನು ಹೊರದೇಶಕ್ಕೆ ಕಳುಹಿಸಿಕೊಟ್ಟು ಹೆಚ್ಚಿಗೆ ಆದಾಯ ಬಂದರೆ ರಾಯಲ್ಟಿ ಕೇಳುತ್ತಾರೆಂದೂ ನಷ್ಟವಾಗುತ್ತಿದೆಯೆಂದೂ ಹೇಳಿರುವುದು ನಮಗೆ ಗೊತ್ತಿದೆ. ಆದ್ದರಿಂದ ದೇಶದ ಸಂಪತ್ತನ್ನು ಜಾಸ್ತಿ ಮಾಡಬೇಕು. ನಮ್ಮ ದೇಶದ ಖನಿಜ ಸಂಪತ್ತನ್ನು ಇತರರಿಗೆ ಕೊಟ್ಟ ಮೇಲೆ, ಅವರು ಅದನ್ನು ಹೊರದೇಶಕ್ಕೆ ಕಳುಹಿಸುವಾಗ

ರಾಯಲ್ಟಿ ಕೊಡುವುದಕ್ಕೆ ವಿನಾಯಿತಿ ಕೊಡುವುದು ಸರಿಯಲ್ಲ. ಈಗಲೂ ನಮ್ಮ ದೇಶದಿಂದ ಆಸ್‌ಬೆಸ್ಟಾಸ್ ಮತ್ತು ಗ್ರಾನೈಟ್‌ಗಳನ್ನು ಬೇಕಾದಷ್ಟು ಹೊರಗೆ ಸಾಗಿಸಲಿಕ್ಕೆ ಅವಕಾಶ ಕೊಟ್ಟಿದ್ದೇವೆ. ಅವರು ನಮ್ಮಿಂದ ಹೀಗೆಲ್ಲಾ ಉತ್ಪತ್ತಿ ಮಾಡಿಕೊಳ್ಳುತ್ತಿದ್ದರೂ, ನಮ್ಮ ದೇಶದ ಖನಿಜ ಸಂಪತ್ತುಗಳಿಂದ ಹೊರಗಡೆಯವರು ಅಷ್ಟೊಂದು ಲಾಭ ಹೊಂದುತ್ತಿದ್ದರೂ, ಅವರಿಗೆ ಹೀಗೆ ರಾಜಾದಾಯದ ವಿನಾಯಿತಿ ಕೊಡುವುದು ತಪ್ಪು ಎಂದು ಹೇಳುತ್ತೇನೆ. ಹಿಂದಿನ ಸರ್ಕಾರದವರೇನೋ ಇದನ್ನು ಮಾಡಿದರೆನ್ನಬಹುದು. ಈಗ ಹೊಸ ಸರ್ಕಾರ ಬಂದ ಮೇಲಾದರೂ ಇದನ್ನು ಆಲೋಚನೆ ಮಾಡಿ ನಮ್ಮ ದೇಶಕ್ಕೆ ತಕ್ಕಮಟ್ಟಿಗೆ ಹಣ ಬರುವಂತೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ನಿರ್ಣಯದಲ್ಲಿ ores ಮತ್ತು bricks ಎಂದು ಹೇಳಿದ್ದಾರೆ. ಖನಿಜ ಸಂಪತ್ತು ಎಂಬುದಕ್ಕೂ ಇಟ್ಟಿಗೆ ವಿಷಯಕ್ಕೂ ಇದರಲ್ಲಿ ವ್ಯತ್ಯಾಸ ತೋರಿಸಿಲ್ಲ. ಸಾಮಾನ್ಯವಾಗಿ ರಸ್ತೆ ಮುಂತಾದ್ದಕ್ಕೆ ಜಲ್ಲಿ ಬೇಕಾಗುತ್ತದೆ. ಆದರೆ ಅದಿರು ಎನ್ನುವುದು commercial ವಿಷಯಕ್ಕೆ ಸಂಬಂಧಪಟ್ಟಂಥಾದ್ದು. ಆದ್ದರಿಂದ ಅದನ್ನು ಬಿಟ್ಟು ಜಲ್ಲಿ, ಇಟ್ಟಿಗೆ, ಗ್ರಾವೆಲ್ ಮುಂತಾದ ಮನೆಕಟ್ಟುವ ಪದಾರ್ಥಗಳಿಗೆ ಸಂಬಂಧಪಟ್ಟಂತೆ ಮಾತ್ರ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಏನೆಂದರೆ, ನಮ್ಮ ದೇಶದಲ್ಲಿ ಜಲ್ಲಿ, ಗ್ರಾವೆಲ್ ಮುಂತಾದುವುಗಳನ್ನೆಲ್ಲಾ ನಾವು ಸಾರ್ವಜನಿಕ ಕೆಲಸಗಳಿಗೇ ಉಪಯೋಗಿಸಿಕೊಳ್ಳುವುದು ಹೆಚ್ಚು. ಈ ವಸ್ತುಗಳನ್ನು ಅದರಲ್ಲೂ ಮುಖ್ಯವಾಗಿ ಪಬ್ಲಿಕ್ ವರ್ಕ್ಸ್ ಇಲಾಖೆಯವರೂ, ಡಿಸ್ಟ್ರಿಕ್ಟ್ ಬೋರ್ಡಿನವರೂ, ಗ್ರಾಮಾಭಿವೃದ್ಧಿ ಕಮಿಟಿಯವರೂ ಸಾರ್ವಜನಿಕ ಕಾರ್ಯಗಳಿಗೆ ಉಪಯೋಗಿಸಿಕೊಳ್ಳುವುದು ಜಾಸ್ತಿ. ಅವುಗಳಿಗೆ ಸಾಮಾನ್ಯವಾಗಿ ತಾವು ಹಣ ತೆಗೆದುಕೊಳ್ಳಲಿ, ಬಿಡಲಿ, ಸರ್ಕಾರಕ್ಕೆ ರಾಯಲ್ಟಿ ಸೇರಿಯೇ ಸೇರುತ್ತದೆ. ಎಷ್ಟೋ ಸಾರಿ ಎರಡು ಸಾರಿಯೂ ಕೊಟ್ಟಿರುತ್ತಾರೆ. ಲೈಸೆನ್ಸ್ ಪಡೆಯುವಾಗ ಟ್ರೆಜರಿಗೆ ಪಾವತಿ ಮಾಡುವುದಲ್ಲದೆ ಬಿಲ್ಲು ಪಾವತಿ ಮಾಡುವಾಗಲೂ ಸರ್ಕಾರಕ್ಕೆ ಜಮಾ ಆಗುತ್ತೆ. ಎಲ್ಲೆಲ್ಲಿ ಸಾರ್ವಜನಿಕ ಕೆಲಸಗಳಿಗಾಗಿ excavation ಮಾಡುತ್ತಾರೋ ಅಲ್ಲಿ ಬಿಟ್ಟುಕೊಡಬೇಕೆಂದು ಹೇಳುತ್ತೇನೆ.

ಇಟ್ಟಿಗೆಗಳನ್ನು ಮನೆಗಳಿಗೆ ಕಟ್ಟುವುದಕ್ಕೆ ಸಂಬಂಧಪಟ್ಟುದಾಗಿ ಎಲ್ಲೆಲ್ಲಿ ಮಾಡುತ್ತಾರೋ ಅಂಥಾ ಕಡೆಗಳಲ್ಲಿ ಹೆಚ್ಚಿಗೆ ತೆರಿಗೆಬೇಕಾಗಿಲ್ಲ. ಬೇರೆ ಎಲ್ಲಾದರೂ ಆದರೆ ತಾವು ಜಾಸ್ತಿ ಮಾಡಬಹುದೆಂದು ಹೇಳುತ್ತೇನೆ.

ಶ್ರೀ ಎಚ್ ಸಿದ್ದಯ್ಯನವರು.—ಅಧ್ಯಕ್ಷರೆ, ಈ ಸಲಹೆಯು ನಿಜವಾಗಿಯೂ ಬಹಳ ಉಪಯುಕ್ತವೂ ಮತ್ತು ನ್ಯಾಯವೂ ಆಗಿದೆಯಲ್ಲದೆ ಆದಾಯದಾಯಕವಾದುದೂ ಆಗಿದೆ. ಸಂಸ್ಥಾನಾವಳೆ ಒಂದೇ ರೀತಿಯಾಗಿರಲೆಂದು ಒಂದು ದರವನ್ನು ಈಗ ಹಾಕಲಾಗಿದೆ. ಇದರಿಂದ ಸರ್ಕಾರದ ಉತ್ಪತ್ತಿಯನ್ನು ನ್ಯಾಯವಾಗಿ ಹೆಚ್ಚು ಮಾಡಿಕೊಳ್ಳಲು ಅವಕಾಶವಿದ್ದರೂ ಕೂಡ ಇದುವರೆಗೆ ಹೆಚ್ಚಿಸಿಕೊಳ್ಳಲಿಲ್ಲ. ಈಗ ಈ ಸಲಹೆಯನ್ನು ಕೊಟ್ಟಿರುವುದಕ್ಕಾಗಿ ಮಾನ್ಯ ಸದಸ್ಯರನ್ನು ವಂದಿಸುತ್ತೇನೆ. ಸರ್ಕಾರದವರು ಈ ವಿಚಾರದಲ್ಲಿ ಸೂಕ್ತ ಬದಲಾವಣೆ ಮಾಡಬೇಕಾದುದು ಅವಶ್ಯಕವೆಂದು ಕಂಡುಬರುತ್ತದೆ. ರೆವೆನ್ಯೂ ಜಮೀನನ್ನು ಕಟ್ಟಡಗಳನ್ನು ಕಟ್ಟಲು ಉಪಯೋಗಿಸುವ ಕಾಲದಲ್ಲಿ ಆಯಾ ಸ್ಥಳದ ವಿದ್ಯಮಾನಗಳನ್ನು ಗಣನೆಗೆ ತೆಗೆದುಕೊಂಡು 'ಕನ್‌ವರ್ಷನ್ ಫೈನ್' ಎಂದು ವಿಧಿಸುತ್ತಾರೆ ಇದರಲ್ಲಿ ಬೇರೆಬೇರೆ ಕಡೆಗಳಿಗೆ ವ್ಯತ್ಯಾಸವಿದೆ ಎಕರೆಗೆ ಒಂದು ಸಾವಿರ, ಎರಡು ಸಾವಿರ, ಮೂರು ಸಾವಿರ, ನಾಲ್ಕು ಸಾವಿರ,—ಹೀಗೆ ನಾಲ್ಕು ದರಗಳಿವೆ. ಹೀಗೆಯೇ ಇನ್ನು ಕೂಡ ಬದಲಾಯಿಸುವುದು ಅವಶ್ಯಕವೆಂದು ತೋರುತ್ತದೆ. ಅದರಲ್ಲಿಯೂ ಕೆಲವು ಮಾನ್ಯ ಸದಸ್ಯರು ಸಲಹೆ ಮಾಡಿದ ಹಾಗೆ ಖನಿಜಗಳನ್ನು ಹೊರಗಡೆಗೆ ರಫ್ತು ಮಾಡುವುದರ ಮೇಲೆ ಹಾಕತಕ್ಕ ದರಗಳನ್ನೂ ಪಟ್ಟಣಗಳ ಹತ್ತಿರ ವಸೂಲು ಮಾಡುತ್ತಿರುವ ದರಗಳನ್ನೂ ಹೆಚ್ಚಿಸುವುದು ಸೂಕ್ತವೆಂದು ಮನಸ್ಸಿಗೆ ಹೊಳೆಯುತ್ತದೆ. ಇದನ್ನು ಸರ್ಕಾರದವರು ನಾನಾ ರೀತಿಯಲ್ಲಿ ಯೋಚನೆ ಮಾಡಿ, ಬದಲಾವಣೆ ಮಾಡುವುದು ಅವಶ್ಯಕವೆಂದು ಕಂಡುಬಂದರೆ, ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳುತ್ತೇನೆ.

ಶ್ರೀ ಟಿ. ಮಾದಯ್ಯಗೌಡರು.—ಮಾನ್ಯ ಮಂತ್ರಿಗಳು ಇಷ್ಟು ಹೇಳಿದ ಮೇಲೆ ಸಂತೋಷದಿಂದ ಈ ಖೋತಾ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

The cut motion was, by leave of the Assembly, withdrawn.

Reduction in the number of Districts.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ನನ್ನ ಈ ಖೋತಾ ಸೂಚನೆಯನ್ನು ಸಭೆಯ ಮುಂದಿಡುತ್ತೇನೆ :

"That the demand under the head 1. 'Land Revenue' for Rs. 48,82,000 be reduced by Re. 1 (to urge the necessity for reducing the number of Districts from the point of view of economy in the Finances)."

ಈ ಖೋತಾ ಸೂಚನೆಯು ಸಂಸ್ಥಾನದ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಎಷ್ಟು ಮುಖ್ಯವಾದುದೆಂಬುದನ್ನು ನಾನು ಹೇಳಲೇಬೇಕಾಗಿಲ್ಲ. ಅರ್ಥ ಸಚಿವರು ಈ ಸಾಲಿನ ಆಯವ್ಯಯವನ್ನು ಸರಿತೂಗಿಸಿ ಉಳಿತಾಯದ ಬಡ್ಜೆಟ್ಟನ್ನು ತೋರಿಸಬೇಕಾದರೆ ಎಷ್ಟು ಶ್ರಮ ಮತ್ತು ಬುದ್ಧಿವಂತಿಕೆಯನ್ನು ವಹಿಸಿದ್ದಾರೆಂಬುದನ್ನು ಈಗಾಗಲೇ ಅನೇಕ ಮಿತ್ರರು ಹೇಳಿದ್ದಾರೆ. ಅಲ್ಲದೆ ಅನೇಕ ಮಾನ್ಯ ಸದಸ್ಯರು ಆಯವ್ಯಯದ ಪಟ್ಟಿಯ ಮೇಲೆ ಮಾಡಿದ ಚರ್ಚೆಗಳಲ್ಲಿ ಆಡಳಿತದ ಅನೇಕ ಬಾಬುಗಳಲ್ಲಿ ಖರ್ಚನ್ನು ಹೇಗೆ ಕಡಿಮೆ ಮಾಡಬಹುದೆಂಬುದನ್ನೂ ಸೂಕ್ಷ್ಮವಾಗಿ ತಿಳಿಸಿದ್ದಾರೆ. ಹಣಕಾಸಿನ ವಿಲೀನೀಕರಣದಿಂದ ನಮ್ಮ ಸಂಸ್ಥಾನಕ್ಕೆ ಇದುವರೆಗೆ ಬರುತ್ತಿದ್ದ ಮೂರೂಕಾಲು ಕೋಟಿ ರೂಪಾಯಿ ಕೇಂದ್ರಕ್ಕೆ ಬಿಟ್ಟುಕೊಡಬೇಕಾಗಿದೆ. ಇನ್ನು ಐದು ವರ್ಷಗಳಲ್ಲಿ ನಮ್ಮ ಆದಾಯ ಕಡಿಮೆಯಾಗಬಹುದು. ಅಲ್ಲದೆ ಮುಂದೆ ನಾನಾ ದೇಶಾಭ್ಯುದಯ ಕಾರ್ಯಗಳಿಗೆ ಮಾಡಬೇಕಾಗಿರುವ ಖರ್ಚು ಈ ಆಯವ್ಯಯದ ಪಟ್ಟಿಯಿಂದ ಗೊತ್ತಾಗುತ್ತದೆ. ಒಟ್ಟಿನಲ್ಲಿ ನಾವು ದೂರದೃಷ್ಟಿಯಿಂದ ಈಗಿನಿಂದಲೂ ಖರ್ಚು ಬಾಬುಗಳನ್ನು ಕಡಿಮೆ ಮಾಡಿಕೊಳ್ಳುವುದು ಅಗತ್ಯವೆಂದು ಒತ್ತಿ ಹೇಳಬೇಕಾಗಿದೆ. ಮದರಾಸು ಪ್ರಾಂತ್ಯಕ್ಕೆ ಸುಮಾರು 50 ಕೋಟಿಯಷ್ಟು ಆದಾಯವಿದೆ. ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳನ್ನು ನೋಡಿದರೆ ಒಂದೊಂದು ಜಿಲ್ಲೆಯೂ

ಮೈಸೂರು ಸಂಸ್ಥಾನದಷ್ಟಿದೆ. ಬೊಂಬಾಯಿ ಮುಂತಾದ ಇತರ ಪ್ರಾಂತಗಳೊಡನೆ ಹೋಲಿಸಿ ನೋಡಿದ ಅಲ್ಲಿ ಒಂದೊಂದು ಜಿಲ್ಲೆಯೂ ಇಲ್ಲಿಗಿಂತ ಹಳ ದೊಡ್ಡದಾಗಿರುತ್ತದೆ. ಈ ಅನೇಕ ಬಾಬುಗಳಲ್ಲಿ ಇತರ ಪ್ರಾಂತಗಳೂ ನಮ್ಮ ಸಂಸ್ಥಾನವೂ ಒಂದೇ ರೀತಿಯಾಗಿರಬೇಕೆಂದು ಹೇಳುವಾಗ ಜಿಲ್ಲೆಗಳ ವಿಸ್ತೀರ್ಣವೂ ಒಂದೇ ರೀತಿಯಿರಬೇಕಾದ್ದು ಅಗತ್ಯವೆಂದು ಒತ್ತಿ ಹೇಳಬೇಕಾಗಿದೆ.

ನಮ್ಮ ಸರ್ಕಾರದವರು ದೂರಾಲೋಚನೆ ಮಾಡಿ ಬೆಂಗಳೂರಿನ ಎರಡು ಜಿಲ್ಲೆಗಳನ್ನೂ ಸೇರಿಸಿ ಒಂದೇ ಜಿಲ್ಲೆಯಾಗಿ ಮಾಡಿದರು. ಹಿಂದೆ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳೆಂದು ಎರಡಾಗಿ ಮಾಡಿದರು. ಅದನ್ನು ಜಾಗ್ರತೆ ಒಂದೇ ಮಾಡುತ್ತಾರೆಂದು ನಾನು ನಂಬಿದ್ದೇನೆ. ಈಗ ನಾವು ಯೋಚನೆಮಾಡಿ ನೋಡಿದರೆ ಅಮಲ್ದಾರು, ರೆವೆನ್ಯೂ ಇನ್ಸ್‌ಪೆಕ್ಟರು - ಇವರಿಗೆ ಹೆಚ್ಚು ಕೆಲಸವಿರುತ್ತದೆಯೇ ಹೊರತು ಜಿಲ್ಲಾಧಿಕಾರಿಗಳಿಗೂ ಮಂತ್ರಿಗಳಿಗೂ ಅರ್ಜಿಗಳು ಮುರಿತಾದ ನಾನಾ ಬಾಬುಗಳಿಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಾಗುತ್ತದೆಂದು ನಾನು ನಂಬಲಾರೆ. ಈಗ ಸಾಮಾನ್ಯವಾಗಿ ಜನರು ಅಮಲ್ದಾರರಿಗೂ ಸಬ್‌ಡಿವಿಜನ್ ಆಫೀಸರಿಗೂ, ಡೆಪ್ಯುಟೀ ಕಮಿಷನರಿಗೂ ಒಂದೇ ವಿಷಯದಲ್ಲಿ ಅರ್ಜಿಗಳನ್ನು ಕೊಟ್ಟು, ಒಂದಕ್ಕೆ ಎರಡರಷ್ಟು ಕೆಲಸವಾಗಿ ಸುಲಲಿತವಾಗಿ ಕೆಲಸಗಳು ನಡೆಯಲು ತೊಂದರೆ ಆಗಿದೆಯೇ ಹೊರತು ಬೇರೆ ಕಾರಣದಿಂದಲ್ಲ. ಅಧಿಕಾರಿಗಳು ಪ್ರವಾಸ ಹೋದರೆ ಅವರು ಯಾರ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಕಾರ್ಯಕ್ಷೇತ್ರಗಳು ಹೆಚ್ಚಾಗಿ ಚಿಕ್ಕಚಿಕ್ಕದಾಗಿರುವುದರಿಂದ ಕೆಲಸಗಳು ನಡೆಯಲು ತೊಂದರೆಯಾಗಿದೆಯೇ ಹೊರತು ಕೆಲಸಗಳು ಜಾಗ್ರತ ನಡೆಯಲು ಉಪಯೋಗವಾಗಿಲ್ಲ. ಡೆಪ್ಯುಟಿ ಕಮಿಷನರಿಗೆ ಒಂದು ಅರ್ಜಿಯನ್ನು ಕೊಟ್ಟರೆ ಅವರೇನು ಖುದ್ದು ಕೆಲಸ ಮಾಡುವುದಿಲ್ಲ. ಅಮಲ್ದಾರರಿಗೇ ಕಳುಹಿಸಬೇಕು. ಮಂತ್ರಿಗಳಿಗೆ ಅರ್ಜಿ ಕೊಟ್ಟರೂ ಹಾಗೆಯೇ. ಅವರು ಡೆಪ್ಯುಟಿ ಕಮಿಷನರಿಗೆ ಕಳುಹಿಸುತ್ತಾರೆ, ಅವರು ಅಮಲ್ದಾರರಿಗೆ ಕಳುಹಿಸುತ್ತಾರೆ. ಈ ರೀತಿ ಡೆಪ್ಯುಟಿ ಕಮಿಷನರು ಒಂದು supervising agencyಯೇ ಹೊರತು ಅವರು ಖುದ್ದು ನೇರವಾಗಿ ಕೆಲಸವನ್ನು ಮಾಡುವುದಿಲ್ಲ. ಈಗಾಗಲೇ ಮಂತ್ರಿಗಳ ಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆ. ಇನ್ನೂ ಕಡಿಮೆ ಮಾಡುತ್ತಾರೆಂದು ನಾನು ನಿರೀಕ್ಷಿಸುತ್ತೇನೆ. ಹೀಗೆಯೇ ಜಿಲ್ಲಾಧಿಕಾರಿಗಳನ್ನೂ ಜಿಲ್ಲೆಗಳನ್ನೂ ಕಡಿಮೆ ಮಾಡುವುದು ಅವಶ್ಯಕ. ಈ ಸಾರಿಯ ಆಯವ್ಯಯದ ಪಟ್ಟಿಯಲ್ಲಿಯೇ ಇದನ್ನು ಸೇರಿಸುತ್ತಾರೆಂದು ನಂಬಿದ್ದೆ. ಈಗ ಡಿಪೋ ಚಾರ್ಜು ಮತ್ತು ದ್ವಿದಳಧಾನ್ಯಗಳ ಮೇಲಿನ ತೆರಿಗೆಯನ್ನು ಬಿಡಬೇಕಾದ ಪ್ರಮೇಯ ಬಂದದ್ದರಿಂದಲಾದರೂ ಜಿಲ್ಲೆಗಳನ್ನು ಕಡಿಮೆಮಾಡಿ ಹಣ ಉಳಿತಾಯ ಮಾಡುತ್ತಾರೆಂದು ನಂಬಿದ್ದೇನೆ ಸರ್ಕಾರದವರು ಈ ಸೂಚನೆಯನ್ನೊಪ್ಪಿಕೊಂಡು ಐದು ಜಿಲ್ಲೆಗಳನ್ನು ಮಾಡಿದರೆ ಸಾಕೆಂದು ನನ್ನ ಅಭಿಪ್ರಾಯ.

Mr. SPEAKER.—Cut motion moved :

"That the demand under the head '1. Land Revenue' for Rs. 48,82,000 be reduced by Re 1."

*ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಸ್ವಾಮಿ, ಈ ಖೋತಾ ಸೂಚನೆಯನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈಗಿರುವ ಜಿಲ್ಲೆಗಳನ್ನು ಪುನರ್ರಚನೆ ಅಥವಾ ಪುನರ್ ಹೊಂದಾಣಿಕೆಮಾಡಬಹುದೇ ಹೊರತು ಕಡಿಮೆ ಮಾಡುವುದು ಒಳ್ಳೆಯದಲ್ಲ. ಆಡಳಿತದ ಅನುಕೂಲ ದೃಷ್ಟಿಯಿಂದ ಸಂಸ್ಥಾನ 9 ಭಾಗಗಳಾಗಿರುವುದೇ ಒಳ್ಳೆಯದು. ಪ್ರಪಂಚದ ಯಾವ ಭಾಗದಲ್ಲೇ ಆಗಲಿ ಅರಿತು ನುರಿತವರನ್ನು ಕೇಳಿದರೆ ಜಿಲ್ಲೆಗಳು ಸಾಧ್ಯವಾದಷ್ಟು ಚಿಕ್ಕದಾಗಿದ್ದರೇ ಒಳ್ಳೆಯದೆಂದು ಹೇಳುತ್ತಾರೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಅನೇಕ ಸಂಸ್ಥಾನಗಳು ನಮ್ಮ ಸಂಸ್ಥಾನದ ಒಂದು ಜಿಲ್ಲೆಯಷ್ಟು ಚಿಕ್ಕದಾಗಿದೆ. ಬಹುಶಃ ಅದರಿಂದ ಕೆಲಸ ಚೆನ್ನಾಗಿ ನಡೆಯುತ್ತದೆ.

Sri G. A. ACHARYA.—Hon'ble Member may please name one which is so small.

ಶ್ರೀ ಎಂ. ವಿ. ಕೃಷ್ಣಪ್ಪನವರು.—Ohio. ಅಕ್ಕಪಕ್ಕದ ಪ್ರಾಂತಗಳನ್ನು ನೋಡಿ. ಪ್ರಾಯಶಃ ಅವರೂ ಹೀಗೇ ಹೇಳುತ್ತಾರೆಂದು ತೋರುತ್ತದೆ. ಚಿತ್ತೂರು ಜಿಲ್ಲೆಯ ಕಲೆಕ್ಟರು ಆ ಜಿಲ್ಲೆಯ ಅನೇಕ ಗ್ರಾಮಗಳಿಗೆ ಹೋಗುವುದಕ್ಕೇ ಆಗುವುದಿಲ್ಲ. ಪೂರ್ವದಲ್ಲಿ ಡೆಪ್ಯುಟಿ ಕಮಿಷನರೆಂದರೆ ರೆಂಟ್ ಕಲೆಕ್ಟರ್ ಕೆಲಸ ಮಾಡುತ್ತಿದ್ದರು. ಅವರ ಮುಖ್ಯವಾದ ಕೆಲಸ ಕಂದಾಯ ವಸೂಲಿ ಮಾತ್ರವಾಗಿತ್ತು. ಈಗಲಾದರೋ ಅವರು ಜಿಲ್ಲೆಯ ಎಲ್ಲ ಕೆಲಸಗಳನ್ನೂ ನೋಡಿಕೊಳ್ಳಬೇಕಾಗಿದೆ. ಒಂದು ಹಳ್ಳಿಯಲ್ಲಿ ಲಂಟಾನ ಹೆಚ್ಚಾಗಿ ಬೆಳೆದಿದ್ದರೂ ಜನರು ಬಂದು ಅದನ್ನೂ ಡೆಪ್ಯುಟಿ ಕಮಿಷನರಲ್ಲಿ ಹೇಳುತ್ತಾರೆ! ಈಗಾಗಲೇ ಡೆಪ್ಯುಟಿ ಕಮಿಷನರುಗಳು ಹತ್ತಾರು ವರ್ಷಗಳ ರಿಕಾರ್ಡುಗಳನ್ನು ತೀರ್ಮಾನ ಮಾಡಬೇಕಾಗಿದೆ. ಹೀಗಿರುವಾಗ ಜಿಲ್ಲೆಗಳನ್ನು ಇನ್ನೂ ದೊಡ್ಡದು ಮಾಡಿದರೆ ಕೆಲಸ ಇನ್ನೂ ಹೆಚ್ಚಾಗಿ ಬಾಕಿ ಬೀಳುತ್ತದೆ ಮತ್ತು ಸಮರ್ಪಕವಾಗಿ ನಡೆಯುವುದಿಲ್ಲ. ಅಲ್ಲದೆ 9 ಜಿಲ್ಲೆಗಳು 9 ಮಂತ್ರಿಗಳು ಇರುವುದು ಒಂದು ರೀತಿಯಲ್ಲಿ ಚೆನ್ನಾಗಿದೆ. (ನಗು!) ಈಗಿರುವುದರಲ್ಲಿ ಕೆಲವು ಜಿಲ್ಲೆಗಳು ದೊಡ್ಡದಾಗಿವೆ, ಇನ್ನು ಕೆಲವು ಚಿಕ್ಕದಾಗಿವೆ, ಇದನ್ನು ನಾನು ಒಪ್ಪುತ್ತೇನೆ. ಆದಕಾರಣ ಇವುಗಳನ್ನು ಪುನರ್ರಚನೆ ಮಾಡಬಹುದು. ಉದಾಹರಣೆಗೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ 4 ಲಕ್ಷ ಜನಸಂಖ್ಯೆಯಿದೆ. ಇದನ್ನು ಬೇರೆ ಜಿಲ್ಲೆಯಾದ ಹಾಸನದ ಕೆಲವು ಭಾಗಗಳನ್ನು ಬೇಕಾದರೆ ಅದಕ್ಕೆ ಸೇರಿಸಿ ಅದನ್ನು ದೊಡ್ಡದು ಮಾಡಬಹುದು. ಆದರೆ ಜಿಲ್ಲೆಗಳ ಸಂಖ್ಯೆಯನ್ನು ಮಾತ್ರ ಈಗಿರುವ ಹಾಗೆಯೇ ಉಳಿಸಿದರೆ ಒಳ್ಳೆಯದು. ಹೀಗಿರುವುದು ಆಡಳಿತ ಸುಗಮವಾಗಿ ನಡೆಯುವ ದೃಷ್ಟಿಯಿಂದ ಒಳ್ಳೆಯದು. ಇತರ ಪ್ರಾಂತಗಳಲ್ಲಿ ತಾಸೀಲ್‌ದಾರರು ಅವರ ತಾಲ್ಲೂಕಿನ ಅನೇಕ ಪಟೇಲ ಶ್ಯಾನುಭೋಗರನ್ನೇ ನೋಡಿರುವುದಿಲ್ಲ. ಇಲ್ಲಿ ಹಾಗಿಲ್ಲ. ಅಮಲ್ದಾರರಿಗೆ ತಮ್ಮ ತಾಲ್ಲೂಕಿನ ಪ್ರತಿಯೊಬ್ಬ ಪಟೇಲನೂ ಶಾನುಭೋಗನೂ ಗೊತ್ತಿರುತ್ತದೆ. ಮದರಾಸು ಬೊಂಬಾಯಿ ಪ್ರಾಂತಗಳಲ್ಲಿ ಪ್ರದೇಶ ದೊಡ್ಡದಾಗಿರುವುದರಿಂದ ಹೀಗಿಲ್ಲ. ಆಡಳಿತ ದೃಷ್ಟಿಯಿಂದ ಚಿಕ್ಕಚಿಕ್ಕದಾಗಿದ್ದರೇ ಒಳ್ಳೆಯದು. ಆದುದರಿಂದ ಈಗಿರುವಂತೆ 9 ಜಿಲ್ಲೆಗಳೇ ಇರಬೇಕೆಂದು ನನ್ನ ಅಭಿಪ್ರಾಯ.

ಶ್ರೀ ಎ. ಜಿ. ಬಂದೀಗೌಡರು (ಮಂಡ್ಯ ಜಿಲ್ಲೆ).—ಈಗ ಸೂಚಿಸಿರತಕ್ಕ ಕತ್ತರಿ ನಿರ್ಣಯದಲ್ಲಿ ಎರಡು ವಿಷಯಗಳಿವೆ. ಒಂದು, ಹಣಕಾಸಿನ ಅಭಾವದಿಂದ ಮಿತವ್ಯಯವಾಗಬೇಕೆಂಬುದು. ಎರಡನೆಯದು, ಮಿತವ್ಯಯ ಮಾಡುವುದಕ್ಕಾಗಿ ನಮ್ಮ ದೇಶದ ಜಿಲ್ಲೆಗಳ ಸಂಖ್ಯೆ

ಯನ್ನು ಕಡಿಮೆ ಮಾಡಬೇಕೆಂಬುದು. ಹೀಗೆ ಇದರಲ್ಲಿ ಎರಡು ಅಭಿಪ್ರಾಯಗಳಿವೆ.

ಅಧ್ಯಕ್ಷರು.—ಇದರಲ್ಲಿ ಒಂದೇ ಅಭಿಪ್ರಾಯವಿರುವುದು. ಅದು ಏನೆಂದರೆ: "Reducing the number of districts from the point of view of economy in the Finances".

ಶ್ರೀ ಎ. ಜಿ. ಬಂದೀಗೌಡರು.—ಹಣಕಾಸಿನ ಅಭಾವದಿಂದ ಜಿಲ್ಲೆಗಳನ್ನು ಕಡಿಮೆ ಮಾಡಬೇಕೆಂದಿದೆ. ಖರ್ಚು ಕಡಿಮೆ ಮಾಡುವ ವಿಚಾರದಲ್ಲಿ ಶ್ರೀಮಾನ್ ಗೋವಿಂದ ರೆಡ್ಡಿಯವರು ಒಂದು ಪಟ್ಟಿಯನ್ನೇ ಹಾಕಿಕೊಟ್ಟಿದ್ದಾರೆ; ಅದನ್ನು ನೋಡಿ ಸರಿಮಾಡೋಣ. ಆ ವಿಚಾರದಲ್ಲಿ ನನ್ನ ಅಭ್ಯಂತರವಿಲ್ಲ. ಆದರೆ ಜಿಲ್ಲೆಗಳನ್ನು ಕಡಿಮೆ ಮಾಡಬೇಕೆಂದು ಹೇಳಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ಶ್ರೀಮಾನ್ ಕೃಷ್ಣಪ್ಪನವರು ಹೇಳಿದುದನ್ನು ಅನುಮೋದಿಸುತ್ತಾ ಅದರೊಡನೆ ಇನ್ನು ಕೆಲವು ವಿಷಯಗಳನ್ನು ಸೇರಿಸುತ್ತೇನೆ.

ಶ್ರೀಮಾನ್ ಲಿಂಗಾರೆಡ್ಡಿಯವರು ಮದರಾಸು ಬೊಂಬಾಯಿ ಪ್ರಾಂತ್ಯಗಳಲ್ಲಿ ಒಂದೊಂದು ಜಿಲ್ಲೆಯೇ ಮೈಸೂರು ಸಂಸ್ಥಾನದಷ್ಟಿದೆ, ಆದರೂ ಕೆಲಸ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿದರು. ಮದರಾಸು, ಬೊಂಬಾಯಿ ಪ್ರಾಂತದಲ್ಲಿ ಹೋಗಿ ನಾನೂ ನೋಡಿದ್ದೇನೆ. ಮೈಸೂರು ದೇಶದಲ್ಲಿರುವಂತಹ ಆಡಳಿತ ಎಲ್ಲೂ ಇಲ್ಲ, ಮದರಾಸಿನಲ್ಲಿಯೂ ಇಲ್ಲ, ಬೊಂಬಾಯಿ ಪ್ರಾಂತದಲ್ಲೂ ಇಲ್ಲ. ಹೀಗಿರುವಾಗ ಅಲ್ಲಿರುವುದನ್ನು ನಾವೇಕೆ ಅನುಸರಿಸಬೇಕು? ಈಗ ವಿಸ್ತಾರವಾಗಿರುವ ಜಿಲ್ಲೆಗಳನ್ನು ಕಡಿಮೆಮಾಡಿ ತಮ್ಮ ಆಡಳಿತವನ್ನು ಉತ್ತಮವಾಡಬೇಕೆಂದು ಅವರು ಮೈಸೂರಿನ ಕಡೆ ನೋಡುತ್ತಿದ್ದಾರೆ. ಕಲೆಕ್ಟರು ತನ್ನ ಜಿಲ್ಲೆಯ ಎಷ್ಟೋ ಸ್ಥಳಗಳಿಗೆ ಹೋಗಲು ಸಾಧ್ಯವಿಲ್ಲವಾಗಿದೆ. ಒಂದು ಕಡೆ ಅವರು ಬರಬೇಕಾದರೆ ಎಷ್ಟೋ ಕಷ್ಟ. ಅಲ್ಲಿ ಕೆಲವು ಭಾಗಗಳ ಜನರು ನಾವು ಕಲೆಕ್ಟರನ್ನೇ ನೋಡಿಲ್ಲವೆಂದು ಹೇಳುತ್ತಾರೆ. ನಮ್ಮ ದೇಶದಲ್ಲಿ ಡೆಪ್ಯುಟಿ ಕಮಿಷನರುಗಳು ಕೆಲಸಮಾಡುವಂತೆ ಅವರು ಮಾಡುವುದಕ್ಕಾಗುವುದಿಲ್ಲ. ಈಗ ಕರ್ಣಾಟಕ ಪ್ರಾಂತವಾದರೆ ಡಿಸ್ಟ್ರಿಕ್ಟುಗಳನ್ನು ಹೆಚ್ಚುಮಾಡಬೇಕೆಂದಿದ್ದಾರೆ. ಬಿಜಾಪುರ, ಧಾರವಾಡ ಮತ್ತು ಕಾರವಾರ ಜಿಲ್ಲೆಗಳು ಒಂದೊಂದನ್ನೂ ಎರಡು ಮಾಡಬೇಕೆಂದೂ, ಮೈಸೂರಿನಲ್ಲಿರುವಂತೆ ಮಾಡಬೇಕೆಂದೂ ಯೋಚನೆ ಮಾಡುತ್ತಿದ್ದಾರೆ. ಹೀಗೆ ವಿಸ್ತಾರವಾಗಿರತಕ್ಕ ಜಿಲ್ಲೆಗಳನ್ನು ಮೈಸೂರಿನಲ್ಲಿರುವಹಾಗೆ ಚಿಕ್ಕದು ಮಾಡಬೇಕೆಂದು ಅವರೇ ಹೇಳುತ್ತಿರುವಾಗ ಈಗಾಗಲೇ ಕಡಿಮೆ ವಿಸ್ತೀರ್ಣವುಳ್ಳ ಜಿಲ್ಲೆಗಳನ್ನಿಟ್ಟುಕೊಂಡು ಹೆಚ್ಚು ಸುಖಪಡುತ್ತಿರುವ ನಾವು, ಮಾದರಿಯಾಗಿರುವ ನಾವು, ಇದನ್ನ ತಪ್ಪಿಸಿ ಜಿಲ್ಲೆಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂದು ಹೇಳಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಆರೀತಿ ಮಾಡಿದರೆ ಅದರಿಂದ ತೊಂದರೆಯಾಗುತ್ತದೆ. ಶ್ರೀಮಾನ್ ಲಿಂಗಾರೆಡ್ಡಿಯವರು ಮಂಡ್ಯದ ಉದಾಹರಣೆಯನ್ನು ಹೇಳಿ ಅದನ್ನು ಮೈಸೂರು ಜಿಲ್ಲೆಗೆ ಸೇರಿಸಿ, ಅದನ್ನು ಏಕೆ ಬೇರೆಮಾಡಿದಿರಿ ಎಂದು ಕೇಳಿದರು. ಕೃಷ್ಣರಾಜಸಾಗರವಾದಮೇಲೆ ಅಲ್ಲಿ ಕೆಲಸ ಬಹಳ ಜಾಸ್ತಿಯಾಗಿದೆ. ಆ ಜಿಲ್ಲೆಯಲ್ಲಿ ಏಳು ತಾಲ್ಲೂಕುಗಳಿದ್ದರೂ ಹದಿನಾಲ್ಕು ತಾಲ್ಲೂಕುಗಳಿರುವ ಜಿಲ್ಲೆಗಿಂತ ಅಲ್ಲಿ ಕೆಲಸ ಜಾಸ್ತಿಯಾಗಿದೆ. ಉತ್ಪತ್ತಿಯೂ ಅಲ್ಲಿ ಹೆಚ್ಚಾಗಿದೆ. ಅಲ್ಲಿ ಜಮೀನಿಗೆ ಎಕರೆಗೆ 15 ರೂಪಾಯಿವರೆಗೆ ವಾಟರ್ ರೇಟು ಕೊಡುತ್ತಿದ್ದೇವೆ, ಇತರ ಕೆಲಸ ಕಾರ್ಯಗಳೂ ಹೆಚ್ಚಾಗಿವೆ. ಶ್ರೀಮಾನ್ ಚನ್ನಬಸಪ್ಪನವರು ಅಲ್ಲಿ ಬೇಕಾದಷ್ಟು ಹಣ ಬಾಕಿ ನಿಂತಿದೆಯೆಂದು ಹೇಳಿದರು. ಅದಕ್ಕೆ ಮಾನ್ಯ ಮಂತ್ರಿಗಳು ಹೇಳಿದಹಾಗೆ ಬಾಕಿ ಪಟ್ಟಿ ತಯಾರು ಮಾಡುವುದರಲ್ಲಿ ಸ್ವಲ್ಪ ತೊಂದರೆಯಿದೆ, ಅದನ್ನು ಪರಿಶೀಲನೆ ಮಾಡುತ್ತಾರೆ. ಹೀಗೆ ಅಲ್ಲಿರುವಷ್ಟು ಕೆಲಸ ಇನ್ನೆಲ್ಲಿಯೂ ಇಲ್ಲ. ಹೀಗಿರುವುದರಿಂದ ಯಾವ ಕಾರಣದಿಂದಲೇ ಆಗಲಿ ಅದನ್ನು ಬೇರೆ ಜಿಲ್ಲೆಗೆ ಸೇರಿಸುವ ಹಾಗಿಲ್ಲ. ಶ್ರೀ ಲಿಂಗಾರೆಡ್ಡಿಯವರು ಹೇಳಿದಹಾಗೆ ಆಡಳಿತದ ಖರ್ಚನ್ನು ಕಡಿಮೆ ಮಾಡಬೇಕಾದರೆ ಬೇರೆ ರೀತಿಯಲ್ಲಿ ಮಾಡಬಹುದು. ಉದಾಹರಣೆಗೆ ಬೇಕಾದರೆ ಈ ಕರ್ತರಿ ನಿರ್ಣಯವನ್ನು ತಂದಿರುವ ಶ್ರೀ ಲಿಂಗಾರೆಡ್ಡಿಯವರ ಕೋಲಾರ ಜಿಲ್ಲೆಯನ್ನು ತುಮಕೂರಿಗೋ ಅಥವಾ ಬೆಂಗಳೂರಿಗೋ ಸೇರಿಸಬಹುದು.

Sri H. C. LINGA REDDY.—I have no objection.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈ ಖೋತಾ ಸೂಚನೆಯಲ್ಲಿರುವ ಅಭಿಪ್ರಾಯ ಸರಿಯಾಗಿಲ್ಲವೆಂದು ನನಗನ್ನಿಸುತ್ತದೆ. ಜಿಲ್ಲೆಗಳ ಸಂಖ್ಯೆಯನ್ನು ಕಡಿಮೆ ಮಾಡುವ ಮಾತು ಈಚೆಗೆ ಹೆಚ್ಚಾಗಿದೆ. ಆರ್ಥಿಕ ವಿಲೀನೀಕರಣವಾಗಿರುವ ದೃಷ್ಟಿಯಿಂದ ಇಂಡಿಯಾ ಸರ್ಕಾರದ ಅಧಿಕಾರಿಗಳು ಇಲ್ಲಿಗೆ ಬರಬೇಕೆಂಬ ದೃಷ್ಟಿಯಿಂದಲೂ ನಮ್ಮವರು ಅಲ್ಲಿಗೆ ಹೋಗಬೇಕಾಗುತ್ತದೆಂಬ ದೃಷ್ಟಿಯಿಂದಲೂ ಈ ವಿಷಯಕ್ಕೆ ಪ್ರಾಮುಖ್ಯತೆ ಬಂದಿರಬಹುದೇ ವಿನಾ ಆಡಳಿತ ಹಿತದೃಷ್ಟಿಯಿಂದ ನೋಡಿದರೆ ಇದು ಸರಿಯಲ್ಲ. ಯಾವಾಗಲೂ ಯಾರು ಆಳುತ್ತಿದ್ದಾರೋ ಅವರಿಗೂ ಪ್ರಜೆಗಳಿಗೂ ಹತ್ತಿರವಾಗಿರಬೇಕು. There must be closer touch with the administration and the administered. ಈ ತತ್ವವನ್ನು ತೆಗೆದುಕೊಂಡರೆ, ನಮ್ಮ ಮೈಸೂರು ದೇಶದಲ್ಲಿರುವ ಜಿಲ್ಲೆಗಳ ಸಂಖ್ಯೆ ನ್ಯಾಯವಾಗಿದೆ. ಬೇಕಾದರೆ internal adjustment ಆಗಬಹುದು. ಆದರೆ ಒಂಭತ್ತು ಜಿಲ್ಲೆಗಳೂ ಇರಬೇಕು. ದಕ್ಷತೆ ಹೋದರೂ ಚಿಂತೆಯಿಲ್ಲ. ಹಣವನ್ನುಳಿಸಬೇಕೆಂದರೆ ಯಾರೂ ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಇದರಲ್ಲಿ ಎಫಿಷಿಯೆನ್ಸಿ ಇರುತ್ತದೆ ಎಂದ ಆಲೋಚನೆ ಮಾಡುವುದಾದರೆ ಒಂದು ಉದಾಹರಣೆ ಹೇಳುತ್ತೇನೆ. ಒಂದುವೇಳೆ ಎರಡು ಡಿಸ್ಟ್ರಿಕ್ಟ್ ಸೇರಿಸಿ ಒಂದೇ ಡಿಸ್ಟ್ರಿಕ್ಟ್ ಮಾಡಿದರೆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲಿರತಕ್ಕ ಡೆಪ್ಯುಟಿ ಕಮಿಷನರು ಹಳ್ಳಿಗಳ ಕಡೆ ಯಾವರೀತಿ ಗಮನ ಕೊಡಬಲ್ಲರು, ಹಳ್ಳಿಗಳ ಗತಿ ಏನು, ಅವರಿಗೆ ತಕ್ಷಣ ಪರಿಹಾರ ಸಿಕ್ಕುತ್ತದೆಯೇ ಎಂಬುದನ್ನು ನೋಡಬೇಕು. ಈಗಿರುವ ಪ್ರಕಾರ ನಮ್ಮ ದೇಶದ ಆಡಳಿತ ಚೆನ್ನಾಗಿ ನಡೆಯುತ್ತಿದೆ ಎಂದು ನಮ್ಮ ಅಕ್ಕಪಕ್ಕದ ಪ್ರದೇಶಗಳವರು ಹೇಳುತ್ತಿರುವಾಗ, ನಮ್ಮದು ಚೆನ್ನಾಗಿದೆ ಎಂದು ಹೇಳಿಕೊಂಡು ಇನ್ನೂ ನಾಲಾಯಕ್ಕಾದ ತಳಹದಿಯ ಮೇಲೆ ಇರುವುದು ನ್ಯಾಯವಾಗಿರುತ್ತದೆಯೇ? ಅವರು ಅನುಸರಿಸುತ್ತಿದ್ದಾರೆ ಎಂದು ನಾವೂ ಅನುಸರಿಸುವುದು ಖಂಡಿತವಾಗಿಯೂ ನ್ಯಾಯವಲ್ಲ. ಆಡಳಿತದ ದೃಷ್ಟಿಯಿಂದ ಎಷ್ಟು ಚಿಕ್ಕದಾದರೆ ಅಷ್ಟೂ ಒಳ್ಳೆಯದೆಂದು ಹೇಳುತ್ತೇನೆ. ತಕ್ಷಣ ಸಹಾಯ ಸಿಕ್ಕುತ್ತದೆ. ಅದು ಮುಖ್ಯವಾದ ತತ್ವ. ಆದ್ದರಿಂದ ಈ ಖೋತಾ ನಿರ್ಣಯ ಆದರಣೆಗೆ ಲಾಯಖ್ಖಾದ್ದಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ ಜಿಲ್ಲೆ).—ಹಳ್ಳಿಗಳಲ್ಲಿ ಜನರ ಜೀವನವನ್ನು ಉತ್ತಮಗೊಳಿಸ

ಬೇಕೆಂದು ಹೇಳುತ್ತಾ ಇರುವಾಗ ಜಿಲ್ಲೆಗಳನ್ನು ಕಡಿಮೆ ಮಾಡಬೇಕೆಂದು ತಂದಿರತಕ್ಕ ಈ ಖೋತಾ ನಿರ್ಣಯ ನಿಜವಾಗಿಯೂ ವಿಷಾದವನ್ನುಂಟುಮಾಡಿದೆ. ಬಹುಶಃ ಅವರು ಮದರಾಸು, ಬೊಂಬಾಯಿನಲ್ಲಿರತಕ್ಕ ಜಿಲ್ಲೆಗಳು ಬಹಳ ದೊಡ್ಡದಾಗಿಲ್ಲವೇ, ಅಲ್ಲಿ ಕೆಲಸ ಕಾರ್ಯಗಳು ನಡೆದುಕೊಂಡು ಹೋಗುತ್ತಿಲ್ಲವೇ ಎಂದು ಕೇಳಬಹುದು. ಅದಕ್ಕೆ ನಾನು ಇಷ್ಟುಮಾತ್ರ ಹೇಳಬಲ್ಲೆ. ಅಲ್ಲಿರತಕ್ಕ ಹಳ್ಳಿ ಜನರ ಜೀವನದ ಮಟ್ಟ ಎಷ್ಟುಮಟ್ಟಿಗೆ ಇದೆ ಎಂಬುದು ಅವರು ಗಮನಕ್ಕೆ ತಂದುಕೊಂಡಿಲ್ಲವೆಂದು ಕಾಣುತ್ತದೆ. ಮಾನ್ಯ ಮಿತ್ರರೊಬ್ಬರು ಕೆಲವು ದಿನಗಳ ಹಿಂದೆ ಹೇಳಿದರು—ಅಲ್ಲಿ ಹಳ್ಳಿಜನ ಇವತ್ತಿಗೂ ಕೂಡ ರೆವೆನ್ಯೂ ಇನ್‌ಸ್ಪೆಕ್ಟರಿಗೆ ರುಮಾಲು ಬಿಚ್ಚಿ ಕೆಳಗಿಟ್ಟು ನಮಸ್ಕಾರ ಮಾಡಬೇಕಂತೆ! ಅವರು ಅಷ್ಟುಮಟ್ಟಿಗೆ ಹಿಂದುಳಿದಿದ್ದಾರೆ. ಖಂಡಿತ ಅಲ್ಲಿ ಜನ ಇನ್ನೂ ಅಧಿಕಾರಿಗಳೊಡನೆ ಹೆಚ್ಚು ಸಂಪರ್ಕ ಮಾಡಿಕೊಂಡು ಮೇಲ್ಮಟ್ಟದ ಜೀವನ ನಡೆಸುವುದಕ್ಕೆ ಶಕ್ತರಾಗಿಲ್ಲ ಎಂಬ ಅಂಶ ಗೊತ್ತಾಗುತ್ತದೆ. ಹೀಗಿರುವಾಗ ಕೇವಲ ನಮ್ಮ ಹಣಕಾಸಿನ ದೃಷ್ಟಿಯಿಂದ ಜಿಲ್ಲೆಗಳನ್ನು ಕಡಿಮೆ ಮಾಡಬಹುದೇ ಎಂಬ ಅಂಶವನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕಾಗಿದೆ. ಹಳ್ಳಿಜನರ ಜೀವನದ ಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದಲೂ ಅಲ್ಲದೇ ಇತರ ವಿಚಾರಗಳಲ್ಲೂ ಸಹ ನಮ್ಮ ದೇಶ ಮುಂದುವರಿಯಬೇಕಾದರೆ ಈಗಿರತಕ್ಕ ಜಿಲ್ಲೆಗಳು ಇರಬೇಕಾದ್ದು ಅತ್ಯಾವಶ್ಯಕ, ಮತ್ತು ಹಳ್ಳಿ ಜನಗಳು ಅಧಿಕಾರಿಗಳ ಸಂಪರ್ಕವನ್ನು ಅಲ್ಪ ಖರ್ಚಿನಲ್ಲಿ ಆದಷ್ಟು ಜಾಗ್ರತೆ ಮಾಡಿಕೊಳ್ಳತಕ್ಕ ವ್ಯವಸ್ಥೆ ಇರಬೇಕಾದ್ದು ಅತ್ಯಗತ್ಯ. ಹಾಗೆ ಮಾಡದಿದ್ದರೆ ಹಳ್ಳಿ ಜನರ ಜೀವನಕ್ಕೆ, ಕಾರ್ಯ ಚಟುವಟಿಕೆಗೆ ಧಕ್ಕೆಯುಂಟಾಗಿಗುತ್ತದೆ. ಆದ್ದರಿಂದ ಜಿಲ್ಲೆಗಳನ್ನು ಕಡಿಮೆ ಮಾಡಬಾರದು. ಬಡವರಿಗಿರತಕ್ಕ ಅನುಕೂಲಗಳು ಕುಂಠಿತವಾಗುತ್ತವೆ. ಅದರಿಂದ ಅವರ ಜೀವನದ ಮಟ್ಟ ಏರುವುದಕ್ಕೆ ಅನಾನುಕೂಲವಾಗುತ್ತದೆ. ಆದ್ದರಿಂದ ಈಗ ಇರುವಂತೆಯೇ ಇರಬೇಕು. ಕಡಿಮೆ ಮಾಡಬಾರದು ಎಂದು ಕಡ್ಡಾಯವಾಗಿ ಮತ್ತು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನೊಂದು ವಿಷಯ. ಮಂಡ್ಯದ ವಿಚಾರ ಹೇಳಿದರು. ಮಂಡ್ಯದಲ್ಲಿ ಇರತಕ್ಕ ಸಮಸ್ಯೆಗಳ ಉಗ್ರಸ್ವರೂಪದ ಅನುಭವವೇ ಅವರಿಗಿಲ್ಲವೆಂದು ಹೇಳಬೇಕಾಗಿದೆ. ಶ್ರೀಮಾನ್ ಬಂದೀಗೌಡರು ಅಲ್ಲಿನ ಕಾಂಟ್ರಿಬ್ಯೂಷನ್ ಏನು, ವಾಟರ್‌ರೇಟ್ ಏನು, ಎಂಬುದನ್ನೆಲ್ಲಾ ಹೇಳಿದ್ದಾರೆ. ಅವ್ಯವಸ್ಥೆಯಾಗಿ 70 ಲಕ್ಷ ರೂಪಾಯಿ ಬಾಕಿ ಉಳಿದಿದೆ. ಹೀಗೆ ಒಂದೇ ಬಾಬಿನಲ್ಲಿ 70 ಲಕ್ಷ ರೂಪಾಯಿ ಬಾಕಿ ಇರಬೇಕಾದರೆ ಆ ಜಿಲ್ಲೆಯಲ್ಲಿ ಕಾರ್ಯ ಚಟುವಟಿಕೆ ಎಷ್ಟು ಹೆಚ್ಚಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದುದು. ನಮ್ಮ ಗ್ರಾಮಗಳಲ್ಲಿ ಜೀವನದ ಸಮಸ್ಯೆ ಅನೇಕ ವಿಧವಾಗಿ ಬೆಳೆಯುತ್ತಿರುವುದರಿಂದ ಜಿಲ್ಲೆಗಳನ್ನು ಕಡಿಮೆ ಮಾಡಬೇಕೆಂದು ಮಾಡಿರತಕ್ಕ ಸೂಚನೆ ಸಾಧುವಾದದ್ದಲ್ಲ. ಇದನ್ನು ಸರ್ಕಾರದವರು ಕಾರ್ಯಗತ ಮಾಡಬಾರದು ಎಂದು ಹೇಳುತ್ತೇನೆ.

ಶ್ರೀ ಎಚ್ ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಈ ಕತ್ತರಿ ನಿರ್ಣಯವನ್ನು ವಿರೋಧಿಸಬೇಕಾಗಿದೆ. ಕಾರಣವೇನೆಂದರೆ, ನಾನು ಭಾರತದ ಅನೇಕ ಪ್ರಾಂತ್ಯಗಳಲ್ಲಿ ಸಂಚಾರಮಾಡಿ ನೋಡಿದ್ದೇನೆ. ಸಾಮಾನ್ಯವಾಗಿ ನಮ್ಮ ಸಂಸ್ಥಾನದಲ್ಲಿ ಆಡಳಿತದ ದೃಷ್ಟಿಯಿಂದ ಜಿಲ್ಲೆಗಳನ್ನು ಯಾವ ರೀತಿ ವಿಸ್ತಾರ ಮಾಡಿದ್ದೇವೆಯೋ ಆ ರೀತಿ ಬೇರೆ ಕಡೆಗಳಲ್ಲಿ ಮಾಡಿಲ್ಲ. ಅಲ್ಲಿ ಸಾಧಾರಣವಾಗಿ ಆಡಳಿತದ ಯೂನಿಟ್ಟುಗಳು ಬಹಳ ದೊಡ್ಡ ಪ್ರದೇಶವಾಗಿರುತ್ತದೆ. ಅಲ್ಲಿ ಡಿಸ್ಟ್ರಿಕ್ಟಿನ ಅಧಿಕಾರಿಗಳು ಅವರ ಎಲ್ಲೆಗೆ ಸೇರಿರತಕ್ಕ ಎಲ್ಲಾ ಪ್ರದೇಶಗಳಿಗೂ ಸರಿಯಾದ ನಿಗಾ ಕೊಡುವುದಕ್ಕೆ ಅವಕಾಶವಾಗುತ್ತಿಲ್ಲ ಎಂಬುದು ಕಂಡುಬರುತ್ತದೆ. ನಮ್ಮ ಸಂಸ್ಥಾನದಲ್ಲಿ ಯಾವ ರೀತಿ ಆಡಳಿತ ನಡೆಸುತ್ತಿದ್ದಾರೆಂದರೆ ಸಾಮಾನ್ಯವಾಗಿ ಯಾವ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರನ್ನೇ ತೆಗೆದುಕೊಳ್ಳಲಿ, ಅದು ಆ ಜಿಲ್ಲೆಯ ನಾನಾ ಭಾಗಗಳಲ್ಲಿರತಕ್ಕ ಜನರೆಲ್ಲರಿಗೂ ಒಂದು ವಿಧವಾದ ಸೌಲಭ್ಯವನ್ನುಂಟುಮಾಡಿ ಕೊಡಲು ಸಹಕಾರಿಯಾಗಿರುವಂತೆ ಇದೆ. ಈ ಒಂದು ತತ್ವವನ್ನು ನಮ್ಮ ಗಮನದಲ್ಲಿಟ್ಟುಕೊಂಡರೆ ಈಗ ಎಕಾನಮಿ ಎಂದು ಏನು ಹೇಳುತ್ತಿದ್ದೀರೋ ಅದು ಎಕಾನಮಿ ಆಗುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು. ಈಗ ಇರತಕ್ಕ 9 ಜಿಲ್ಲೆಗಳನ್ನು 5 ಜಿಲ್ಲೆಗಳಾಗಿ ಮಾಡಿದರೆ ನಾಲ್ಕು ಜನ ಜಿಲ್ಲಾಧಿಕಾರಿಗಳನ್ನು ಕಡಿಮೆ ಮಾಡಬಹುದು ಅಥವಾ ನಾಲ್ಕು ಜನ ಡಿ. ಎಸ್. ಪಿ. ಗಳನ್ನು ಕಡಿಮೆ ಮಾಡಬಹುದು. ಇದರಿಂದ ಎಷ್ಟರಮಟ್ಟಿಗೆ ಎಕಾನಮಿ ಆಗುತ್ತದೆ ಎಂಬದು ಒಂದು ಪ್ರಶ್ನೆ. ಅಲ್ಲದೆ, ಈಗಿನ ವಾತಾವರಣದಲ್ಲಿ ನಮ್ಮ ಸ್ನೇಹಿತರಾದ ಶ್ರೀಮಾನ್ ಕೃಷ್ಣಪ್ಪನವರು ಹೇಳಿದಹಾಗೆ ಪ್ರತಿಯೊಂದು ವಿಷಯದಲ್ಲೂ ಜನಗಳು ಸರ್ಕಾರದ ಸಹಾಯ ಅಪೇಕ್ಷೆ ಮಾಡುತ್ತಾರೆ. . ಈಗಿನ State, welfare State, Police State ಅಲ್ಲ. ಅಂಥಾ ಕಾಲ ಇದು. ಆದ್ದರಿಂದ ಯಾವ ಊರಿನಲ್ಲೇ ಆಗಲೀ ಅಲ್ಲಿರತಕ್ಕ ಪ್ರಜೆಗಳಿಗೆ ಯಾವ ಯಾವ ಸೌಕರ್ಯಗಳು ಬೇಕೋ ಅವುಗಳನ್ನು ಜಿಲ್ಲಾಧಿಕಾರಿಗಳೂ ಮತ್ತು ಸಂಬಂಧಪಟ್ಟವರೂ ಒದಗಿಸಿ ಕೊಡಬೇಕಾದ್ದು ಅವರ ಆದ್ಯ ಕರ್ತವ್ಯ. ಈ ದೃಷ್ಟಿಯಿಂದ ಪರಿಶೀಲನೆ ಮಾಡಿದರೆ ಸ್ವಲ್ಪ ಭಾಗ ಹಣಕಾಸಿನ ಉಳಿತಾಯವಾದರೂ ಅನಾನುಕೂಲವೇ ಜಾಸ್ತಿಯಾಗುವ ಸಂಭವವಿದೆ. ಶ್ರೀಮಾನ್ ಬಂದೀಗೌಡರು ಹೇಳಿದಹಾಗೆ ಮುಂದೆ ಕರ್ಣಾಟಕದ ಏಕೀಕರಣ ಆಗುವ ಪ್ರಸಂಗ ಬಂದಾಗ ಬೇಕಾದರೆ ಈ ಯೋಚನೆ ಮಾಡಬಹುದು. ಈಗಿರತಕ್ಕ ಪರಿಸ್ಥಿತಿಯಲ್ಲಿ 9 ಜಿಲ್ಲೆಗಳಿರುವುದು ಸರಿಯಾಗಿದೆ. ಅದರಲ್ಲಿ ಬದಲಾವಣೆ ಮಾಡುವುದು ಸದ್ಯಕ್ಕೆ ಅನಾವಶ್ಯಕ ಎಂದು ನನ್ನ ಅಭಿಪ್ರಾಯ.

ಜನಾಬ್ ಮುಷೀರ್-ಉಲ್-ಮುಲ್ಕ್ ಜೆ. ಮಹಮದ್ ಇಮಾಂರವರು.—ಸಂಸ್ಥಾನದಲ್ಲಿ ಜಿಲ್ಲೆಗಳನ್ನು ಕಡಿಮೆ ಮಾಡಬೇಕೆಂಬ ಪ್ರಸ್ತಾಪವು ಬಹಳ ದಿನಗಳಿಂದಲೂ ನಡೆಯುತ್ತಾ ಇದೆ. ಒಂದು ವಿಷಯವೇನೆಂದರೆ 9 ಜಿಲ್ಲೆಗಳನ್ನು 5 ಜಿಲ್ಲೆಗಳಿಗೆ ಇಳಿಸಿ, ಕಡಿಮೆ ಮಾಡಬೇಕೆಂಬ ಯೋಚನೆ ಸರ್ಕಾರದವರಿಗೆ ಇದೆ ಎಂಬ ಸುದ್ದಿ ಸಾಮಾನ್ಯವಾಗಿ ಜನರಲ್ಲಿ ಹರಡಿರುತ್ತದೆ. ಅದಕ್ಕೆ ಆಧಾರವಿದೆಯೋ ಇಲ್ಲವೋ ಹೇಳಲಾರೆ. ಸರ್ಕಾರದವರಿಗೆ ಈಗ ನಮ್ಮನ್ನು ಅವರ ನಂಬಿಕೆಗೆ ತೆಗೆದುಕೊಳ್ಳಲು ಒಂದು ಅವಕಾಶ ದೊರೆತಿದೆ. ಇಂಥ ಪ್ರಸಂಗ ಇದೆಯೋ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ತಿಳಿಸಿ ಇಂಥಾ ವದಂತಿಗಳು ಬಾರದ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಮಯದಲ್ಲಿ ಈ ಕತ್ತರಿ ನಿರ್ಣಯವನ್ನು ಶ್ರೀಮಾನ್ ಲಿಂಗಾರೆಡ್ಡಿಯವರು ತಂದದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಮುಖ್ಯವಾಗಿ ಅವರು ಇದನ್ನು ವೆಚ್ಚ ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ತಂದಿದ್ದಾರೆ.

ನಾನು ಬಡ್ಜೆಟ್ ಭಾಷಣ ಮಾಡುವಾಗ ತಿಳಿಸಿದ ಅಂಶವೇ ಈಗ ನಿಜವಾಯಿತು. ಅಂತೂ ಈಗ ಕಮ್ಮಿ ಮಾಡುವ ಪ್ರಸಂಗ ಬಂದಿದೆ. ಈಗಿನ

ತಮ್ಮ ಮನೋಭಾವ ಹೇಗಿರುತ್ತದೆಂದು ತಿಳಿಸುವಾಗ quantityಯನ್ನು ಹೆಚ್ಚಿಸುವುದಕ್ಕಿಂತ quality ಹೆಚ್ಚು ಮಾಡಬೇಕೆಂಬ ಇರಾದೆಯುಳ್ಳವರಾಗಿರುತ್ತೇವೆಂದು ತಾವು ತಿಳಿಸಿದ್ದೀರಿ. ಅದೇ ಮನೋಭಾವದಿಂದ ಇದನ್ನು ವಿಚಾರಮಾಡಿ ನೋಡುವುದಾದರೆ, ಆ ರೀತಿ qu lity ಯನ್ನು ಹೆಚ್ಚಿಸಬೇಕೆಂಬುದು ತಮ್ಮ ಉದ್ದೇಶವಾಗಿದ್ದರೆ, ಈ ಜಿಲ್ಲಾ ವಿಸ್ತೀರ್ಣ ಎಷ್ಟು ಚಿಕ್ಕದಾಗಿದ್ದರೆ, ಎಷ್ಟು handyಯಾಗಿದ್ದರೆ, ನಮ್ಮ ಕೈಹಿಡಿಗೆ ಹಿಡಿಸುತ್ತಿದ್ದರೆ, ಅಲ್ಲಿನ ಆಡಳಿತ ವ್ಯವಸ್ಥೆ, ಸರಿಯಾಗಿಯೂ ಮತ್ತು ಕ್ರಮವಾಗಿಯೂ ಇರುತ್ತದೆಂದು ನಾನು ಭಾವಿಸಿದ್ದೇನೆ. ವಿಸ್ತೀರ್ಣ ಹೆಚ್ಚಾದ ಹಾಗೆಲ್ಲ ಆಡಳಿತ ಸಮರ್ಪಕವಾಗಿರುವುದಿಲ್ಲ. ಹೊರಗಡೆಯಲ್ಲಿ ಕೆಲವು ಕಡೆ ಜಿಲ್ಲಾ ವಿಸ್ತೀರ್ಣಗಳು ದೊಡ್ಡದಾಗಿರುತ್ತವೆ. ನಾನೂ ಕೂಡ ಅಂಥಾ ದೊಡ್ಡದೊಡ್ಡ ಜಿಲ್ಲೆಗಳಾದ ಕೆಲವನ್ನು ಅಂದರೆ ಮದ್ರಾಸ್ ಗಡಿಯ ಬಳ್ಳಾರಿ ಮುಂತಾದ ಡಿಸ್ಟ್ರಿಕ್ಟ್‌ಗಳ ಕಡೆ ಹೋಗಿ ನೋಡಿದ್ದೇನೆ. ಆ ಏರ್ಪಾಡು ಬ್ರಿಟಿಷರ ಆಡಳಿತವಿದ್ದಾಗ ಮಾಡಲಾಗಿತ್ತು. ಆದರೆ ಅಲ್ಲಿಯ ಆಡಳಿತ ಎಷ್ಟು ಅಸಮರ್ಪಕವಾಗಿರುತ್ತೆಂಬುದನ್ನು ತಾವು ಅಲ್ಲಿ ಹೋಗಿ ನೋಡಿದರೆ ಅದೇ ಗೊತ್ತಾಗುತ್ತದೆ. ಅಲ್ಲಿಯ ಜನಗಳನ್ನು ವಿಚಾರ ಮಾಡಿದ್ದರಲ್ಲಿ ವರ್ಷಾನುಗಟ್ಟಲೆ ಒಂದೊಂದು ಹಳ್ಳಿಗೆ ತಾಸೀಲ್‌ದಾರರೂ ಕೂಡ ಬರುತ್ತಿಲ್ಲವೆಂದು ತಿಳಿಸಿದ್ದಾರೆ. ಆದುದರಿಂದ ನಾವು ಈ ವಿಚಾರದಲ್ಲಿ ಅವರ ಉದಾಹರಣೆಯನ್ನು ತೆಗೆದುಕೊಳ್ಳಬೇಕಾಗಿಲ್ಲ. ಈಗ ನಾವು ಇಲ್ಲಿ ವಿಂಗಡಿಸಿರತಕ್ಕಂಥ ಡಿಸ್ಟ್ರಿಕ್ಟುಗಳ ಪ್ರಮಾಣ ಸರಿಯಾಗಿದೆ. ಆದುದರಿಂದ ನಾವು ಬೇರೆ ವಿಚಾರಗಳಿಗೆ ಅಷ್ಟಾಗಿ ನಿಗಾ ಕೊಡಬೇಕಾದುದಿಲ್ಲ. ಅವು ಈಗ ಇರತಕ್ಕ ರೀತಿಯಲ್ಲಿಯೇ ಮುಂದುವರಿಯಬಹುದು. ಬದಲಾವಣೆ ಮಾಡಬೇಕೆಂಬುದನ್ನು ನಾನು ಒಪ್ಪುವುದಿಲ್ಲ.

ಈ ಬಗ್ಗೆ ತಾವು ನಮಗೊಂದು ಸಮಾಧಾನ ಹೇಳಬಹುದು. ನಮ್ಮ ಆಡಳಿತಕ್ಕೊಳಪಟ್ಟಿದ್ದ ಅನೇಕ ಇಲಾಖೆಗಳನ್ನು ಈಗ ನಾವು ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದೇವೆ. ಅಂದರೆ, ರೈಲ್ವೆ, ಮಿಲಿಟರಿ, ಇತ್ಯಾದಿ ಅನೇಕ ಬಾಬುಗಳನ್ನು ಬಿಟ್ಟುಕೊಟ್ಟಿರುವುದರಿಂದ, ಇಲ್ಲಿರುವ ಅಧಿಕಾರಿಗಳಿಗೆ ಕೆಲಸ ಕಡಿಮೆಯಾಗಿದೆ, ಆದಕಾರಣ ನಾವು ಈ ರೀತಿ ಮಾಡಬೇಕೆಂದಿದ್ದೇವೆ ಎಂದು ತಾವು ತಿಳಿಸಬಹುದು. ನಾನೂ ಸಹ ತಮ್ಮ ಆ ವಾದವನ್ನು ಒಪ್ಪಿಕೊಂಡರೂ, ಖರ್ಚನ್ನು ಕಡಿಮೆ ಮಾಡುವುದಕ್ಕೋಸ್ಕರವಾಗಿಯೇ ಈ ಜಿಲ್ಲೆಗಳನ್ನು ಕಮ್ಮಿ ಮಾಡಬೇಕೆಂಬುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಆದರೆ ಕೆಲಸ ನಿಜವಾಗಿಯೂ ಯಾರಿಗೆ ಕಡಿಮೆಯಾಗಿದೆಯೋ ಅಂಥವರನ್ನು ತಾವು ಕಡಿಮೆಮಾಡಬಹುದು. ಉದಾಹರಣೆಗೆ ಹೇಳುವುದಾದರೆ ಈಗ ಮಂತ್ರಿಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದು. ತಾವು ಅನೇಕ ಬಾಬುಗಳನ್ನು ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದೀರಿ.

ಅಧ್ಯಕ್ಷರು.—ಈಗ ತಾವು ಹೇಳುತ್ತಿರುವುದೆಲ್ಲ ಸರ್ವೇಸಾಧಾರಣವಾದ ವಿಚಾರಗಳು. ಈಗ ಈ ನಿರ್ಣಯಕ್ಕೆ ಸಂಬಂಧಪಟ್ಟದ್ದನ್ನು ಮಾತ್ರ ತಿಳಿಸಬಹುದು.

ಜನಾಬ್ ಜಿ. ಮಹಮದ್ ಇಮಾಂರವರು.—ಅದರಂತೆಯೇ ಈ ಸೆಕ್ರೆಟೇರಿಯಟ್ ಸಿಬ್ಬಂದಿಯನ್ನು ಕಮ್ಮಿ ಮಾಡಬಹುದು. ಆದರೆ ಜಿಲ್ಲೆಗಳನ್ನು ಕಡಿಮೆ ಮಾಡಬೇಕೆಂಬ ವಾದವನ್ನು ನಾನು ಒಪ್ಪುವುದಿಲ್ಲವಾದುದರಿಂದ ಈ ಕತ್ತರಿ ನಿರ್ಣಯವನ್ನು ನಾನು ವಿರೋಧಿಸುತ್ತೇನೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಅಧ್ಯಕ್ಷರೇ, ಶ್ರೀ ಲಿಂಗಾ ರೆಡ್ಡಿಯವರು ಈ ಕತ್ತರಿ ನಿರ್ಣಯವನ್ನು ತಂದಿರತಕ್ಕ ಉದ್ದೇಶ ಜಿಲ್ಲೆಗಳನ್ನು ಕಮ್ಮಿ ಮಾಡಬೇಕೆಂದಲ್ಲ; ಬಹುಶಃ ಖರ್ಚನ್ನು ಕಮ್ಮಿ ಮಾಡಬೇಕಾಗಿರುವುದಕ್ಕಾಗಿ ತಂದಿರುವಂತೆ ಕಾಣುತ್ತಿದೆ. ಆದರೆ ಹಣವನ್ನು ಉಳಿತಾಯ ಮಾಡುವ ಒಂದು ಉದ್ದೇಶದಿಂದಲೇ ಜಿಲ್ಲೆಗಳನ್ನು ಕಡಿಮೆ ಮಾಡಬೇಕೆಂಬುವಷ್ಟು ಮಟ್ಟಿಗೆ ನಮ್ಮ ಹಣಕಾಸಿನ ಸ್ಥಿತಿಯೇನೂ ಕೆಟ್ಟುಹೋಗಿಲ್ಲ. ನಮ್ಮ ಹಣಕಾಸಿನ ಸ್ಥಿತಿಯಲ್ಲಿ ನಾವು ಚೆನ್ನಾಗಿದ್ದೇವೆ ಮತ್ತು ನಮ್ಮ ಹಣಕಾಸಿನ ಸ್ಥಿತಿಯೂ ಸಹ ಭದ್ರವಾಗಿದೆ. ಅಷ್ಟೇನೂ ನಾವು ಕಳವಳಪಡಬೇಕಾಗಿಲ್ಲ. ಕೆಲವು ಜಿಲ್ಲೆಗಳು ದೊಡ್ಡವಾಗಿವೆ, ಕೆಲವು ಅಷ್ಟು ದೊಡ್ಡವಾಗಿಲ್ಲ. ಅದರಲ್ಲೂ ನಮ್ಮ ಚಿಕ್ಕಮಗಳೂರು ಜಿಲ್ಲೆ ಮೊದಲು ಹೋಗಬೇಕೆಂದು ಅನೇಕರು ಹೇಳುತ್ತಿದ್ದಾರೆ. ಇದನ್ನು ನಾನು ಖಂಡಿತ ಒಪ್ಪುವುದಿಲ್ಲ. ತಾವು ಇದು ಅಷ್ಟು ಚಿಕ್ಕದಾಗಿದೆಯೆಂದು ಭಾವಿಸಿದರೆ, ಅದಕ್ಕೆ ಭದ್ರಾವತಿ ತಾಲ್ಲೂಕನ್ನು ಸೇರಿಸಿಬಿಡಿ; ಆಗ ಅದೂ ದೊಡ್ಡದಾಗುತ್ತದೆ. ಚಿತ್ರದುರ್ಗ ದೊಡ್ಡದಾಯಿತೆಂದರೆ, ಇದೇ ರೀತಿ ಅದಕ್ಕೂ ಚಿತ್ರದುರ್ಗ ಜಿಲ್ಲೆಯಿಂದ ಹೊಸದುರ್ಗ ತಾಲ್ಲೂಕನ್ನು ಸೇರಿಸಿ ಕೊಡಬಹುದು. ತಾವು ಹೇಗೆ ಬೇಕಾದರೆ ಮಾಡಬಹುದು.

ಶ್ರೀ ಎಚ್. ಸಿದ್ಧವೀರಪ್ಪನವರು.—ಹೊಸದುರ್ಗ ತಾಲ್ಲೂಕು ಮೈದಾನ ಪ್ರದೇಶ. ಮಲೆನಾಡಿಗೆ ಸೇರಲು ಅವರಿಗೆ ಇಷ್ಟವಿಲ್ಲ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಮಲೆನಾಡಿನಲ್ಲಿ ತಿಳಿವಳಿಕೆ ಜಾಸ್ತಿ. ಅಲ್ಲಿಯವರೆಲ್ಲ ಬಹಳ ಬುದ್ಧಿವಂತರು. ಆದರೆ ತಾವು ಈ ವಿಚಾರಕ್ಕೆ ಮದರಾಸ್ ಮತ್ತು ಬೊಂಬಾಯಿಗಳ ಉದಾಹರಣೆಯನ್ನು ತೆಗೆದುಕೊಳ್ಳುವುದು ಅಷ್ಟು ಸರಿಯಾಗಿದ್ದಂತೆ ಕಾಣುವುದಿಲ್ಲ. ಈಗಿರುವ ಪದ್ಧತಿಯ ಪ್ರಕಾರ ನಮ್ಮ ಜಿಲ್ಲೆಗಳಲ್ಲಿ ಯಾವುದಕ್ಕೇ ಹೋಗಲಿ ಮಂತ್ರಿಗಳು ಕೇವಲ ಒಂದು ದಿವಸದಲ್ಲೇ ಒಂದು ಜಿಲ್ಲೆಯನ್ನು ಸುತ್ತಿಕೊಂಡು ಬರುವಷ್ಟು ಅನುಕೂಲವಾಗಿದೆ. ಇದೇ ವಿಚಾರವನ್ನು ಹೊರಗಡೆ ಬೊಂಬಾಯಿ ಇಲಾಖೆಯವರನ್ನು ಕೇಳಿದರೆ, 'ನಾವು ಎಷ್ಟೋ ವರ್ಷಗಳಾದರೂ ಮಂತ್ರಿಗಳೇಕೆ, ಕಲೆಕ್ಟರ ದರ್ಶನವೇ' ನಮಗೆ ಆಗುತ್ತಿಲ್ಲವೆಂದು ಅವರು ತಿಳಿಸುತ್ತಿದ್ದಾರೆ ಈ ಎಲ್ಲಾ ದೃಷ್ಟಿಗಳಿಂದಲೂ ನಾನು ಹೇಳುವುದೇನೆಂದರೆ, ಜಿಲ್ಲೆಗಳು ಆದಷ್ಟು ಚಿಕ್ಕದಾಗಿದ್ದರೆ ಅನುಕೂಲ. ಅಲ್ಲಿಯ ಕೆಲಸ ಕಾರ್ಯಗಳು ಚೆನ್ನಾಗಿ ಬಹಳ ವಿತರಣೆಯಿಂದ ನಡೆಯುತ್ತವೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಈಗ ಎಲ್ಲಾ ಕೆಲಸ ಕಾರ್ಯಗಳೂ ಅಷ್ಟು ಚೆನ್ನಾಗಿಯೂ ಮತ್ತು ಸಮರ್ಪಕವಾಗಿಯೂ ನಡೆಯುತ್ತಿವೆ. ಈ ಒಂದು ಎಕಾನಮಿ ಉದ್ದೇಶಕ್ಕಾಗಿಯೇ ನಾವು ಜಿಲ್ಲೆಗಳನ್ನು ಕಮ್ಮಿಮಾಡುವುದಕ್ಕಾಗುವುದಿಲ್ಲ; ಮತ್ತು ಹಾಗೆ ಮಾಡತಕ್ಕದ್ದೂ ಸೂಕ್ತವಲ್ಲ. ಹಣಕಾಸಿನ ಸ್ಥಿತಿಯನ್ನು ಬೇರೆ ಮಾರ್ಗದಲ್ಲಿ ಸರಿದೂಗಿಸಿಕೊಳ್ಳಬಹುದು. ಒಂದುವೇಳೆ ಖರ್ಚು ಬಾಬುಗಳಲ್ಲಿ ಯಾವುದಾದರೂ ಉಳಿತಾಯ ಮಾಡತಕ್ಕ ಮಾರ್ಗವಿದ್ದರೆ, ಅದನ್ನಾದರೂ ಮಾಡಿ ಅದರಿಂದ ನಮ್ಮ ಖರ್ಚು ಬಾಬುಗಳನ್ನು ಕಡಿಮೆ ಮಾಡಿಕೊಳ್ಳಬಹುದೆಂದು ನಾನು ತಿಳಿಸುತ್ತೇನೆ.

Sri M. GOVINDA REDDY.—I rise to support this cut motion. I have found that those who have opposed the motion have established a very

intimate connection between public welfare and the executive unit. I fail to see any such close relation of the public welfare with the administrative unit. We are now living in new times and we are visualising a new set-up. According to Mahatma Gandhi's idea which in principle the India Government have accepted, executive authority must be decentralised. It is only when we conceive of the lowest unit in the ladder of State administration—it is only when we conceive of the lowest unit having the requisite executive authority as far as its scope is concerned, that we can have efficiency, that we can have a larger measure of public welfare. For instance, take the village unit. It must have sufficient powers and it must have sufficient scope in order to attend to its own affairs. The executive authority as far as village affair is concerned, must be transferred to the village unit, and as far as the district unit is concerned, to the district. The district as a unit, with representatives of district population, must have the requisite power in order to promote its welfare and the central authority must interfere as little as possible in these matters. That is the idea of the decentralisation that has received popular support in the State polity of to-day. If we should agree to this, if we should accept this principle, then it is necessary that we should disconnect the executive authority from public welfare. Public welfare must be a matter which rests with the representatives of the people of the unit and not merely with the executive of the unit. The executive can only help the popular institutions in the matter of promotion of the welfare of the unit. If that is so, then whether the district is big or small, the executive has very little share in welfare work. It will be the district boards, it will be the village panchayats that will be the institutions which will be very closely concerned with public welfare. I fail to see, if the district area is widened, how it is going to affect public welfare. Although the districts are small, as many of the advocates for retaining the present system have said, the Deputy Commissioners are now not attending so much to public welfare as they should do. Their entire time is taken away by attending to tour programmes of the Ministers and by the hundred and other things which have been imposed upon them as District Magistrates and Deputy Commissioners. Well, they can only be guiding authorities; they can be supervising authorities, but they cannot be administering authorities as far as public welfare is concerned. Real public welfare work must be in th hands of the representatives of people; it must be in the hands of the popular institutions of the district level. If that is so, even if the area should be increased, the district institutions will be quite competent to attend to matters of public welfare. On the other hand, we would gain by reducing the number of districts. The expenditure will be minimised particularly on account of the strained finances of our Government to-day. Now we can say that it is only a few district officers that will be removed and there will be only a saving of their salaries; but what of the very idea that the district unit will bring in its wake a number of other institutions and other establishments? When we remember that a district has a separate unit for agriculture, a separate unit for public works, a separate unit for health and so also for every department of public administration, we will realise the full import of this. When we give up the idea of these smaller units or districts, when we enlarge them, then not only one District Superintendent of Police, one Depty Commissioner and one Sub-Division Officer, but also a services of units will be sarved if the districts are widened are saved. There will be a saving to the Government and we will be also widening the outlook of the people. Now we have a very unhealthy rivalry in the matter of erecting bridges, planning roads between the districts and as far as such matters are concerned, there is healthy rivalry between district and district and it will

e a difficult thing for the Government hen they have to distribute the few rants that they have, to satisfy any articular district. If we widen these istricts, then it would be very easy r Government to distribute these rants and you will be promoting a ommon and wider outlook in the popuation of the districts and to that extent e problems of the State also will be olved. Therefore from the point of iew particularly economy, and from e point of view of other relative dvantages, I strongly support this cut otion.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಲ್ಲೆ).—ಇದು ಬಹಳ ಮುಖ್ಯವಾದ ಸಮಸ್ಯೆ. ಡಿಸ್ಟ್ರಿಕ್ಟ್‌ಗಳನ್ನು ಕಡಿಮೆ ಮಾಡುವುದೇ, ಹೆಚ್ಚು ಮಾಡುವುದೇ ಎಂಬ ವಿಚಾರದಲ್ಲಿ ಎರಡು ಮುಖ್ಯ ಅಂಶಗಳನ್ನು ನೋಡಬೇಕು. ಒಂದು, ಈಗಿರುವ ಡಿಸ್ಟ್ರಿಕ್ಟ್‌ಗಳ ವಿಸ್ತೀರ್ಣ ಮತ್ತು ಜನಸಂಖ್ಯೆ ಎರಡನೆಯದು, ಆಡಳಿತ ಸೌಕರ್ಯ. ಶ್ರೀಮಾನ್ ಗುಂಡಪ್ಪಗೌಡರು ಆಡಳಿತ ದೃಷ್ಟಿಯಿಂದ ವಿಸ್ತೀರ್ಣ ಎಷ್ಟು ಕಡಿಮೆಮಾಡಿದರೆ ಅಷ್ಟೂ ಒಳ್ಳೆಯದೆಂದು ಹೇಳಿದರು. ಹಾಗೆಂದ ಮೇಲೆ ಶ್ರೀರಂಗಪಟ್ಟಣ ತಾಲ್ಲೂಕನ್ನೇ ಒಂದು ಡಿಸ್ಟ್ರಿಕ್ಟಾಗಿ ಮಾಡುವುದು ಸರಿಯೇ ? ಒಂದು ಡಿಸ್ಟ್ರಿಕ್ಟು ರಚಿಸಬೇಕಾದರೆ ಅದರ ವಿಸ್ತೀರ್ಣ, ಜನಸಂಖ್ಯೆ, ಆಡಳಿತದ ಅನುಕೂಲ, ಆದಾಯ, ಖರ್ಚು ವೆಚ್ಚಗಳೆಲ್ಲವನ್ನೂ ಪರಿಶೀಲಿಸಬೇಕು. ಹಿಂದೆ ನಮ್ಮ ದೇಶದಲ್ಲಿ ಡಿಸ್ಟ್ರಿಕ್ಟ್‌ಗಳು ಹೆಚ್ಚಿದ್ದುವು ಈಗ ಹೆಚ್ಚಾದುದಕ್ಕೆ ಕಾರಣವೇನೆಂಬುದನ್ನು ಪರಿಶೀಲಿಸಿದರೆ ಉತ್ತರ ತಾನೇ ಗೊತ್ತಾಗುತ್ತದೆ. ನಮ್ಮಲ್ಲಿ ಹಿಂದಿದ್ದ ಡಿಸ್ಟ್ರಿಕ್ಟ್‌ಗಳ ಸಂಖ್ಯೆಯೇ ಕ್ರಮವೆಂದು ನನಗೆ ಕಾಣುತ್ತದೆ. ಅಕ್ಕ ಪಕ್ಕದ ಪ್ರಾಂತ್ಯಗಳಲ್ಲಿ ಡಿಸ್ಟ್ರಿಕ್ಟುಗಳು ದೊಡ್ಡವಾಗಿವೆಯೆಂದೂ ಅದ್ದರಿಂದ ನಾವೂ ಅಷ್ಟೇ ದೊಡ್ಡದನ್ನಾಗಿ ಮಾಡಿಕೊಳ್ಳಬೇಕೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಅವು ಎಷ್ಟು ಚಿಕ್ಕದಾಗಿದ್ದರೆ ಅಷ್ಟೂ ಒಳ್ಳೆಯದೆಂಬುದಾಗಿ ಡಿಸ್ಟ್ರಿಕ್ಟ್‌ಗಳನ್ನು ಅನವಶ್ಯಕವಾಗಿ ಹೆಚ್ಚು ಮಾಡುವುದನ್ನೂ ನಾನು ಒಪ್ಪುವುದಿಲ್ಲ. 10-12 ಲಕ್ಷ ಪ್ರಜಾಸಂಖ್ಯೆಗೆ ಒಂದು ಡಿಸ್ಟ್ರಿಕ್ಟ್ ಮಾಡಿದರೆ ಉತ್ತಮವೇ ಎಂಬ ಅಂಶವನ್ನು ಪರಿಶೀಲನೆಮಾಡುವುದು ಉತ್ತಮ. ಇನ್ನು ಮುಂದೆ ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳೆಲ್ಲವನ್ನೂ ವಿಲೇಜ್ ಪಂಚಾಯಿತ್ತಿಗಳಿಗೂ ಡಿಸ್ಟ್ರಿಕ್ಟ್ ಕೌನ್ಸಿಲ್‌ಗಳಿಗೂ ವಹಿಸಬೇಕೆಂದೂ ಆಡಳಿತಾಧಿಕಾರಿಗಳಿಗೆ ಈ ಹೊರೆಯನ್ನು ಕಡಿಮೆ ಮಾಡಬೇಕೆಂದೂ ಒಂದು ಅಭಿಪ್ರಾಯವಿದೆ. ಈ ಸಂಬಂಧದಲ್ಲಿ ಡಿಸ್ಟ್ರಿಕ್ಟ್‌ಗಳನ್ನು ಇರುವುದಕ್ಕಿಂತ ಹೆಚ್ಚಿಗೆ ಮಾಡುವುದರ ಬದಲು ಕಡಿಮೆ ಮಾಡುವುದು ಸೂಕ್ತವೇ ಎಂಬ ಅಂಶವನ್ನು ಯೋಚನೆ ಮಾಡಬೇಕು. ಒಂದು ಡಿಸ್ಟ್ರಿಕ್ಟಿನಲ್ಲಿ ವ್ಯವಸಾಯ, ಪೋಲೀಸ್, ಎಂಜಿನಿಯರಿಂಗ್ ಮುಂತಾದ ಎಲ್ಲಾ ಇಲಾಖೆಗಳೂ ಇರಬೇಕು. ಇದರಿಂದ ಖರ್ಚು ಹೆಚ್ಚುವುದರಲ್ಲಿ ಸಂದೇಹವಿಲ್ಲ. ಈಗ ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ 10 ತಾಲ್ಲೂಕುಗಳಿವೆ. ಇದರ ಜೊತೆಗೆ ಎರಡು ತಾಲ್ಲೂಕುಗಳು ಸೇರಿಸಿದರೆ ಏನಾಗುತ್ತದೆ ? ಮಂಡ್ಯ ಡಿಸ್ಟ್ರಿಕ್ಟ್ ಎಲ್ಲವನ್ನೂ ಮೈಸೂರಿಗೆ ಸೇರಿಸಿಬಿಡುತ್ತೇವೆಂದು ಹೇಳಿದರೆ ಸ್ವಲ್ಪ ಕಷ್ಟವಾಗಬಹುದು. ಅದು ಬಿಟ್ಟು ಶ್ರೀರಂಗಪಟ್ಟಣ, ಫ್ರೆಂಚ್‌ರಾಕ್ಸ್—ಈ ಎರಡು ತಾಲ್ಲೂಕುಗಳು ಮೈಸೂರಿಗೆ ಸೇರಿಸಲ್ಪಟ್ಟರೆ ಏನೂ ಕಷ್ಟವಾಗುವುದಿಲ್ಲ. ಏಕೆಂದರೆ ದಕ್ಷತೆಯೆಂಬುದು ಆಡಳಿತ ವಿಸ್ತೀರ್ಣ ಜೊತೆಗೆ ಆಡಳಿತಾಧಿಕಾರಿಯ ಮೇಲೆಯೂ ಸಹ ಹೋಗುತ್ತದೆ. ಆದ್ದರಿಂದ ಒಂದೆರಡು ತಾಲ್ಲೂಕು ಜಾಸ್ತಿಯಾದರೆ ಹೆಚ್ಚು ತೊಂದರೆಯಾಗುತ್ತದೆಂದು ಭಾವಿಸಬಾರದು. ಅದರಲ್ಲೂ ಮಂಡ್ಯ ಡಿಸ್ಟ್ರಿಕ್ಟಿನ ತಾಲ್ಲೂಕುಗಳ ಪೈಕಿ ಎರಡನ್ನು ಮೈಸೂರಿಗೂ ಎರಡನ್ನು ಬೆಂಗಳೂರಿಗೂ, ಮತ್ತೆರಡನ್ನು ಹಾಸನಕ್ಕೂ ಹಂಚಿ ಹಾಕಿದರೆ ಸಮರ್ಪಕವಾಗಿರುತ್ತದೆ. ಆಡಳಿತ ದಕ್ಷತೆ ಕಮ್ಮಿಯಾಗುವುದಿಲ್ಲ, ಸ್ವಪರಿಪೂರ್ಣತೆಯೂ ಇರುತ್ತದೆ.

ಒಬ್ಬ ಸದಸ್ಯರು.—ಮೈಸೂರು ಮಂಡ್ಯಕ್ಕೆ ಸೇರಿದರೂ ಆಗುತ್ತದೆ !

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಆಡಳಿತ ದೃಷ್ಟಿಯಿಂದ ಪುನರ್ವ್ಯವಸ್ಥೆ ಮಾಡಿ ಜಿಲ್ಲೆಗಳನ್ನು ಕಡಿಮೆ ಮಾಡುವುದೇ ಅಥವಾ ಹೆಚ್ಚು ಮಾಡುವುದೇ ಎಂಬುದನ್ನು ಪರಿಶೀಲನೆ ಮಾಡಬೇಕಾದ್ದು ಅಗತ್ಯ. ಪುನರ್ವಿಮರ್ಶೆ ಮಾಡಿ ಜಿಲ್ಲೆಗಳ ಸಂಖ್ಯೆಯನ್ನ ಕಡಿಮೆ ಮಾಡಿ ತನ್ಮೂಲಕ ಹಣಕಾಸಿನ ವೆಚ್ಚವನ್ನು ಕಡಿಮೆಮಾಡುವ ಅವಕಾಶವಿದ್ದರೆ. ಏಕೆ ಮಾಡಕೂಡದು ? ಎಂಬುದೇ ನನ್ನ ಪ್ರಶ್ನೆ. 5 ಲಕ್ಷ ಪ್ರಜಾಸಂಖ್ಯೆಯಿರುವಾಗ ಚಿಕ್ಕಮಗಳೂರು ಜಿಲ್ಲೆಯ ಎರಡು ತಾಲ್ಲೂಕುಗಳನ್ನು ಹಾಸನಕ್ಕೂ ಇನ್ನೆರಡನ್ನು ಶಿವಮೊಗ್ಗಾಕ್ಕೂ ಕೊಟ್ಟರೆ ಆಗುವ ತೊಂದರೆಯೇನು ? ಆಡಳಿತಕ್ಕೆ ಖಂಡಿತ ತೊಂದರೆಯಾಗುವುದಿಲ್ಲ ಆದ್ದರಿಂದ ಇದನ್ನು ಪರಿಶೀಲನೆ ಮಾಡುವುದಕ್ಕೆ ತುಂಬಾ ಅವಕಾಶವಿದೆ. ಕಮ್ಮಿ ಮಾಡುವುದು ಉತ್ತಮ, ಮಾಡಿಯೇತೀರಬೇಕೆಂದು ನಾನು ಹೇಳುವುದಿಲ್ಲ. ಸರ್ಕಾರದವರು ಅಂಕಿ ಅಂಶಗಳನ್ನು ಪರಿಶೀಲನೆ ಮಾಡಿ ಜಿಲ್ಲೆಗಳನ್ನು ಕಮ್ಮಿ ಮಾಡುವುದರಿಂದ ದಕ್ಷತೆಗೆ ಧಕ್ಕೆ ಬಾರದಿದ್ದರೆ ಏಕೆ ಪರಿಶೀಲನೆ ಮಾಡಬಾರದೆಂದು ಹೇಳಿ ಈ ಖೋತಾ ಸೂಚನೆಯನ್ನು ಅನುಮೋದಿಸುತ್ತೇನೆ.

ಶ್ರೀ ಎಚ್. ಸಿದ್ದಯ್ಯನವರು.—ಅಧ್ಯಕ್ಷರೇ, ಇದು ಬಹಳ ಸ್ವಾರಸ್ಯವಾದ ವಿಷಯವಾಗಿ ಪರಿಣಮಿಸಿದೆ. ಬಹಳ ಭಿನ್ನಾಭಿಪ್ರಾಯದಿಂದಲೂ ಕೂಡಿದೆ. ಒಂದು ವಿಚಾರ. ಸಾಮಾನ್ಯವಾಗಿ ಬಹುಮತದವರ ಅಭಿಪ್ರಾಯಕ್ಕೆ ಒಪ್ಪಿಗೆಬರುವ ರೀತಿಯಲ್ಲಿ ಕಾಣುತ್ತದೆ. ಒಂದು ಪ್ರಶ್ನೆಯನ್ನು ಮಾನ್ಯ ಸದಸ್ಯರಿಗೆ ಹಾಕಿದರೆ ಪ್ರಾಯಶಃ ಇಷ್ಟು ಗೊತ್ತಾಗುತ್ತದೆ, ಯಾರು ತಮ್ಮ ಜಿಲ್ಲೆಯನ್ನು ಬಿಟ್ಟುಕೊಡುತ್ತಾರೆ ಎಂದು ಕೇಳಿದರೆ ಯಾರೂ ಅದನ್ನು ಒಪ್ಪುವಂತೆ ಹೇಳುವುದಕ್ಕಾಗುವುದಿಲ್ಲ. ಇದರಲ್ಲಿ ಒಂದು ವಿಚಾರ ಇದೆ. ಮದ್ರಾಸಿನ ವಿಚಾರ ಕೆಲವರು ಹೇಳಿದರು. ಅಲ್ಲಿ ಸರಾಸರಿ 10 ಲಕ್ಷ ಪ್ರಜೆಗೆ ಒಂದು ಡಿಸ್ಟ್ರಿಕ್ಟ್ ಮಾಡಿದ್ದಾರೆ. ಸುಮಾರು 4,400 ಚದರ ಮೈಲಿಗೆ ಒಂದು ಡಿಸ್ಟ್ರಿಕ್ಟಿನಂತೆ ಮಾಡಿದೆ. ಅದೇ ನಮ್ಮ ಮೈಸೂರಿನಲ್ಲಿ ನೋಡಿದರೆ, ಸರಾಸರಿ 3,30) ಚದರ ಮೈಲಿಗೆ ಒಂದು ಡಿಸ್ಟ್ರಿಕ್ಟಿನ ಹಾಗೂ, ಸರಾಸರಿ 8 ಲಕ್ಷ ಪ್ರಜಾಸಂಖ್ಯೆಯಂತೆಯೂ ಇದೆ. ಎರಡು ಜಿಲ್ಲೆಗಳಲ್ಲಿ 7 ತಾಲ್ಲೂಕುಗಳೂ, ಒಂದು ಜಿಲ್ಲೆಯಲ್ಲಿ 8 ತಾಲ್ಲೂಕುಗಳೂ, ಇನ್ನು ಮಿಕ್ಕವುಗಳಲ್ಲಿ 10-12 ತಾಲ್ಲೂಕುಗಳೂ ಇವೆ. ಆದ್ದರಿಂದ ಸರಾಸರಿ ಲೆಕ್ಕ ಹಾಕಿದರೆ 9 ತಾಲ್ಲೂಕುಗಳು ಒಂದು ಜಿಲ್ಲೆಗಿರಬೇಕೆಂದು ಗೊತ್ತುಮಾಡಿದೆ. ಇವೆಲ್ಲವನ್ನೂ ಯೋಚನೆಮಾಡಿದರೆ ತಕ್ಷಣ ಒಂದು ಅಭಿಪ್ರಾಯಕ್ಕೆ ಬರುವುದು ಅಷ್ಟು ಸುಲಭವಲ್ಲವೆಂದು ತೋರುತ್ತದೆ. ಸುಮ್ಮನೆ ಯೋಚನೆ ಮಾಡಬಹುದು. ಪ್ರತಿ

ಯೊಂದು ಜಿಲ್ಲೆಯ ಆಡಳಿತವೂ ಸುವ್ಯವಸ್ಥಿತವಾದ ರೀತಿಯಲ್ಲಿ ನಡೆದುಕೊಂಡು ಬರುವುದಕ್ಕೆ ಏನು ಮಾಡಬೇಕೆಂಬದನ್ನು ಯೋಚನೆ ಮಾಡಬೇಕಾದ್ದು ಅವಶ್ಯಕ ಇಷ್ಟು ಮಾತ್ರ ಪ್ರಕೃತದಲ್ಲಿ ಹೇಳಬೇಕಾಗಿದೆ. ಹತ್ತು ಜಿಲ್ಲೆಯಿಂದ 9 ಜಿಲ್ಲೆಯಾಗಿ ಮಾಡಿದರೆ ಮಾಡಿದಾಗ ಯಾರೂ ಆಕ್ಷೇಪಣೆ ಮಾಡಲಿಲ್ಲ. ಆದರೆ ಈಗ 9 ಜಿಲ್ಲೆಯನ್ನು ಕಡಿಮೆ ಮಾಡಬೇಕು ಎಂದರೆ ತಕ್ಷಣ ಅನೇಕ ವಿರೋಧಗಳು ಬರುತ್ತವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಮತ್ತು ಮಂಡ್ಯ ಜಿಲ್ಲೆಯ ವಿಚಾರವನ್ನು ಅಷ್ಟೊಂದು ಗಮನಕೊಡಬೇಕಾಗಿಲ್ಲ. ಅಲ್ಲಿನ ಸಮಸ್ಯೆಗಳು ಬಹಳ ತೊಡಕಿನದಾಗಿವೆ. ದೀರ್ಘವಾಗಿ ಆಲೋಚನೆ ಮಾಡಿದರೆ ಅದನ್ನು ತೆಗೆಯುವುದಕ್ಕೇ ಆಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಇನ್ನೊಂದು ದೃಷ್ಟಿಯಲ್ಲಿ ಜನಸಂಖ್ಯೆ ಮತ್ತು ವಿಸ್ತೀರ್ಣದ ಮೇಲೆ ಲೆಕ್ಕಹಾಕಿದರೆ ಚಿತ್ರದುರ್ಗ, ಕೋಲಾರ, ಬೆಂಗಳೂರು, ಶಿವಮೊಗ್ಗ, ಮೈಸೂರು— ಇವುಗಳನ್ನು ಬದಲಾಯಿಸುವುದಕ್ಕೆ ಸಾಧ್ಯವೇ ಇಲ್ಲವೆಂದು ಗೊತ್ತಾಗುತ್ತದೆ. ಇನ್ನು ಮಿಕ್ಕ ಕೆಲವು ಜಿಲ್ಲೆಗಳನ್ನು ತೆಗೆದುಹಾಕಿ ಅವುಗಳ ತಾಲ್ಲೂಕುಗಳನ್ನು ಪುನರ್ ಹಂಚಿಕೆ ಮಾಡಿ, ಯಾವುದರಲ್ಲಿ ತಾಲ್ಲೂಕುಗಳು ಕಡಿಮೆ ಇವೆಯೋ, ಜನಸಂಖ್ಯೆ ವಿಸ್ತೀರ್ಣ ಮುಂತಾದುವುಗಳನ್ನು ನೋಡಿದರೆ ಯಾವ ಜಿಲ್ಲೆಗಳಲ್ಲಿ ಕಡಿಮೆಯಾಗಿವೆಯೋ ಅಲ್ಲಿಗೆ ಇವು ಯಾವುದನ್ನು ಸೇರಿಸಿದರೂ ಆಡಳಿತಕ್ಕೆ ತೊಂದರೆಯಾಗುವುದಿಲ್ಲ, ಮತ್ತು ಆರ್ಥಿಕ ನೀತಿ ವರ್ತಿಸಲಿಕ್ಕೆ ತೊಂದರೆಯೂ ಆಗುವುದಿಲ್ಲವೆಂಬದು ನನ್ನ ಸ್ವಂತ ಅಭಿಪ್ರಾಯ. ಅಂತೂ ಪ್ರಕೃತದಲ್ಲಿ ಸರ್ಕಾರದವರ ಪರವಾಗಿ ಹೇಳುವಾಗ ಇದನ್ನು ಕಡಿಮೆಮಾಡುವ ವಿಚಾರ ಇನ್ನೂ ಆಲೋಚನೆಗೆ ಬಂದಿಲ್ಲ. ಕಾರಣ ಇಷ್ಟೆ: ನಾನಾ ಕಾರಣಗಳಿಂದ ದೇಶದಲ್ಲಿ ರಾಜಕೀಯ ವಾತಾವರಣ ಎಷ್ಟರಮಟ್ಟಿಗೆ ಬೆಳೆದುಕೊಂಡು ಬಂದಿದೆ ಮತ್ತು ರಾಜಕೀಯ ಭಾವನೆಗಳು ಯಾವರೀತಿ ಹೊಸ ಹೊಸದಾಗಿ ಮೂಡುತ್ತಿವೆಯೆಂಬುದನ್ನು ಸ್ವಲ್ಪ ಗಮನಕ್ಕೆ ತೆಗೆದುಕೊಂಡರೆ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಜವಾಬ್ದಾರಿ ಎಷ್ಟು ಹೆಚ್ಚಿನದಾಗಿದೆಯೆಂಬುದನ್ನು ದೇಶದಲ್ಲಿ ನ್ಯಾಯ ನಡೆವಳಿಕೆಗಳನ್ನು ನೋಡಿಕೊಳ್ಳುವುದರಲ್ಲಿ ಎಷ್ಟು ಕಷ್ಟವಿದೆಯೆಂಬದನ್ನೂ ನಾವೀಗ ಸ್ವಲ್ಪ ಸೂಕ್ಷ್ಮವಾಗಿಯೇ ಆಲೋಚನೆ ಮಾಡಬೇಕಾಗಿದೆಯೆಂದು ಹೇಳುತ್ತೇನೆ.

ಎರಡನೆಯದು, ಈಚೆಗೆ ಕಂಟ್ರೋಲ್ ಇರುವುದರಿಂದ ಆಹಾರ ಶೇಖರಣೆಗೆ ಮತ್ತು ಹಂಚಿಕೆಗೆ ಸ್ವಲ್ಪ ಹೆಚ್ಚು ಗಮನಕೊಡಬೇಕಾಗಿದೆ. ಇದೆಲ್ಲಕ್ಕಿಂತ ಅತಿಯಾಗಿ ದೇಶ ಸ್ವಪರಿಪೂರ್ಣವಾಗಿರಬೇಕೆಂಬ ಅಭಿಪ್ರಾಯ ಎಲ್ಲರಲ್ಲೂ ಇರುವುದರಿಂದ, ಹೆಚ್ಚು ಆಹಾರ ಬೆಳೆಯುವ ಯೋಜನೆಯನ್ನು ವಿಶೇಷ ರೀತಿಯಲ್ಲಿ ನಡೆಸಬೇಕಾಗಿರುವುದರಿಂದ, ಜಿಲ್ಲಾಧಿಕಾರಿಗಳ ಕೆಲಸ ವಿಪರೀತವಾಗಿದೆಯೆಂಬ ವಿಚಾರವನ್ನು ಕೂಡ ಗಮನಕ್ಕೆ ತೆಗೆದುಕೊಳ್ಳಬೇಕು. ಹೀಗೆ ಗ್ರಾಮಾಭಿವೃದ್ಧಿ ಇತ್ಯಾದಿ ಹೆಚ್ಚಿನ ಕೆಲಸ ಕಾರ್ಯಗಳು ಇತ್ತೀಚೆಗೆ ಇಂಥ ಜಿಲ್ಲಾಧಿಕಾರಿಗಳಿಗೆ ಹೆಚ್ಚಾಗುತ್ತಾ ಇರುವುದರಿಂದ, ಜಿಲ್ಲೆಗಳನ್ನು ಪ್ರಕೃತದಲ್ಲಿ ಕಡಮೆ ಮಾಡುವುದು ಸೂಕ್ತವಾಗಿಲ್ಲವೆಂಬುದು ಬಹು ಜನರ ಅಭಿಪ್ರಾಯವೆಂದು ಕಂಡುಬಂದಿದೆ. ಅಂತೂ ಸ್ವಯಂಪರಿಪೂರ್ಣತೆಯು ತಕ್ಷಣ ಆಗಬೇಕಾದ್ದು ಅಗತ್ಯ. ಏನೇ ಇರಲಿ, ಕಂಟ್ರೋಲ್ ಇರುವವರೆಗೆ ಈ ಯೋಚನೆ ಮಾಡಬೇಕಾದ ಅಗತ್ಯವಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಕೇಂದ್ರ ಸರ್ಕಾರದಿಂದ ಸೂಚನೆ ಬಂದರೆ ?

ಶ್ರೀ ಎಚ್ ಸಿದ್ದಯ್ಯನವರು.—ಪರಿಶೀಲಿಸಲಾಗುತ್ತದೆ; ರಾಜಕೀಯ ದೃಷ್ಟಿಯಿಂದ ಯೋಚನೆ ಮಾಡಬೇಕಾಗುತ್ತದೆ. ಅಂತೂ ಸದ್ಯದಲ್ಲಿ 5-6 ಜಿಲ್ಲೆ ಮಾಡಬೇಕೆಂಬ ಭಾವನೆಯಿಲ್ಲ.

Sri H. C. LINGA REDDY.—In view of the assurance given by the Hon'ble Minister, that the question would be examined, I withdraw the cut motion.

The cut motion was, by leave of the Assembly, withdrawn.

Mr. SPEAKER.—The question is.—

"That a sum not exceeding Rs. 48,82,000 be granted to the Government to defray the charges which will come in course of payment during the year ending 31st day of March 1951 in respect of 'Land Revenue'".

The motion was adopted.

Demand No. 2—2, Forest.

Sri R. CHENNIGARAMIAH.—(Minister for Local Self-Government).—Sir, on the recommendation of His Highness the Maharaja, I beg to move.—

"That a sum not exceeding Rs. 39,95,000 be granted to the Government to defray the charges which will come in course of payment during the year ending 31st day of March 1951, in respect of 'Forest'".

Mr. SPEAKER.—Motion moved:—

"That a sum not exceeding Rs. 39,95,000 be granted to the Government to defray the charges which will come in course of payment during the year ending 31st day of March 1951. in respect of 'Forest'".

Free supply of Bamboos etc., to Depressed class people for construction of dwelling house.

Sri MADIAH (Mysore District—Depressed Class).—Sir, I beg to move:—

"That the demand under the head :—
'2. Forest 1. Conservancy and Works' for Rs. 19,64,900 be reduced by Re. 1 (to raise a discussion about the a need for free supply of bamboos and other building materials necessary for construction of dwelling houses to the members of the Depressed Classes from the local or State Forest areas in the State."

ಸ್ವಾಮಿ, ಈ ಖೋತಾ ಸೂಚನೆಯಲ್ಲಿರತಕ್ಕಂಥ ವಿಷಯ ದೊಡ್ಡದಲ್ಲ. ಆದರೆ ಬಹಳ ಮುಖ್ಯವಾದುದು. ಮೈಸೂರು ಸಂಸ್ಥಾನದಲ್ಲಿರುವ 16 ಸಾವಿರ ಹಳ್ಳಿಗಳಲ್ಲಿರುವ ನಿಮ್ನ ತರಗತಿಯವರ ಮನೆಗಳ ಸ್ಥಿತಿಯು ಚಿಂತಾಜನಕವಾಗಿರುವುದು ಮಾನ್ಯ ಸದಸ್ಯರಾದ ತಮ

ಗೆಲ್ಲರಿಗೂ ಸಹ ಚೆನ್ನಾಗಿ ಮನವರಿಕೆಯಾಗಿದೆ. ಎಲ್ಲಿ ನೋಡಿದರೂ ಸಹ ಹುಲ್ಲು ಮನೆಯಿದೆ, ತೆಂಗಿನಗರಿಗಳಿಂದ ಕೂಡಿದ ಜೋಪಡಿಗಳಿವೆ. ಇಂಥ ಶೋಚನೀಯ ಪರಿಸ್ಥಿತಿಯನ್ನು ನೋಡಿ ತಮ್ಮಂಥ ಅನೇಕ ಮಾನ್ಯ ಸದಸ್ಯರೂ ಮತ್ತು ಸರ್ಕಾರದವರೂ ಆಲೋಚನೆ ಮಾಡಿ ಈ ಮನೆಗಳನ್ನು ಉತ್ತಮಪಡಿಸುವುದಕ್ಕಾಗಿ ಕೆಲವು ಮಾರ್ಗಗಳನ್ನು ಕಂಡುಹಿಡಿದು ಮನೆ ಕಟ್ಟುವುದಕ್ಕೆ ಆಗತ್ಯವಾಗಿ ಬೇಕಾದ ಮರದ ಸಾಮಾನು ವಗೈರೆ, ತಂದು ಕಟ್ಟುವುದಕ್ಕೆ ನಿಮ್ನ ವರ್ಗದವರಿಗೆ ಸಾಧ್ಯವಿಲ್ಲದೇಯಿರುವುದರಿಂದ ಮೈಸೂರು ಸಂಸ್ಥಾನದ ಅರಣ್ಯ ಇಲಾಖೆಯಲ್ಲಿ ಯಥೇಚ್ಛವಾಗಿರುವ ಪ್ರಕೃತಿ ಸಂಪತ್ತಿನಿಂದ ಕೆಲವು ಕಾಡುಮರದ ಸಾಮಾನುಗಳನ್ನು ತಂದು ಮನೆ ಕಟ್ಟಿಕೊಳ್ಳರೆಂಬ ಸದುದ್ದೇಶದಿಂದ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದರು. ಅದರಂತೆ ಸುಮಾರು 15 ರೂಪಾಯಿಗಳಷ್ಟು ಗಳುಗಳು ಮತ್ತು ಇತರ ಕಾಡುಮರದ ಸಾಮಾನು ತಂದು ಮನೆಯನ್ನು ನಿಮ್ನ ವರ್ಗದವರು ಕಟ್ಟಿಕೊಳ್ಳಲು ಅವಕಾಶಕೊಟ್ಟರು. ಇತ್ತೀಚೆಗೆ ಅದರ ಬೆಲೆ ಜಾಸ್ತಿಯಾದ್ದರಿಂದ 30 ರೂಪಾಯಿಗಳವರೆಗೂ ಕಾಡುಗಳಲ್ಲಿ ಸಾಮಾನುಗಳನ್ನು ತಂದು ಮನೆ ಕಟ್ಟಿಕೊಳ್ಳಬಹುದೆಂದು ಆಜ್ಞೆ ಮಾಡಿದ್ದಾರೆ. ಕಾಡು ಸಾಮಾನುಗಳಿಗೆ ಮಾತ್ರ ಅವಕಾಶ ಕೊಟ್ಟಿದ್ದಾರೆ. ಸಾಗುವಾನಿ ಮುಂತಾದ ಮರಗಳನ್ನೇನೂ ನಾನು ಕೇಳಿರುವುದಿಲ್ಲ. ಈಗ ಬೊಂಬು ಮತ್ತು ಇತರ ಮನೆ ಕಟ್ಟುವ ಸಾಮಾನುಗಳನ್ನು ಮಾತ್ರ ಕೇಳಿದ್ದೇನೆ. ನನ್ನ ಸೂಚನೆಯು ಕಾಡಿನಲ್ಲಿ ಬೆಳೆದಿರುವ ಕಾಡು ಮರಗಳಿಗೆ ಮಾತ್ರ ಅನ್ವಯಿಸುತ್ತದೆ. ಸಾಗುವಾನಿ ಮುಂತಾದ ಬೆಲೆ ಬಾಳುವ ಮರಗಳನ್ನು ಕೇಳಿರುವುದಿಲ್ಲ. ಪಟ್ಟಣವಾಸಗಳಲ್ಲಿ ಸೌದೆಗಾಗಿ ತಂದು ಬೇಕಾದಷ್ಟು ಮರಗಳನ್ನು ಉಪಯೋಗಿಸಿಕೊಳ್ಳುವಾಗ ಯಾವ ಸಂಪಾದನೆಯೂ ಇಲ್ಲದೆ ಮಾತನಾಡುವ ಪ್ರಾಣಿಯಂತಿರುವ ನಿಮ್ನ ವರ್ಗದವರಿಗೆ ವಾಸಮಾಡುವುದಕ್ಕೆ ಲಾಯಕ್ಕಾದ ಮನೆಗಳನ್ನು ಕಟ್ಟಿಕೊಳ್ಳಲು ಸರ್ಕಾರದವರು ಕೊಟ್ಟಿರುವ ಸಹಾಯ ಪೂರ್ತ ದೊರೆತು, ಸಾರ್ಥಕವಾಗುತ್ತಿಲ್ಲ. ಆದಕ್ಕಾಗಿ ಕೆಲವು ಸೂಚನೆ ಕೊಡಲು ಈ ನಿರ್ಣಯ ತಂದಿದ್ದೇನೆ.

ನಮ್ಮಲ್ಲಿ ಎಲ್ಲೆಲ್ಲೂ ಬಡವರೇ ಇದ್ದಾರೆ. ಅವರಿಗೆ ಮರಗಳನ್ನು ತರುವುದಕ್ಕೆ ಲೈಸೆನ್ಸ್ ಕೊಡುತ್ತಾರೆ, ರೆವೆನ್ಯೂ ಇಲಾಖೆಯವರು ಶಿಫಾರ್ಸು ಮಾಡಿ ಅರಣ್ಯ ಇಲಾಖೆಗೆ ಕಳುಹಿಸಿದ ಮೇಲೆ ಒಂದೆರಡು ತಿಂಗಳ ನಂತರ ಲೈಸೆನ್ಸ್ ಬರುತ್ತದೆ. ಅದರ ಪ್ರಕಾರ ಮರಗಳನ್ನು ತಂದು ಕೆಲಸ ಮಾಡಿ ಮನೆಕಟ್ಟಿಕೊಳ್ಳಲು ಸಾಲುವುದಿಲ್ಲ. ಏಕೆಂದರ ಲೈಸೆನ್ಸ್ ಪ್ರಕಾರ 100 ಅಥವಾ 200 ಗಳುಗಳಿಗೆ ಮತ್ತು ಕಾಡು ಮರದ ಸಾಮಾನುಗಳಿಗೆ ಅವಕಾಶ ಕೊಡುತ್ತಾರೆ, ಆದರೆ ಅದನ್ನು ತರಲು ಅವರಿಗೆ ಸೌಕರ್ಯವಿಲ್ಲ. ಉದಾಹರಣೆಗೆ ಕಳೆದ ಒಂದು ತಿಂಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ಕೆಲವರಿಗೆ ಮಾಫಿ ಲೈಸೆನ್ಸ್ ಕೊಟ್ಟಾಗ ಎತ್ತು ಗಾಡಿಗಳು ಸಿಕ್ಕದೆ ಯಾರಿಂದಲೋ ಬಾಡಿಗೆಗೆ ತೆಗೆದುಕೊಂಡು ಅಥವಾ ಕೂಲಿ ಮಾಡಿ ಆಶ್ರಯಿಸಿ ತರಬೇಕಾಯಿತು. ಅಷ್ಟು ಕಷ್ಟಪಟ್ಟು ಹೋಗಿ ತಂದರೂ ಸಹ ಲೈಸೆನ್ಸಿನಲ್ಲಿ ನಮೂದಿಸುವ ಸಾಮಾನುಗಳು ಸಾಲುವುದಿಲ್ಲ. ಪ್ರಕೃತಿ ಸಂಪತ್ತು ಹೆಚ್ಚಾಗಿರುವ ದೇಶದಲ್ಲಿ ಮನೆ ಕಟ್ಟುವುದಕ್ಕೆ ಸಾಕಷ್ಟು ಕಾಡು ಸಾಮಾನೂ ಸಹ ಇಲ್ಲದಿದ್ದರೆ ಎಷ್ಟು ಕಷ್ಟ ಎಂಬುದನ್ನು ಮನಗಂಡು ಈ ಖೋತಾ ನಿರ್ಣಯವನ್ನು ತಂದಿದ್ದೇನೆ. ಸರ್ಕಾರದವರು ಕೊಡುವ 19 ಲಕ್ಷ ರೂಪಾಯಿಗಳ ಗ್ರಾಂಟು ಸೌಕರ್ಯವು 1 ಲಕ್ಷ ಜನರಿಗೆ ಆಗಬೇಕಾಗಿದೆ, ಆದರೆ ಈ ಕೊಡುವುದು ಸಾಲದು. ಒಂದೊಂದು ತಾಲ್ಲೂಕಿನಲ್ಲೂ 60–70 ಕುಟುಂಬಗಳಿಗೆ ಮಾತ್ರ ದೊರೆಯುತ್ತದೆ. ಪ್ರತಿ ತಾಲ್ಲೂಕಿನಲ್ಲೂ ಸುಮಾರು 200 ಗ್ರಾಮಗಳಿರುವಾಗ ಒಂದು ಕುಟುಂಬಕ್ಕೂ ಸಾಲುವುದಿಲ್ಲ. ಕೆಲವು ಕಡೆ ಕುಟುಂಬ ಒಂದಕ್ಕೆ 4-0-0 ರೂಪಾಯಿಗಳಂತೆ ಕೊಡುತ್ತಾರೆ. ಸಾಕಷ್ಟು ಸೌಲಭ್ಯ ಕೊಟ್ಟರೆ ಮಾತ್ರ ಎಲ್ಲಾ ಗ್ರಾಮಗಳಲ್ಲೂ ಮನೆ ಕಟ್ಟಿಕೊಂಡು ನಿಮ್ನ ವರ್ಗದವರೂ ಇತರರಂತೆ ಇರಲು ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ಈಗಿನ ಹುಕ್ಕುಂ ಮಾರ್ಪಾಡು ಮಾಡಿ ಒಂದು ಕುಟುಂಬಕ್ಕೆ ಮನೆ ಕಟ್ಟಿಕೊಳ್ಳಲು ಸರಾಸರಿ ಎಷ್ಟು ಬೇಕಾಗುತ್ತದೋ ಅಷ್ಟು ಕಾಡು ಸಾಮಾನುಗಳನ್ನು ತರಲು ಮಾಫೀ ಲೈಸೆನ್ಸ್‌ಗೂ ಅವಕಾಶ ಕಲ್ಪಿಸಿ, ಸಾಧ್ಯವಾದಷ್ಟು ಸಹಾಯವನ್ನೊದಗಿಸಬೇಕು. ಈ ಸಭೆಯ ಸರ್ವಾನುಮತವು ದೊರೆತು ಸರ್ಕಾರದವರು ಇದನ್ನು ಸಂತೋಷದಿಂದ ಹೆಚ್ಚಿಸಿಕೊಡುತ್ತಾರೆಂದು ನಂಬಿದ್ದೇನೆ.

Mr. SPEAKER—Cut motion moved:

"That the demand under the head 2 Forest —1. Conservancy and Works' for Rs. 19,64,900 be reduced by Re. 1."

Sri K. SAMPANGIRAMIAH.—There is no need for debate. Everybody is agreed about it.

ಶ್ರೀ ಗೋವಿಂದದಾಸ್‌ರವರು (ಹಾಸನ ಜಿಲ್ಲೆ—ನಿಮ್ನ ಪಂಗಡ).—ಶ್ರೀಮಾನ್ ಮಾದಯ್ಯನವರು ತಂದಿರತಕ್ಕ ಈ ಸೂಚನೆಯನ್ನು ನಾನು ಸಮರ್ಥಿಸುತ್ತೇನೆ. ಹಿ. ದೆ ಶ್ರೀಮಾನ್ ಗುಂಡಪ್ಪಗೌಡರು ಮಂತ್ರಿಗಳಾಗಿದ್ದಾಗ ಎಲ್ಲ ನೋಡಿದರೂ ಹರಿಜನ ಕೇರಿಗಳು ಬೆಂದು ಹೋದುವೆಂಬ ಸಮಾಚಾರ ಬರುತ್ತಿದೆ. ಅವರು ಹೆಂಚಿನ ಮನೆಗಳನ್ನು ಕಷ್ಟಪಟ್ಟು ಕಟ್ಟುವಂತೆ ಮಾಡಬೇಕೆಂದು ಅಪ್ಪಣೆ ಕೊಡಿಸಿದ್ದರು. ಶ್ರೀಮಾನ್ ಮಾದಯ್ಯನವರು ಹೇಳಿದ ಹಾಗೆ ಮೊದಲು ಹರಿಜನರು ಮನೆ ಕಟ್ಟಿಕೊಳ್ಳಲು 15 ರೂಪಾಯಿನಷ್ಟು ಸಾಮಾನು ಕೊಡಬೇಕೆಂದು ಮಾಡಿದ್ದರು. ಅದನ್ನು ಆಮೇಲೆ 30 ರೂಪಾಯಿಗೆ ಹೆಚ್ಚು ಮಾಡಿದರು. ಅನೇಕರಿಗೆ ಗಾಡಿ ಬಾಡಿಗೆ, ಆಳಿನ ಕೂಲಿಯೇ 30 ರೂಪಾಯಿಗಿಂತ ಹೆಚ್ಚಾಗುತ್ತದೆಯಾದುದರಿಂದ, ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದು ನಾನು ಕೇಳಿದ್ದೇನೆ.

Sri H. M. CHANNABASAPPA (Mysore District—General).- I rise to a point of order, Sir. In Rule 59, it is clear that:

"But where a motion is for a cut of a nominal amount to a head of a demand with a view to raise a discussion on the policy of a department or to draw the attention of the Government to mattter connected with the object of the grant................"

The object of the grant here is forest administration and not Depressed Class amelioration. It would have been proper if this had been brought under Depressed Class amelioration grant.

The cut motion does not arise under this grant. I feel therefore that the cut motion is not in order and does not fit in under this grant.

Sri M. MADIAH.—Sir, I rise to a point of order. Rule 59, sub-clause 3 clearly states :

"...But where a motion is for a cut of a nominal amount to a head of a demand with a view to raise a discussion on the policy of a department or to draw the attention of the Government to any matter connected with the object of the grant, it shall indicate the particular point on which the discussion is intended to be raised or to which the member desires to draw the attention of the Government."

The grant relates to forest administration and the cut motion urges about the building materials growing in the forests and which are to be removed from the forests. Therefore there is no point of order raised by my Hon'ble friend. It directly relates to the removal of forest materials and it does not say anything about the grants which are provided for the amelioration of the Depressed Classes, provided in the Budget under 28-B. Rural Development. Therefore there is no force in the point of order raised by my Hon'ble friend and I request the Chair to permit the Hon'ble Member Sri Govind Das to continue.

* ಶ್ರೀ ಎಂ. ಸಿ. ವೆಂಕಟೇಶ್ವರರವರು (ಮಂಡ್ಯ ಜಿಲ್ಲೆ-ನಿಮ್ನ ಪಂಗಡ .—ಸ್ವಾಮಿ, ಈ ಸೂಚನೆಯಲ್ಲಿ ಹೊಸದಾಗಿ ನಿಮ್ನ ತರಗತಿಯವರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅರಣ್ಯಗಳಿಂದ ಬೊಂಬು ಮತ್ತು ಸಾಮಾನುಗಳನು ಕೊಡಬೇಕೆಂದಿರುವುದರಿಂದ ಇದು ಅರಣ್ಯ ಇಲಾಖೆಗೆ ಸೇರಿದ್ದು ನಿಮ್ನ ತರಗತಿಗಳ ಬಾಬಿನಲ್ಲಿ ಬರುವುದಿಲ್ಲ. ಆದುದರಿಂದ ಅವರ ಕ್ರಿಯಾಲೋಪ ಸರಿಯಲ್ಲ.

Mr SPEAKER.—I feel there is no point of order. ಏಕೆಂದರೆ ಸದಸ್ಯರುಅರಣ್ಯದಲ್ಲಿರುವ ಬೊಂಬುಗಳು ಮತ್ತು ಇತರ ಸಲಕರಣೆಗಳನ್ನು ಸುಮ್ಮನೆ ಈ ರೀತಿ ಕೊಡಿ ಎಂದು ಹೇಳಬಹುದಾಗಿತ್ತು. ಹಾಗೆ ಹೇಳದೆ ನಿಮ್ನ ಪಂಗಡಗಳಿಗೆ ಕೊಡಿ ಎಂದು ಹೇಳುತ್ತಾರೆ, ಅಷ್ಟೆ. ಆದುದರಿಂದ ಇದರಲ್ಲಿ ಏನೂ ಕ್ರಿಯಾಲೋಪವಿಲ್ಲ.

ಶ್ರೀ ಗೋವಿಂದದಾಸ್‌ರವರು.—ಹಾಗೆ ಹಿಂದೆ 30 ರೂಪಾಯಿ ಬಾಳುವ ಸಾಮಾನುಗಳನ್ನು ಅರಣ್ಯಗಳಿಂದ ತೆಗೆದುಕೊಳ್ಳುತ್ತಿದ್ದರು. ಇದು ಸಾಕಾಗುತ್ತಿರಲಿಲ್ಲ. ಆದುದರಿಂದ ಅದನ್ನು ಹೆಚ್ಚು ಮಾಡಬೇಕೆಂದೂ ಕೇವಲ ಬಡವರಿಗೆ ಉಪಕಾರ ಮಾಡಬೇಕೆಂದೂ ಕೇಳುತ್ತಿದ್ದೇವೆ ಅವರು ಕೊಡತಕ್ಕ ಸಾಮಾನುಗಳು ಸಾಕಾಗುವುದಿಲ್ಲ, ಸರ್ಕಾರದವರು ಕೊಡತಕ್ಕ ಮರ ಸಾಕಾಗುವುದಿಲ್ಲ, ಗಾಡಿ ಬಾಡಿಗೆ, ಆಳು, ಕೂಲಿ ಎಲ್ಲವನ್ನೂ ಅವರು ಕೊಡಬೇಕಾಗುತ್ತದೆ. ಆದುದರಿಂದ ಇದನ್ನು ಹೆಚ್ಚಿಸಬೇಕೆಂದು ಕೇಳುತ್ತಿರುವುದು. ಇದನ್ನು 50 ರೂಪಾಯಿಗೆ ಹೆಚ್ಚಿಸಿದರೆ ಬಹಳ ಅನುಕೂಲವಾಗುತ್ತದೆ. ಮಾಫಿ ಲೈಸೆನ್ಸ್ ಕೊಡುವ ಹಾಗೆ ಮಾಡಿ ಬೊಂಬುಗಳು, ತೊಲೆಗಳು ಇವುಗಳನ್ನು ತೆಗೆದುಕೊಳ್ಳಲು 50 ರಿಂದ 60 ರೂಪಾಯಿಗಳವರೆಗೆ ಕೊಡಿಸಬೇಕೆಂದು ಸರ್ಕಾರದವರ ಗಮನಕ್ಕೆ ತರುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ಖೋತಾ ಸೂಚನೆಯನ್ನು ಇರುವ ರೀತಿಯಲ್ಲಿ ಒಪ್ಪಿಕೊಳ್ಳುವುದು ಸ್ವಲ್ಪ ಕಷ್ಟ. ಇದರಲ್ಲಿ ಏನು ಹೇಳಿದೆ ಎಂದರೆ "for free supply of bamboos and other building materi l necessary for construction of dwelling houses to the members of the Depressed Classes etc." ಎಂದಿದೆ. ಸರ್ಕಾರದವರ ತತ್ವ ಹರಿಜನರಲ್ಲಿ ಬಡವರಿಗೆ ಕೊಡಬೇಕೆಂಬುದೇ ಹೊರತು ಎಲ್ಲಾ ನಿಮ್ನ ಪಂಗಡದವರಿಗೆ ಕೊಡಬೇಕೆಂಬ ಉದ್ದೇಶವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

Sri L SIDDAPPA (Shimoga District-Genral).—On the other hand, there is a Government Order to say that even apart from Depressed Classes, if there are poor people, it may be given.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಎಲ್ಲ ನಿಮ್ನ ತರಗತಿಯವರಿಗೂ ಕೊಡಬೇಕೆಂದು ಹೇಳಿದರೆ, ಅನುಕೂಲವಾಗಿರುವವರಿಗೂ ಸಹ ಕೊಡಬೇಕೆಂಬ ಪ್ರಶ್ನೆ ಏಳುತ್ತದೆ. ಬಡಜನರಿಗೆ ಮಾತ್ರ ಎಂದು ಹೇಳಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು.

Sri M. MADIAH.—On a point of personal explanation. I have not said 'allo-the members of the Depressed Classes. The cut motion says 'members of the Depressed Classes.'

ಶ್ರೀ ಎಚ್. ಎಂ. ಚನ್ನಬಸಪ್ಪನವರು. Members ಎಂದರೆ ಎಲ್ಲರಿಗೂ ಎಂದು ಅರ್ಥವಾಗುತ್ತದೆ. ಆದುದರಿಂದ ಈಗಿರುವ ರೀತಿಯಲ್ಲಿ ಎಲ್ಲರಿಗೂ ಈ ರಿಯಾಯಿತಿಯನ್ನು ಕೊಡಬೇಕೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಅಧ್ಯಕ್ಷರೆ, ಶ್ರೀ ಮಾದಯ್ಯನವರು ತಂದಿರತಕ್ಕ ಕತ್ತರಿ ನಿರ್ಣಯದ ವಿಚಾರದಲ್ಲಿ ಹೇಳಿರತಕ್ಕದ್ದನ್ನು ಕೇಳಿದ್ದೇನೆ, ಇದರಲ್ಲಿ ಸರ್ಕಾರದವರು ಹೀಗೆ ಅವರಿಗೆ ಕೊಟ್ಟಿರತಕ್ಕ ಸೌಲಭ್ಯವನ್ನು, ಈ ಕಾಲದಲ್ಲಿ ಬೆಲೆಗಳು ಜಾಸ್ತಿಯಾಗಿರುವುದರಿಂದ ಈಗ ಕೊಟ್ಟಿರುವ 30 ರೂಪಾಯಿಗಳ ಮಿತಿಯನ್ನು ಜಾಸ್ತಿಮಾಡಿಕೊಡಬೇಕೆಂದೂ, ಸಾಕಷ್ಟು ಮನೆಗಳನ್ನು ಕಟ್ಟುವುದಕ್ಕೆ ಮರ ಸಿಕ್ಕುವುದಿಲ್ಲವೆಂದೂ ಇದೆ. ಶ್ರೀ ಚೆನ್ನಬಸಪ್ಪನವರೂ ಒಂದು ಅನುಮಾನ ಪಡುತ್ತಾರೆ. ಶ್ರೀ ಮಾದಯ್ಯನವರು ಈ ಸಭೆಗೆ ಬಂದಿರುವುದು ನಿಮ್ನ ಪಂಗಡದವರ ಪ್ರತಿನಿಧಿಯಾಗಿ. ಆದುದರಿಂದ ಆ ಪಂಗಡಗಳ ಪರವಾಗಿ ಕೇಳುವುದು ನ್ಯಾಯವಾಗಿದೆ. ಅವರು ಇತರ ಪಂಗಡದ ಬಡವರಿಗೆ ಕೊಡಕೂಡದೆಂದೇನೂ ಹೇಳಲಿಲ್ಲ. ಇದು ಅವರ ಅಭಿಪ್ರಾಯವೂ ಅಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಶ್ರೀ ಸಿದ್ದಪ್ಪನವರು ಹೇಳಿದ ಹಾಗೆ ಸರ್ಕಾರಿ ಆಜ್ಞೆಯಲ್ಲಿ ಬರಿಯ ನಿಮ್ನ ಪಂಗಡದವರಿಗೆ ಎಂದಿಲ್ಲ. ಮೊದಲು 1939 ರಲ್ಲಿ ಒಂದು ಆಜ್ಞೆ ಮಾಡಿದರು. ಅದರಲ್ಲಿ 15 ರೂಪಾಯಿ ಬೆಲೆ ಬಾಳುವ ಮರಗಳನ್ನು ಬಡ ಜನರಿಗೆ ಮುಫತ್ತಾಗಿ

ಕೊಡಬಹುದೆಂದಿದೆ. ಅದರಲ್ಲಿ ಎಲ್ಲ ಪಂಗಡಗಳೂ ಇವೆ. ಬರೀ ನಿಮ್ಮ ಪಂಗಡವಿಲ್ಲ. 1943ರಲ್ಲಿ ಈ ರಿಯಾಯಿತಿಯನ್ನು 1944 ರವರೆಗೆ ಕೊಡಬಹುದೆಂದು ಒಂದು ಆಜ್ಞೆ ಮಾಡಿದರು. ಸರ್ಕಾರದವರು, ಪುನಃ 1947ರಲ್ಲಿ ಇದನ್ನು ಖಾಯಂ ಆಗಿ ಕೊಡಬೇಕೆಂದು ಮಾಡಿದರು. 15 ರೂಪಾಯಿಂದ 30 ರೂಪಾಯಿವರೆಗೆ ಕೊಡಬಹುದೆಂದು ಈಗ ಮಾಡಿದ್ದಾರೆ. ಇದನ್ನು ಚಿತ್ರದುರ್ಗ, ದಾವಣಗೆರೆ, ಕೋಲಾರ ಮುಂತಾದ ನಿಮ್ಮ ಪಂಗಡದವರು ಕೇಳಿದ ಮೇಲೆ ಹೆಚ್ಚಿಸಿದರು. ಅಂದರೆ ನಿಮ್ಮ ಪಂಗಡದವರಿಗೆ ಮಾತ್ರ ಎಂದು ಹಾಕಿಲ್ಲ, ಇತರರಿಗೂ ಕೊಡಬಹುದು. ನಿಮ್ಮ ಪಂಗಡದ ಪ್ರತಿನಿಧಿಗಳಾಗಿ ಅವರಿಗೆ ರಿಯಾಯಿತಿ ಹೆಚ್ಚು ಮಾಡಬೇಕೆಂದು ಕೇಳುವುದರಲ್ಲಿ ತಪ್ಪಿಲ್ಲ.

1947ನೇ ಇಸವಿಯಿಂದ ಈಚೆಗೆ ಮಾಡಿರತಕ್ಕ ಧಾರಣೆ ಸ್ವಲ್ಪಮಟ್ಟಿಗೆ ಜಾಸ್ತಿಯಾಗಿರುವುದು ವಾಸ್ತವಾಂಶ. ಆದ್ದರಿಂದ ಜಾಸ್ತಿ ಮಾಡಬೇಕೆಂದು ಕೇಳಿದ್ದಾರೆ. ಇದು ಒಂದು ನೀತಿಯ ವಿಚಾರ. ಎಷ್ಟರಮಟ್ಟಿಗೆ ಜಾಸ್ತಿ ಮಾಡಬಹುದು ಎಂಬ ಅಂಶವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕಾಗಿದೆ. ಅದನ್ನು ಪರಿಶೀಲಿಸಿ ಎಷ್ಟರ ಮಟ್ಟಿಗೆ ಜಾಸ್ತಿಮಾಡಬೇಕಾಗುತ್ತದೆ. ಹಿಂದೆ ಇದ್ದ ಧಾರಣೆ ಏನು, ಈಗ ಇರುವ ಧಾರಣೆ ಏನು ಎಂಬುದನ್ನೆಲ್ಲಾ ನೋಡಿಕೊಂಡು, ಎಲ್ಲರಿಗೂ ಅನ್ವಯವಾಗುವಂತೆ ನೋಡುವುದು ನ್ಯಾಯವಾಗಿದೆ. ನಿಮ್ಮ ತರಗತಿಯವರು ಮಾತ್ರ ಬಡವರು, ಬಾಕಿಯವರು ಬಡವರಲ್ಲಾ ಎಂದು ಸರ್ಕಾರದವರು ತಿಳಿದುಕೊಂಡಿಲ್ಲ. ಆದ್ದರಿಂದ ಯಾರ್ಯಾರು ಕೊಡುವುದಕ್ಕೆ ಅರ್ಹರಾಗಿದ್ದಾರೆ, ಎಷ್ಟರ ಮಟ್ಟಿಗೆ ಜಾಸ್ತಿ ಮಾಡಬಹುದು ಎಂಬುದನ್ನು ಸರ್ಕಾರದವರು ತೀರ್ಮಾನ ಮಾಡುತ್ತಾರೆ. ಈ ಭರವಸೆಯ ಮೇಲೆ ಶ್ರೀ ಮಾದಯ್ಯನವರು ಈ ಕತ್ತರಿ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಎಂ. ಮಾದಯ್ಯನವರು.—ಮಾನ್ಯ ಸಚಿವರು ಕೊಟ್ಟ ಭರವಸೆಯ ಮೇಲೆ ಇದನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತಾರೆಂದು ತಿಳಿದುಕೊಂಡಿದ್ದೇನೆ. I beg permision of the House to withdraw the cut motion.

The cut motion was, by leave of the Assembly, withdrawn.

Discontinuing disposal of Forest coupes for charcoal burning.

SRI S. KARIAPPA (Bangalore District–General).—Sir, I beg to move :

'That the demand under the head '2. Forest' for Rs. 32,64,000 be reduced by Rs. 100 to impress upon the Government the supreme neceissity for discontinuing the disposal of coupes for charcoal burning."

ಸ್ವಾಮಿ, ವೃಕ್ಷ ಸಂಪತ್ತು ಹೆಚ್ಚಬೇಕು, ವೃಕ್ಷ ಸಂಪತ್ತು ಹೆಚ್ಚಿದ ಹೊರತು ದೇಶದಲ್ಲಿ ಮಳೆ ಬೆಳೆ ಸರಿಯಾಗಿ ಆಗುವುದಿಲ್ಲ ಎಂಬ ಅಂಶವನ್ನು ನಾನು ಇಲ್ಲಿ ಹೆಚ್ಚಾಗಿ ಹೇಳಬೇಕಾಗಿಲ್ಲ. ವೃಕ್ಷ ಸಂಪತ್ತು ಹೆಚ್ಚಬೇಕಾದ್ದು ತುಂಬಾ ಅವಶ್ಯಕವಾಗಿದೆ. ಹೀಗಿರುವಾಗ ಒಂದು ಕಡೆ ನೀವು ವೃಕ್ಷ ಸಂಪತ್ತನ್ನು ಹೆಚ್ಚು ಮಾಡಬೇಕೆಂಬ ನೀತಿಯನ್ನು ಪ್ರತಿಪಾದಿಸುತ್ತಾ, ಮತ್ತೊಂದು ಕಡೆ ವೃಕ್ಷ ಸಂಪತ್ತು ಕಡಿಮೆಯಾಗುವ ಕಾರ್ಯಕ್ರಮಗಳಿಗೆ ಕೈ ಹಾಕುತ್ತಾ ಬಂದರೆ, ವೃಕ್ಷ ಸಂಪತ್ತನ್ನು ಹೆಚ್ಚಿಸಬೇಕೆಂಬ ನೀತಿಗೆ ಕೊಡಲಿ ಪೆಟ್ಟು ಹಾಕಿದಂತಾಗಲಿಲ್ಲವೇ ಎಂಬ ಸಂಶಯದಿಂದ ನಾನು ಕೂಡಿದವನಾಗಿದ್ದೇನೆ. ಕಾಡಿನಲ್ಲಿರತಕ್ಕ ಮರಗಳನ್ನು ಇದ್ದಲು ಮಾಡುವುದಕ್ಕೆ ಕೊಡುವುದರಿಂದ ಅಷ್ಟು ಮಾತ್ರ ಹೋಗುತ್ತದೆಯೋ ಅಥವಾ ಬೇರೆ ಮರಗಳೂ ಹೋಗುತ್ತವೆಯೋ ಎಂಬುದನ್ನು ಸ್ವಲ್ಪ ಪರ್ಯಾಲೋಚಿಸಬೇಕು. ಕಾಡು ಎಂದರೆ ಅಲ್ಲಿ ನಮಗೆ ಅನೇಕ ಮೈನರ್ ಫಾರೆಸ್ಟ್ ಪ್ರಾಡ್ಯೂಸೂ ಸಿಕ್ಕುತ್ತದೆ. ಗಿಡಗಳಲ್ಲಿ ಅರಗು ಆಗುತ್ತದೆ. ಅರಗು ಆಗಬೇಕಾದರೆ ಅದಕ್ಕೆ ವಾತಾವರಣ ಬಹಳ ತಂಪಾಗಿರಬೇಕು. ಹೀಗೆ ಕಾಡುಗಳಲ್ಲಿ ಹಗಲು, ರಾತ್ರಿ ಬೆಂಕಿ ಉರಿಯುತ್ತಾ ಇದ್ದರೆ ಅರಗಿನ ಗಿಡಗಳು ಎಲ್ಲಿ ಉಳಿಯುತ್ತವೆ ? ಅಷ್ಟೇ ಅಲ್ಲದೆ ನಮ್ಮ ದೇಶ ಹಾಲು ಮತ್ತು ಜೇನು ಯಥೇಚ್ಛವಾಗಿ ಹರಿಯುತಕ್ಕ ಪ್ರದೇಶ ಎಂದು ಹೆಸರುವಾಸಿಯಾಗಿತ್ತು. ಈಗ ಹಾಲು ಸ್ವಲ್ಪವಾಗಿದೆ. ಅದೇ ರೀತಿ ಜೇನುತುಪ್ಪವೂ ಆಗುತ್ತದೆಯೋ ಏನೋ ಎಂಬ ಶಂಕೆ ಇದೆ. ಜೇನುತುಪ್ಪ ಕಾಡಿನಿಂದ ಬರಬೇಕಾಗಿದೆ ನಮ್ಮ ದೇಶಕ್ಕೆ ಅದು ಇನ್ನು ಮುಂದೆ ಐರ್ಲೆಂಡಿನಿಂದ ಬರಬೇಕಾದರೆ ಸಂಭವ ಬರುತ್ತದೆಯೋ ಏನೋ ಎಂಬ ಸಂದೇಹ ಇದೆ.

ಹೀಗೆ ಇದ್ದಲು ಸುಡಲು ಕಾಡನ್ನು ಕೊಡತಕ್ಕ ನೀತಿಯಿಂದ ಆಗತಕ್ಕ ಪರಿಣಾಮ ವಿಪರೀತವಾಗಿದೆ. ಇದ್ದಲು ಸುಡುವುದಕ್ಕೆ ಹೋಗಿರತಕ್ಕವರು ಬರೀ ಇದ್ದಲಿಗೆ ಲಾಯಕ್ಕಾದ ಮರಗಳನ್ನೇ ಸುಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಮನೆ ಕಟ್ಟಡಗಳಿಗೆ ಆಗತಕ್ಕ ಮರಗಳೂ ಸಹ ನಷ್ಟವಾಗುತ್ತಾ ಇವೆ. ಮನೆಗಳನ್ನು ಕಟ್ಟುವುದಕ್ಕೇ ಮರಗಳು ಸಾಲದಿರುವಾಗ ಕಾಡಿನಲ್ಲಿರುವ ಮರಗಳನ್ನು ಇದ್ದಲು ಸುಡುವುದಕ್ಕೆ ಕೊಡುವುದರ ಅಥವಾ ನನಗೆ ತಿಳಿಯುವುದಿಲ್ಲ. ಈಗ ಒಂದು ಪ್ರಶ್ನೆ ಅದರಿಂದ ಉದ್ಭವಿಸಬಹುದು. ಕಾಡಿನಲ್ಲಿರತಕ್ಕ ಮರಗಳನ್ನು ಇದ್ದಲು ಸುಡುವುದಕ್ಕೆ ಕೊಡುವುದಿಲ್ಲವೆಂದರೆ ಬೆಂಗಳೂರು, ಮೈಸೂರು ಪಟ್ಟಣಗಳ ಗತಿ ಏನು ಎಂಬ ಪ್ರಶ್ನೆ ಏಳುತ್ತದೆ. ಬೆಂಗಳೂರು ಒಂದಕ್ಕೇ ಒಂದು ದಿನಕ್ಕೆ 50 ಟನ್ ಸೌದೆಬೇಕು. ಆಗ ಇತರ ಪಟ್ಟಣಗಳ ಗತಿ ಏನಾಗಬೇಕು ಎಂಬ ಪ್ರಶ್ನೆ ಬರುತ್ತದೆ. ಅಂಥ ಸಮಸ್ಯೆ ಉದ್ಭವಿಸಿದಾಗ ಅದನ್ನು ಪರಿಹರಿಸಲು ಹೊಸ ಮಾರ್ಗ ಕಂಡು ಹಿಡಿಯಬೇಕಾದ್ದು ನಮ್ಮ ಕರ್ತವ್ಯವಾಗಿದೆ. ಹೊಸ ಮಾರ್ಗಗಳು ಯಾವುವು ಇವೆ ಎಂಬುದನ್ನು ತಿಳಿದೂ, ತಿಳಿದೂ ಅದನ್ನು ಮಾಡದೇ ಕುಳಿತಿದ್ದೇವೆ. ಆ ಕಡೆಗೆ ಹೆಚ್ಚು ಗಮನ ಕೊಡಬೇಕು. ವೃಕ್ಷ ಸಂಪತ್ತು ಕ್ಷೀಣಿಸುವಂಥ ನೀತಿಯನ್ನನುಸರಿಸುವುದು ಒಳ್ಳೆಯದಲ್ಲ ಎಂಬ ಕಾರಣದಿಂದ ಈ ನಿರ್ಣಯವನ್ನು ಸಭೆಯ ಅನುಮೋದನೆಗೆ ಇಟ್ಟಿದ್ದೇನೆ.

MR. SPEAKER.—Cut motion moved :

"That the demand under the head 'Forest' for Rs. 32,64,000 be reduced by Rs. 100."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಖೋತಾ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ಏಕೆಂದರೆ, ಈಗ ಕೂಪುಗಳನ್ನು ಮಾಡಿ ಅಲ್ಲಿ ಯಾವ ಜಾತಿಯ ಮರ ತೆಗೆದುಕೊಂಡು ಬಂದು ಇದ್ದಲಿಗೆ ಉಪಯೋಗಿಸಬೇಕು

ಮತ್ತು ಸೌದೆಗೆ ಉಪಯೋಗಿಸಬೇಕು ಎಂಬುದನ್ನು ನಿಗದಿ ಮಾಡಿಲ್ಲ. ಯಾವಾಗ ಜಾತಿ ನಿಗದಿ ಮಾಡಿಲ್ಲವೋ ಆಗ ಶ್ರೀಮಾನ್ ಕರಿಯಪ್ಪನವರು ಹೇಳಿದ ಹಾಗೆ ಅನೇಕ ಕಾಡುಗಳಲ್ಲಿ ಜಾತಿ ಮರಗಳನ್ನು ಎಂದರೆ ಮರಮುಟ್ಟುಗಳಿಗೆ ಲಾಯಕ್ಕಾದ ಮರಗಳನ್ನು ಕಡಿದು ತೆಗೆದುಕೊಂಡು ಬಂದು ಇದ್ದಲು ಮಾಡಿಕೊಳ್ಳುತ್ತಾರೆ. ಮತ್ತು ಬೇರೆ ವಿಧದಲ್ಲಿ ಸಾಗಿಸುವುದಕ್ಕೂ ಅವಕಾಶ ಇದೆ.

ಎರಡನೆಯದಾಗಿ, ಅದನ್ನು ಇಷ್ಟೇ ಪ್ರದೇಶದಲ್ಲಿ ಸುಡಬೇಕೆಂದು ನಿಗದಿ ಮಾಡಿಲ್ಲ.

ಮೂರನೆಯದಾಗಿ, ಒಣಗಿರತಕ್ಕ ಮರಗಳನ್ನು ತೆಗೆದುಕೊಂಡು ಹೋಗಿ ಇದ್ದಲಿಗಾಗಲೀ ಸೌದೆಗಾಗಲೀ ಉಪಯೋಗಿಸಬೇಕೆಂಬ ಕಡ್ಡಾಯವೂ ಇಲ್ಲ. ಅವರು ಸರ್ವೇ ಸಾಧಾರಣವಾಗಿ ಹಸೀಮರಗಳನ್ನೇ ಕಡಿಯುವುದು ಜಾಸ್ತಿಯಾಗಿದೆ. ಏಕೆಂದರೆ ಒಣಗಿದ ಮರಗಳು ಸಿಕ್ಕುವುದಿಲ್ಲ. ಇದರಿಂದ ವನಸಂಪತ್ತು ಹಾಳಾಗಿ ಹೋಗಿ ಸರ್ಕಾರಕ್ಕೂ ನಷ್ಟ* ಮತ್ತು ದೇಶಕ್ಕೂ ಕೂಡ ಬಹಳ ಅಪಾಯಕರ. ಆದ್ದರಿಂದ ಮೊದಲು ನಿರ್ದಿಷ್ಟವಾದ ಜಾತಿ ಯಾವುದು ಎಂಬುದನ್ನೂ ನಿಷ್ಕರ್ಷೆ ಮಾಡಿ, ಇದ್ದಲು ಸುಡುವುದಕ್ಕೂ ಮತ್ತು ಸೌದೆಗೂ ಉಪಯೋಗಿಸಿಕೊಳ್ಳುವಂತೆ ಮಾಡಬೇಕು. ಅದನ್ನು ಇದುವರೆಗೂ ಅರಣ್ಯ ಇಲಾಖೆಯವರು ಮಾಡದೇ ಇರತಕ್ಕುದು ಬಹಳ ಅಚಾತುರ್ಯವಾಗಿದೆ ಮತ್ತು ತೊಂದರೆಯಾಗಿದೆ. ಬೇಕಾದಷ್ಟು ಜಾತಿ ಮರಗಳು ಇವೆ. ಅವನ್ನು ಈ ಕೂಪುಗಳಲ್ಲಿ ತೆಗೆದುಕೊಂಡು ಮರಮುಟ್ಟುಗಳನ್ನು ಮಾಡಿಕೊಳ್ಳುತ್ತಾ ಇದ್ದಾರೆ ಎಂಬ ವರ್ತಮಾನ ನನಗೆ ಬಂದಿದೆ. ಇದು ಬಹಳ ಮುಖ್ಯವಾದದ್ದು. ವನಸಂಪತ್ತನ್ನು ಕಾಪಾಡಬೇಕಾದರೆ ಕಡ್ಡಾಯವಾದ ಮತ್ತು ಕಠಿಣವಾದ ರೂಲ್ಸ್ ಮಾಡಬೇಕೆಂದು ಹೇಳಿ ನಾನು ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಸರ್ಕಾರದವರು ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬರುವುದು ಅತ್ಯಗತ್ಯ. ಈಗ ಈ ಕತ್ತರೀ ನಿರ್ಣಯ ಬಂದಿರುವುದೂ ಸಕಾಲವಾಗಿದೆ. ಈಗ ಅರಣ್ಯಗಳನ್ನು ಅನೇಕ ಸಂದರ್ಭಗಳಲ್ಲಿ ಹರಾಜು ಹಾಕಿಸುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಇದನ್ನು ಕಂಟ್ರಾಕ್ಟ್ ಮೂಲಕವೂ, ಮತ್ತು ಕೆಲವು ಸಂದರ್ಭಗಳಲ್ಲಿ ದರಖಾಸ್ತು ಮೂಲಕವೂ ಕೊಡುತ್ತಿದ್ದಾರೆ.

ಆದರೆ ಶ್ರೀ ಎಸ್. ರಂಗರಾಮಯ್ಯನವರು ತಿಳಿಸಿದ ಹಾಗೆ ಒಣಗಿದ ಮರಗಳಿಗೆಂದು ಲೈಸೆನ್ಸು ಪಡೆದುಕೊಂಡು ಅನೇಕ ಹಸೀ ಮರಗಳನ್ನೂ ಕತ್ತರಿಸಿ ಹಾಕುತ್ತಿದ್ದಾರೆ. ಹಾಗೆ ಲೈಸೆನ್ಸು ಪಡೆದಿದ್ದವರೇನು ಬರಿ ಒಣಮರವನ್ನು ಕತ್ತರಿಸಿದ್ದಾರೆಯೇ ಅಥವಾ ಹಸೀ ಮರಗಳನ್ನೇನಾದರೂ ಕತ್ತರಿಸಿದ್ದಾರೆಯೇ ಎಂಬುದನ್ನು ನಿರ್ದಿಷ್ಟವಾಗಿ ಇಲ್ಲಿಯವರೆಗೆ ಯಾರೂ ಅದನ್ನು ನಿರ್ಣಯ ಮಾಡಿರುವುದಿಲ್ಲ. ಯಾರಾದರೂ ಒಬ್ಬ ಮೊಳಕಾಲ್ಮುರುವಿನಲ್ಲಿ ನಾನು ಬೆಂಗಳೂರಿಗೆ ಇದ್ದಿಲನ್ನು ಸಾಗಿಸುತ್ತೇನೆ, ನನಗೆ ಲೈಸೆನ್ಸು ಕೊಡಿ ಎಂದು ಕೇಳಿಬಿಟ್ಟರೆ, ಲೈಸೆನ್ಸನ್ನು ಕೊಟ್ಟುಬಿಡುತ್ತಾರೆ. ಆದರೆ ಆ ಮೊಳಕಾಲ್ಮುರು ಎಲ್ಲಿದೆ, ಬೆಂಗಳೂರೆಲ್ಲಿದೆ, ಆ ಮನುಷ್ಯ ಯಾವ ಉದ್ದೇಶಕ್ಕೆ ಕೇಳುತ್ತಾನೆ, ಎಂಬ ಈ ಒಂದನ್ನೂ ಆಲೋಚನೆ ಮಾಡದೆ ಕೇವಲ ಆದಾಯ ಬರುತ್ತಿಲ್ಲ ಎಂಬ ಒಂದೇ ಒಂದು ದೃಷ್ಟಿಯಿಂದಲೂ, ಮತ್ತು ಒಂದು ನಿರ್ದಿಷ್ಟವಾದ ಕ್ಲುಪ್ತವಾದ ರೀತಿ ನೀತಿ ಇಟ್ಟುಕೊಳ್ಳದೆ ಇರುವುದರಿಂದಲೂ, ಈ ಅವ್ಯವಸ್ಥೆಗೆ ಕಾರಣವಾಗಿರುತ್ತೆ. ಇದರ ಬಗ್ಗೆ ನಾನು ಕೆಲವು ಸಲಹೆಗಳನ್ನು ಸೂಚಿಸಬಯಸುತ್ತೇನೆ. ಅದೇನೆಂದರೆ ತಾವು ಮುಂದಕ್ಕೆ ಸಿಕ್ಕಿದ ಕಡೆಗಳಲ್ಲೆಲ್ಲಾ ಇದ್ದಿಲನ್ನು ಸುಡಲು ಅವಕಾಶ ಕೊಡದೆ, ಅಲ್ಲಲ್ಲೆ ಕೆಲವು ನಿರ್ದಿಷ್ಟವಾದ ಜಾಗಗಳನ್ನು ಗೊತ್ತುಮಾಡಿ, ಅಲ್ಲಿ ಸರಿಯಾದ ಕಾವಲನ್ನು ಏರ್ಪಾಡು ಮಾಡಿ, ಅಲ್ಲೇ ಅದನ್ನು ಸುಡುವಂತೆ ಏರ್ಪಾಡು ಮಾಡಬೇಕು. ಹಾಗೆ ಸುಡತಕ್ಕ ಪ್ರದೇಶದಲ್ಲಿ ನೀರಿನ ಸೌಕರ್ಯವಿರುವಂತೆ ನೋಡಿಕೊಳ್ಳಬೇಕು. ಏತಕ್ಕೆಂದರೆ ಅನೇಕ ಸ್ಥಳಗಳಲ್ಲಿ, ಬೆಂಗಳೂರಿಗೆ ಇದ್ದಿಲನ್ನು ಸರಬರಾಯಿ ಮಾಡುತ್ತೇವೆಂದು, ಇದ್ದಿಲನ್ನು ಸುಡುತ್ತಿದ್ದ ಜಾಗದಲ್ಲಿ ಬೆಂಕಿಯನ್ನು ಆರಿಸಲು ನೀರಿನ ಸೌಕರ್ಯಗಳಿಲ್ಲದೆ, ಹಾಗೆ ಸುಡುವಾಗ ಹಾರಿ ಬರುವಂಥ ಕಿಡಿಗಳು, ಪಕ್ಕದಲ್ಲಿದ್ದ ಹುಲ್ಲು ಮನೆಗಳಿಗೆ ಬಿದ್ದು ಅನೇಕ ಹುಲ್ಲುಮನೆಗಳು ಸುಟ್ಟುಹೋಗಿರತಕ್ಕಂಥ ನಿದರ್ಶನಗಳು ಅನೇಕವಾಗಿವೆ. ಕಾಡಿನಲ್ಲಿ, ಛಟ, ಛಟ ಎಂದು ಸುಡುವಾಗ, ಶಬ್ದವಾಗುವಂಥ, ಒಂದು ಜಾತಿಯ ಮರವಿರುತ್ತೆ. ಆ ಮರದಿಂದಲೂ ಇದ್ದಿಲನ್ನು ತಯಾರು ಮಾಡುತ್ತಾರೆ. ಇದರಿಂದ ಅನೇಕ ಅನರ್ಥಗಳಾಗಿವೆ. ಆದರೆ ಇತ್ತೀಚೆಗೆ ವಿದ್ಯುಚ್ಛಕ್ತಿಯ ತಯಾರಿಕೆಯು ಜಾಸ್ತಿಯಾಗಿರುವುದರಿಂದ, ಇದರ ಉಪಯೋಗವನ್ನು ಸರ್ಕಾರದವರು ಸಾಧ್ಯವಾದ ಮಟ್ಟಿಗೂ ಕಡಿಮೆ ಮಾಡಬಹುದು. ಕೆಲವು ಸ್ಥಳಗಳಲ್ಲಾದರೂ ಆ ರೀತಿ ಮಾಡಲು ಸಾಧ್ಯವಿದೆ. ಅಂಥಾ ಸಾಧ್ಯವಿಲ್ಲದ ಕೆಲವು ಕಡೆಗಳಲ್ಲಿ, ಇದನ್ನು ತಯಾರಿಸಲೇಬೇಕೆಂದು ಅಗತ್ಯ ಕಂಡುಬಂದರೆ ಕೆಲವು ಪ್ರದೇಶಗಳಲ್ಲಿ ಮಾತ್ರ ಇದನ್ನು ತಯಾರು ಮಾಡಲು ಅವಕಾಶ ಕೊಡಬಹುದು. ಒಂದು ನಿರ್ದಿಷ್ಟವಾದ ನೀತಿಯನ್ನು ಹಾಕಿಕೊಂಡು ನಮ್ಮ ವನ ಸಂಪತ್ತಿಗೆ ಯಾವ ರೀತಿಯಲ್ಲೂ ಧಕ್ಕೆ ಬಾರದಂತೆ ತಾವು ಮಾಡಬೇಕಾಗಿದೆ. ಈ ಅರಣ್ಯ ಸಂಪತ್ತು ಹೆಚ್ಚಿದರೆ ದೇಶದ ಸಂಪತ್ತೂ ಹೆಚ್ಚುತ್ತದೆ. ಈ ರೀತಿ ಅನ್ಯಾಯವಾಗುತ್ತಿರುವುದನ್ನು ತಾವು ಕೂಡಲೇ ತಡೆಗಟ್ಟಬೇಕೆಂದು ತಿಳಿಸುತ್ತೇನೆ.

ಇನ್ನು ನಾವು ಹೆಚ್ಚು ಹೆಚ್ಚು ನಿಗಾವಣೆಯನ್ನು ಹೆಚ್ಚು ಆಹಾರ ಬೆಳೆಯುವ ಯೋಜನೆಗೆ ಕೊಡಬೇಕಾಗಿರುವುದರಿಂದ, ನಾವು ಹೆಚ್ಚು ಹೆಚ್ಚಾಗಿ ಕಾಂಪೋಸ್ಟ್ ಗೊಬ್ಬರವನ್ನು ತಯಾರು ಮಾಡಬೇಕಾಗಿರುತ್ತೆ. ಅದಕ್ಕೆ ಈ ಅರಣ್ಯದ ಆವಶ್ಯಕತೆ ಹೆಚ್ಚಾಗಿದೆ. ಹಾಗಿರುವ ಸಂದರ್ಭದಲ್ಲಿ ಅದನ್ನೆಲ್ಲಾ ಸುಟ್ಟುಹಾಕಲು ಅವಕಾಶ ಕೊಡುತ್ತಿರುವುದು ತೀರಾ ಅನ್ಯಾಯವಾಗಿದೆ. ಆದಕಾರಣ ಈ ಅವ್ಯವಸ್ಥೆಗಳನ್ನೆಲ್ಲ ನಿಲ್ಲಿಸುವುದಕ್ಕಾಗಿ ಸಾಧ್ಯವಾದಷ್ಟು ವಿದ್ಯುಚ್ಛಕ್ತಿಯ ಉಪಯೋಗದಿಂದಲೇ ನಡೆಸುವಂತೆ ಏರ್ಪಾಡು ಮಾಡುವುದು ಒಂದು ಸೂಕ್ತವಾದ ಮಾರ್ಗ. ತಾವು ಸೌದೆಗೆ ಮರಗಳನ್ನು ಕಡಿಯಲು ಲೈಸೆನ್ಸು ಕೊಡುತ್ತಿದ್ದೀರಿ. ಹಾಗೆ ಕೊಡುವಾಗ ಬರಿ ಒಣಗಿದ ಮರಗಳನ್ನು ಮಾತ್ರವೇ ಕಡಿಯುವಂತೆ ನಿರ್ಧರಮಾಡಿ ಲೈಸೆನ್ಸು ಕೊಡಬೇಕು; ಮತ್ತು ಹಾಗೆ ಲೈಸೆನ್ಸು ಕೊಟ್ಟ ನಂತರ ಫಾರೆಸ್ಟ್ ಇಲಾಖಾ ಅಧಿಕಾರಿಗಳು ಆತನ ಮೇಲೆ ತಕ್ಕ ನಿಗಾ ಇಡುವಂತೆ ಇಲಾಖೆಯ ನೌಕರರಿಗೆ ತಾಕೀತ್ ಮಾಡಬೇಕು. ಹಾಗೆ ಮಾಡದೆ ಇರುವುದರಿಂದ ನಮ್ಮ ವನಸಂಪತ್ತೆಲ್ಲ ಹಾಳಾಗಿ ಹೋಗಿದೆ. ಹೀಗೆ ನಮಗೆ ಲೈಸೆನ್ಸ್ ಕೊಡುವುದರಿಂದ ಬರುವ ಹಣವಾದರೂ ಎಷ್ಟು? ಅದನ್ನು ಲೆಕ್ಕಹಾಕಿ ನೋಡಿದರೆ ಕೇವಲ ಮರಕ್ಕೆ 4 ಆಣೆ, 8 ಆಣೆ ಕೂಡ ಬೀಳುವುದಿಲ್ಲ. ಇದೂ ಅಲ್ಲದೆ ಆತನು ಎಷ್ಟು ಮರಗಳನ್ನು ಕಡಿದಿದ್ದಾನೆ, ಆ ಪೈಕಿ ಒಣ ಮರಗಳೆಷ್ಟು, ಹಸೀ

ಮರಗಳೆಷ್ಟು, ಎಲ್ಲೆಲ್ಲಿ ಕಡಿದಿದ್ದಾನೆ, ಹಾಗೆ ಕಡಿದ ಮರಗಳೇನಾದವು, ಎಲ್ಲಿ ಇದ್ದಿಲನ್ನು ಸುಟ್ಟಿದ್ದಾನೆ, ಎಂಬ ಲೆಕ್ಕವನ್ನು ಇಲ್ಲಿಯವರೆಗೆ ಮಾಡಿಲ್ಲ. ಕಾಡಿನಲ್ಲಿ "ತರೇ" ಎಂಬ ಒಂದು ಜಾತಿಯ ಮರವಿರುತ್ತೆ, ಅದು ಬಹಳ ಗಟ್ಟಿಯಾದ ಮರ, ಅದನ್ನು ಸಹ ಇದ್ದಿಲಿಗೆ ಕೊಡುತ್ತಿದ್ದಾರೆ. ಆದರೆ ಅದರಿಂದ ಇದ್ದಿಲಾಗುವುದಿಲ್ಲ. ಹೇಳುತ್ತ ಹೋದರೆ ಎಷ್ಟೋ ವಿಚಾರಗಳಿವೆ. ಆದುದರಿಂದ ತಾವು ಈ ಇದ್ದಿಲಿಗಾಗಿಯೇ ಒಂದು ಪ್ರತ್ಯೇಕ ಯೋಜನೆ ಮಾಡಿಕೊಂಡು, ಅದಕ್ಕೆ ಅನುಕೂಲವಾದ ಮರಗಳನ್ನು ಮಾತ್ರ ಅಲ್ಲಿ ಬೆಳಸಿ, ಅವುಗಳನ್ನು ಮಾತ್ರ ಕಡಿಯುವಂತೆ ತಾವು ಏರ್ಪಾಡು ಮಾಡಿದರೂ ಮಾಡಬಹುದು. ಅಂತು ಎಲ್ಲಿ ಮರಗಳನ್ನು ಹಾಗೆ ಕತ್ತರಿಸುತ್ತಾರೋ ಅಲ್ಲಿ ಪುನಃ ಕಡ್ಡಾಯವಾಗಿ ಹೊಸ ಮರಗಳನ್ನು ಬೆಳೆಸುವಂತೆ ಮಾಡಬೇಕು. ಅರಣ್ಯ ಸಂಪತ್ತಿಗೆ ಯಾವ ಧಕ್ಕೆಯೂ ಬಾರದಂತೆ ನೋಡಿಕೊಳ್ಳಬೇಕು. ಅರಣ್ಯ ಸಂಪತ್ತು ಹೆಚ್ಚಾಗಿದ್ದರೆ, ಅಲ್ಲಿ ದೇಶ ಸಮೃದ್ಧಿಯಾಗಿರುತ್ತೆಂದು ವಿಜ್ಞಾನ ಶಾಸ್ತ್ರಜ್ಞರೂ ಹೇಳಿರುತ್ತಾರೆ. ಆದಕಾರಣ ನಾನು ಇದನ್ನು ಸಮರ್ಥಿಸುತ್ತೇನೆ.

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ಸ್ವಾಮಿ. ಈ ವಿಷಯದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿರುತ್ತಾರಾದ್ದರಿಂದ ನಾನು ಅಷ್ಟು ಹೆಚ್ಚು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಇದರಲ್ಲಿರತಕ್ಕ ಒಂದೆರಡು ಲೋಪದೋಷಗಳನ್ನು ತೋರಿಸಲು ಒಂದೆರಡು ಮಾತುಗಳನ್ನು ಹೆಳುತ್ತೇನೆ. ಕಾಡಿನಲ್ಲಿ ಇದ್ದಿಲನ್ನು ಮಾಡುವುದಕ್ಕೆ ಅವಕಾಶ ಕೊಟ್ಟಿರುವುದೇ ಒಳ್ಳೆಯದಲ್ಲ. ತಾವು ತೋಪುಗಳನ್ನು ಹರಾಜು ಮಾಡುತ್ತೀರಿ. ಇದನ್ನೆಲ್ಲಾ ನಾನು ಅಷ್ಟು ವಿಸ್ತರಿಸಿ ಮಾತನಾಡಲು ನನಗೆ ಸಾಕಷ್ಟು ಕಾಲಾವಕಾಶವಿಲ್ಲ. ಆದ್ದರಿಂದ ಸ್ವಲ್ಪಸ್ವಲ್ಪದರಲ್ಲೇ ಮುಗಿಸಿಬಿಡುತ್ತೇನೆ. ತಮ್ಮ ಲೈಸೆನ್ಸ್ ಪಡೆದು ಕಾಡಿಗೆ ಹೋಗಿ ಅಲ್ಲಿ ಸಾಗುವಾನಿ, ಇತ್ಯಾದಿ ಬೆಲೆ ಬಾಳತಕ್ಕ ಮರಗಳನ್ನು ವಿಶೇಷವಾಗಿ ಕಡಿದುಹಾಕಿದ್ದಾರೆ. ಈ ಸಂಬಂಧವಾಗಿ ಶ್ರೀ ಎಸ್. ರಂಗರಾಮಯ್ಯನವರು ತಿಳಿಸಿರುವುದು ಪೂರ್ತಿಯಾಗಿ ಸರಿಯಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಲೈಸೆನ್ಸು ಕೊಡುವಾಗ, ಅದನ್ನು ಸರ್ಕಾರದವರು ಕೆಲವು ಷರತ್ತು ಹಾಕಿ, ಇಂಥಾ ಕೆಲವು ಜಾತಿಯ ಮರಗಳನ್ನೇ ಕಡಿಯಬೇಕು. ಇಂತಿಂಥಾ ಮರಗಳನ್ನು ಕಡಿಯ ಕೂಡದು, ಇಷ್ಟೇ ದಿನದಲ್ಲಿ ಅವುಗಳನ್ನು ಕಡಿಯಬೇಕು ಎಂಬ ಅನೇಕ ನಿರ್ಬಂಧಗಳನ್ನು ಅವರ ಮೇಲೆ ಹೇರಿಯೇ ಕೊಡುತ್ತಿದ್ದಾರೆ. ಆದರೆ ಆ ಷರತ್ತುಗಳಿಗನುಸಾರವಾಗಿಯೇ ಎಲ್ಲವೂ ನಡೆಯುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ಅಜಮಾಯಿಷಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಯಾವಾಗಲೂ ಒಂದೊಂದಾವರ್ತಿ ಹರಾಜು ಮಾಡಿದಾಗ ಇದ್ದಲು ಸುಡುವುದಕ್ಕಾಗಿ, 10 -200 ಎಕರೆಗಳ ಪ್ರದೇಶವನ್ನು ಕೊಟ್ಟುಬಿಡುತ್ತೀರಿ. ಆದರೆ ನಿರ್ದಿಷ್ಟವಾಗಿ ಅಳತೆ ಮಾಡಿ ಇಷ್ಟೇ ಪ್ರದೇಶದಲ್ಲಿ ಮರಗಳನ್ನು ಕಡಿಯಬೇಕೆಂದು ನಿಗದಿ ಮಾಡಿರುವುದಿಲ್ಲ. ಹಾಗೆ ಯಾವ ಒಂದು ನಿರ್ಬಂಧವೂ ಇಲ್ಲದಿರುವುದರಿಂದ, ಆ ಹರಾಜು ಎಂಬ ಒಂದು ನೆಪದಲ್ಲಿ ಅವರು ಎಷ್ಟೋ ಮಾರ್ಗಗಳಲ್ಲಿ ಅದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ಬೇಕಾದಷ್ಟು ನಿದರ್ಶನಗಳೂ, ಉದಾಹರಣೆಗಳೂ ಇರುತ್ತವೆ. ಅಂಥ ಸಂದರ್ಭಗಳಲ್ಲಿ ಬೆಲೆ ಬಾಳುವ ಸಾಗುವಾನಿ ಮರಗಳನ್ನೂ ಕೂಡ ಎಷ್ಟೋಸಲ ಕತ್ತರಿಸಿ ಬೇರೆ ಕಡೆಗೆ ಸಾಗಿಸಲಾಗುತ್ತಿದೆ. ಇನ್ನು ಕೆಲವು ಸಂದರ್ಭಗಳಲ್ಲಿ ಸಾಗುವನಿಯಂಥ ದೊಡ್ಡ ದೊಡ್ಡ ಮರಗಳನ್ನು ಸಾಗಿಸುವುದಕ್ಕಾಗದೇ ಇರುವಂಥಾ ಸಂದರ್ಭಗಳಲ್ಲಿ ಈ ರೀತಿಯ ಲೈಸೆನ್ಸುಗಳನ್ನು ನೆಪಮಾತ್ರಕ್ಕೆ ಪಡೆದುಕೊಂಡು ಬೆಲೆಬಾಳತಕ್ಕ ಮರಗಳನ್ನೆಲ್ಲಾ ಸುಟ್ಟು ಇದ್ದಿಲುಮಾಡಿ, ಅದನ್ನು ಬೇರೆಕಡೆಗೆ ಸಾಗಿಸುತ್ತಿದ್ದಾರೆ. ಈಗಾಗಿ ಕಾಡಿನಲ್ಲಿದ್ದ ಸಾಗುವಾನಿ ಮರಗಳೆಲ್ಲಾ ನಾಶವಾಗಿ ಹೋಗಿವೆ. ನಮ್ಮ ತಾಲ್ಲೂಕಿನಲ್ಲಿ "ಕರಾಚಿ" ಎಂಬ ಒಂದು ಜಾತಿಯ ಬಹಳ ಕಠಿಣವಾದ ಸಾಗುವಾನಿಯ ಮರವಿದೆ. ಅದನ್ನು ಕಾಡಿನಿಂದ ತರುವುದು ಕಷ್ಟ. ಅಂಥಾದ್ದನ್ನೆಲ್ಲ ಸುಲಭವಾಗಿ ಇದ್ದಿಲನ್ನು ಮಾಡಿ, ಸರಾಗವಾಗಿ ಈಚೆಗೆ ಬರುವಂತೆ ಮಾಡುತ್ತಿದ್ದಾರೆ. ಹೀಗೆ ಇದಕ್ಕೆ ಕೊಡುತ್ತಿರುವ ಅವಕಾಶವನ್ನು ಎಷ್ಟು ಬೇಗ ತಪ್ಪಿಸಿದರೆ ಅಷ್ಟು ಒಳ್ಳೆಯದು. ಆದರೆ ಶ್ರೀ ಭೀಮಪ್ಪನಾಯಕರು ಹೇಳಿರುವಂತೆ ಹಳ್ಳಿಗಾಡಿನವರಿಗಾಗಲೀ ಅಥವಾ ದೊಡ್ಡ ದೊಡ್ಡ ಪಟ್ಟಣದಲ್ಲಿರುವವರಿಗಾಗಲೀ ಈ ಇದ್ದಲಿನ ಅವಶ್ಯಕತೆ ಅಷ್ಟಾಗಿಲ್ಲವೆಂದು ನಾನು ಹೇಳುತ್ತೇನೆ. ಪಟ್ಟಣವಾಸಿಗಳು ನಾಗರೀಕರು, ಸೌದೆ ಉಪಯೋಗಿಸಿ ಬಾಯಿನಲ್ಲಿ ಊದಿ ಮಸಿ ವಗ್ಯೆರೆ ಮಾಡಿಕ್ಕೊಳ್ಳಲು ಅವರಿಗೆ ಇಷ್ಟವಿಲ್ಲದೆ ಇದರ ಉಪಯೋಗ ಅವರಿಗೆ ಹೆಚ್ಚಾಗಿಹೋಗಿದೆ. ಈ ಅಭ್ಯಾಸ ಇತ್ತೀಚೆಗೆ ಅವರಿಂದ ಹಳ್ಳಿಗೂ ಬಂದಿದೆ. ಪಟ್ಟಣದಲ್ಲಿ ವಿದ್ಯುಚ್ಛಕ್ತಿಯ ಸೌಲಭ್ಯವಿದೆ. ಹೀಗೆ ಸೌದೆ ಮತ್ತು ಇದ್ದಿಲನ್ನು ಉಪಯೋಗಿಸುವುದಕ್ಕೆ ಪ್ರತಿಯಾಗಿ ಈ ವಿದ್ಯುಚ್ಛಕ್ತಿಯನ್ನೇ ಅವರಿಗೆ ಒದಗಿಸಬಹುದು. ಆಗ ಈ ತೊಂದರೆಗಳೆಲ್ಲಾ ಇರುವುದೇ ಇಲ್ಲ.

ಇದೂ ಅಲ್ಲದೆ ಹಾಗೆ ಕಾಡಿನಲ್ಲಿರುವ ಮರಗಳ ಗೋಜಿಗೇ ಹೋಗದಂತೆ ಬೇರೆ ರೂಪದಲ್ಲಿ ಈ ಇದ್ದಿಲು ವಗ್ಯೆರೆ ಮಾಡಲು ಬೇಕಾದಷ್ಟು ಅವಕಾಶಗಳಿವೆ. ಹಳ್ಳಿಗಳ ಕಡೆ ಅನೇಕವಾಗಿ ಖಾಸಗೀ ಜನರ ಹಿಡುವಳಿಯಲ್ಲಿರುವ ಜಮೀನುಗಳಲ್ಲಿ ಉಪಯೋಗಕ್ಕೆ ಬಾರದಂಥಾ ಕೆಲ ಕೆಲವು ಜಾತಿಯ ದೊಡ್ಡದೊಡ್ಡ ಮರಗಳು ವಿಶೇಷವಾಗಿವೆ. ಹಾಗೆ ಇದ್ದಿಲನ್ನು ಸುಡಬೇಕೆಂಬ ಇರಾದೆಯುಳ್ಳವರು ಅಂಥವರಿಂದ ಮರಗಳನ್ನು ಕೊಂಡು ತಾವು ಅದನ್ನು ಇದ್ದಿಲು ಮಾಡಬಹುದು. ಹಾಗೆ ಮಾಡುವುದರಲ್ಲಿ ಯಾವ ಆಕ್ಷೇಪಣೆಯೂ ಇರುವುದಿಲ್ಲ. ಆಗ ಯಾರೂ ಯಾರನ್ನೂ ಟೀಕೆ ಮಾಡುವುದಕ್ಕಾಗುವುದಿಲ್ಲ. ಈ ಅರಣ್ಯ ಬಾಬಿನಲ್ಲಿ ಏನೇನು ಲೋಪದೋಷಗಳು ನಡೆಯುತ್ತವೆಂಬುದನ್ನು ಅನೇಕರು ತಿಳಿಸಿದ್ದಾರೆ. ಆದರೆ ಶ್ರೀ ಭೀಮಪ್ಪ ನಾಯಕರು ತಿಳಿಸಿದಂತೆ ತಮಗೆ ಎಲ್ಲೆಲ್ಲಿ ಇದ್ದಿಲಿನ ಆವಶ್ಯಕತೆಯಿರುತ್ತದೆಯೋ ಅಲ್ಲೆಲ್ಲ ಈ ಸರ್ವೆ ಮರಗಳನ್ನು ಬೆಳಸಿ ಅದನ್ನು ಸೌದೆ, ಅಥವಾ ಇದ್ದಿಲು ಯಾವುದಕ್ಕಾದರೂ ತಾವು ಉಪಯೋಗ ಮಾಡಿ. ಅಲ್ಲದೆ ಸರ್ವೇ ಸೌದೆ ಇತರ ಜಾತಿಯ ಸೌದೆಗಿಂತ ಬಹಳ ಶ್ರೇಷ್ಠವಾದ್ದೆಂದು ಹೇಳುತ್ತಿದ್ದಾರೆ. ಹೀಗೆ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ಈ ರೀತಿ ಮಾಡಿದರೆ ಆಗ ಯಾರೂ ಅರಣ್ಯದ ತಂಟೆಗೇ ಹೋಗುವುದಿಲ್ಲ. ಸಾಗುವಾನಿ ಮರಗಳಿಗೂ ಬಾಧಕವಿರುವುದಿಲ್ಲ. ಈ ರೀತಿ ಮಾಡುವುದು ಉಚಿತವಾಗಿರುತ್ತೆಂದು ಸೂಚಿಸುತ್ತೇನೆ.

ಆದರೆ ತಾವು ಈಗ ಈ ತೋಪುಗಳ ಹರಾಜು ಮಾಡುತ್ತಿರುವುದು ಹೇಗಿವೆಯೆಂದರೆ ಕಳ್ಳನಿಗೆ ರಂಧ್ರಮಾಡಿ ಕೊಟ್ಟಹಾಗೆ ಆಗಿದೆ. ಇದರಿಂದ ಹೆಚ್ಚು ದುರುಪಯೋಗವಾಗುತ್ತಿದೆ. ಇದನ್ನೆಲ್ಲಾ ಸರಿಯಾಗಿ ಅರ್ಥಮಾಡಿಕೊಂಡು, ನಮ್ಮ ಅರಣ್ಯ ಸಂಪತ್ತು ಉಳಿಯುವಂತೆ ಮಾಡಬೇಕಾಗಿದ್ದರೆ, ಈ ತೋಪುಗಳ ಹರಾಜನ್ನು

ಕೂಡಲೇ ಮನ್ನಾ ಮಾಡಬೇಕೆಂದು ನಾನು ತಿಳಿಸುತ್ತೇನೆ.

Sri L. SIDDAPPA.—The point has been sufficiently discussed. There does not seem to be any difference of opinion.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಸೌದೆ ಮತ್ತು ಕಟ್ಟಿಗೆ ಇವುಗಳ ತೊಂದರೆ ಪಟ್ಟಣಿಗರಿಗೆ ಬಹಳವಾಗಿದೆ. ಸೌದೆಯನ್ನು ಕೇವಲ ಒಲೆಗಾಗಿ ಉಪಯೋಗಿಸುತ್ತಿದ್ದುದಲ್ಲದೆ charcoal bus ಗಳಿಗೆ ಬೇಕಾದ ಇದ್ದಲು ಮಾಡುವುದಕ್ಕೂ ಉಪಯೋಗಿಸುತ್ತಿದ್ದಾರೆ. ಹಿಂದೆ ಸರ್ಕಾರದವರು ಕೆಲವು ಬಸ್ಸುಗಳಿಗೆ ಲೈಸೆನ್ಸ್ ಕೊಡುವಾಗ charcoal plant ಗಳನ್ನು ಹಾಕಿಕೊಂಡರೇ ಲೈಸೆನ್ಸ್ ಕೊಡುತ್ತೇವೆಂದು ಹೇಳಿದ್ದರ ಮೇಲೆ ಅವರೆಲ್ಲಾ ಹಾಕಿಕೊಂಡಿದ್ದಾರೆ ಈಗ ಅವರುಗಳಿಗೆಲ್ಲಾ ಇದ್ದಲಿಲ್ಲವೆಂದರೆ ಪೆಟ್ರೋಲ್ ಒದಗಿಸಬೇಕಾಗುವ ಕಷ್ಟ ಬರುತ್ತದೆ. ಈ ಇದ್ದಲು ಮಾಡುವುದಕ್ಕೆ ಹಸೀ ಮರಗಳೇ ಬೇಕು. ಒಣಗಿದ ಮರದಲ್ಲಾಗುವುದಿಲ್ಲ. ಇನ್ನೊಂದು ವಿಚಾರವೇನೆಂದರೆ, ನನ್ನ ಮಾನ್ಯಮಿತ್ರರು ಈ ರೀತಿಯಾಗಿ ಇದ್ದಲು ಮಾಡುವುದನ್ನು ವಿರೋಧಿಸಿ ಮಾತನಾಡಿದ್ದಾರೆಂದು ಇವರ ಮನೆಯಲ್ಲಿ ಗೊತ್ತಾಗಿದ್ದರೂ ಇವರ ಹೆಣ್ಣುಮಕ್ಕಳೇ ಇವರನ್ನು ಖಂಡಿತವಾಗಿ ವಿರೋಧಿಸುತ್ತಿದ್ದರೆಂದು ಹೇಳಬಲ್ಲೆ.

ಶ್ರೀ ಕೆ. ಸುಬ್ಬರಾಯರು.—ಅವರು ಇದ್ದಲು ಮಾಡುವುದನ್ನು ನಿಲ್ಲಿಸಿ ಎಂದು ಹೇಳಲಿಲ್ಲ. ತೋಪುಗಳನ್ನು ಕೊಡಬೇಡಿ ಎಂದು ಹೇಳಿದರು ಅಷ್ಟೆ. ಬೇಕಾದರೆ ತಾವು ಇದ್ದಲು ಮಾಡಿಕೊಳ್ಳಬಹುದ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ನಾನು ಯಾಕೆ ಹೇಳಿದೆನೆಂದರೆ, ಇದ್ದಲನ್ನು ಮಾಡಲೇ ಕೂಡದೆಂದರೆ ಬಹಳ ಕಷ್ಟವಾಗುತ್ತದೆ ಎಂದು. ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಇದರ ಅವಶ್ಯಕತೆ ಅಷ್ಟಿಷ್ಟಲ್ಲ. ಹೊಸದಾಗಿ ಅಲ್ಲಿಗೆ ಬಂದವರೆಲ್ಲರಿಗೂ ಎಲೆಕ್ಟ್ರಿಕ್ ಸ್ಟೌವ್‌ಗಳನ್ನಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಅದರಲ್ಲೂ ಅನೇಕ ಮನೆಗಳಲ್ಲಿ ನಾಲ್ಕು—ಐದು ಸಂಸಾರಗಳಿರುತ್ತವೆ. ಜೊತೆಗೆ ಕೆಲವು ಮನೆಗಳಲ್ಲಿ ಅಡಿಗೆ ಮನೆ, ಬಚ್ಚಲು ಮನೆಗಳು ಬೇರೆಯಿರುವುದಿಲ್ಲ.

ಅಧ್ಯಕ್ಷರು.—ಈಗ ಇದ್ದಿಲಿನ ಉಪಯೋಗದ ವಿಷಯವಾಗಿ ಭಾಷಣ ಮಾಡುತ್ತಿರುವ ಹಾಗೆ ಕಾಣುತ್ತೆ !!

ಶ್ರೀ ಕೆ. ಸಂಪಂಗಿರಾಮಯ್ಯನವರು.—ಇದ್ದಲಿನ ಉಪಯೋಗ ಈಚೀಚೆಗೆ ಹೆಚ್ಚಿರುವುದರಿಂದ ಇದ್ದಲಿನ ತಯಾರಿಕೆಯನ್ನು ನಿಲ್ಲಿಸಕೂಡದೆಂದು ನಾನು ಹೇಳಿದೆ ಅಷ್ಟೆ. ಇದ್ದಿಲನ್ನು ಕಾಡಿನ ಕೂಪುಗಳಲ್ಲೇ ಮಾಡಬೇಕಾಗಿದೆ. ಅಡಿಗೆ ಮುಂತಾದುವುಗಳಿಗೇ ಅಲ್ಲದೆ ಇಸ್ತ್ರಿಮಾಡುವುದು, ಗಾರೆ, ಸುಣ್ಣ ಮುಂತಾದುವುಗಳಿಗೆಲ್ಲಾ ಬೇಕಾಗುತ್ತದೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲೂ ಎಲೆಕ್ಟ್ರಿಕ್ ಕರೆಂಟ್ ಉಪಯೋಗಿಸುವುದನ್ನು ಪ್ರಾರಂಭ ಮಾಡುವವರೂ ಯಥೇಚ್ಛವಾಗಿ ಇದ್ದಲನ್ನು ಮಾಡಿಕೊಳ್ಳಬೇಕಾಗುತ್ತದೆ. ಆದರೂ ಇದ್ದಲಿನ ದೆಶೆಯಿಂದ ಮಾನ್ಯ ಸದಸ್ಯರು ಹೇಳಿದಂತೆ ಅನೇಕ ತೊಂದರೆಗಳಾಗುತ್ತಿರುವುದೂ ನಿಜ. ಆದ್ದರಿಂದ ತಾವು ಮುಖ್ಯವಾಗಿ ಯಾವ ಯಾವ ಮರಗಳು ಇದ್ದಲಿಗೆ ಯೋಗ್ಯವಾಗಿವೆ ಯೆಂಬುದನ್ನು ತೋರಿಸಿ ಅದರ ವಿಷಯದಲ್ಲಿ ತಕ್ಕಮಟ್ಟಿಗೆ ನಿಗಾವಣೆಯಿಟ್ಟು ಮರ ಕಡಿಸುವ ಏರ್ಪಾಡು ಮಾಡಬೇಕಾಗುತ್ತದೆಯೇ ಹೊರತು ಕೂಪು ಕೊಡುವುದನ್ನೇ ಬಿಟ್ಟುಬಿಡಬೇಕೆಂದು ಹೇಳುವಹಾಗಿಲ್ಲ. ಆದ್ದರಿಂದ, ಇದನ್ನು ತಂದಿರತಕ್ಕ ಮಾನ್ಯ ಸದಸ್ಯರು ತಮ್ಮ ಸೂಚನೆಯನ್ನು ಒತ್ತಾಯ ಮಾಡಕೂಡದೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಇದ್ದಲಿಗೆ ಮರಗಳನ್ನು ಕೊಡುವುದರಲ್ಲಿ ತಕ್ಕ ನಿಗಾವಣೆಯಿಟ್ಟು ಪರ್ಮಿಟ್ ಕೊಡುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ: ಹಾಗಿಲ್ಲದೆ ಕೂಪುಗಳನ್ನು ಕೊಡುವುದನ್ನು ನಿಲ್ಲಿಸಿಬಿಟ್ಟರೆ ಪಟ್ಟಣಗಳಲ್ಲಿ ಹಾಹಾಕಾರ ಹುಟ್ಟಿ ಅನೇಕರಿಗೆ ಊಟಕ್ಕೆ ಬಹಳ ತೊಂದರೆಯಾಗುತ್ತದೆಂದು ಹೇಳುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇದ್ದಲನ್ನು ಸುಡುವುದಕ್ಕೆ ಕೊಡತಕ್ಕ ಫಾರೆಸ್ಟ್ ಕೂಪುಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಖೋತಾ ಸೂಚನೆಯನ್ನು ತಂದಿದ್ದಾರೆ. ಅದರ ಮೇಲೆ ಅನೇಕ ಸದಸ್ಯರು ಭಾಷಣ ಮಾಡಿ ಅವರವರ ಸ್ವಂತ ಅನುಭವಗಳನ್ನು ಆಯಾ ಜಿಲ್ಲೆಯಲ್ಲಿರತಕ್ಕ ಕಷ್ಟಸುಖಗಳನ್ನೂ ಬಹಳ ವಿಶದವಾಗಿ ಹೇಳಿದ್ದಾರೆ. ಮಾನ್ಯ ಸದಸ್ಯರಿಗೂ ಮತ್ತು ಸರ್ಕಾರದವರಿಗೂ ಈ ಬಗ್ಗೆ ಕೆಲವು ವಿಷಯಗಳಲ್ಲಿ ವಿನಾ ಹೆಚ್ಚಿಗೆಯೇನೂ ವ್ಯತ್ಯಾಸವಿರುವಂತೆ ಕಾಣಲಿಲ್ಲ. ಅರಣ್ಯ ಸಂಪತ್ತನ್ನು ಬಹುಮಟ್ಟಿಗೆ ಉಳಿಸಿ ದೇಶಕ್ಕೆ ಹಿತವನ್ನು ಗಳಿಸಿಕೊಳ್ಳಬೇಕು ಎಂಬುದೇ ಸರ್ಕಾರದವರ ಆಶಯ. ಇದ್ದಲಿಗೆ ಕೊಡತಕ್ಕ ಕೂಪುಗಳನ್ನು ಕಡಿಮೆ ಮಾಡಬೇಕು, ಇದರಿಂದ ಅರಣ್ಯಕ್ಕೆ ಬಹಳ ನಷ್ಟವಾಗುತ್ತಿದೆಯೆಂದು ಅನೇಕರು ಹೇಳಿದ್ದಾರೆ. ಸರ್ಕಾರದವರೂ ಅದನ್ನು ಒಪ್ಪುತ್ತಾರೆ. ಆದರೆ ಖೋತಾ ನಿರ್ಣಯವನ್ನು ಈಗ ತಂದಿರತಕ್ಕ ರೀತಿಯಲ್ಲಿ ಸರ್ಕಾರದವರು ಒಪ್ಪುವುದಕ್ಕಾಗುವುದಿಲ್ಲ. ಅದರಲ್ಲಿರುವ ಪ್ರತಿಯೊಂದು ಅಂಶದ ವಿಚಾರದಲ್ಲೂ ಇರತಕ್ಕ ತೊಂದರೆಯೇನೆಂಬುದನ್ನು ಶ್ರೀಮಾನ್ ಸಂಪಂಗಿರಾಮಯ್ಯನವರು ಜವಾಬು ಹೇಳಿ ಬಹುಮಟ್ಟಿಗೆ ನನ್ನ ತೊಂದರೆಯನ್ನು ಕಡಿಮೆ ಮಾಡಿದ್ದಾರೆ. ಒಂದನೆಯದಾಗಿ, ಇದ್ದಲು ಸುಡಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಮೈಸೂರು ದೇಶದಲ್ಲಿ ಎಲ್ಲಿಯೂ ಸುಡುವುದಕ್ಕೆ ಅವಕಾಶ ಕೊಡಕೂಡದೆಂದು ಇದರಲ್ಲಿ ಅಭಿಪ್ರಾಯ ಬರುವಹಾಗೆ ಕಾಣುತ್ತದೆ. ಆ ರೀತಿಯಾಗಿ ಮಾಡುವುದಾದರೆ, ಅವರು ಹೇಳಿದಹಾಗೆ ಅನೇಕ charcoal ಬಸ್ಸುಗಳಿಗೂ ಮತ್ತು ಕೋಟ್ಯಾಂತರ ರೂಪಾಯಿಗಳಿಂದ ನಡೆಸುತ್ತಿರುವ ಕಬ್ಬಿಣದ ಕಾರ್ಖಾನೆಗೂ ಬಹಳ ಕಷ್ಟ ಬರುತ್ತದೆ. ಅಲ್ಲದೆ ಅನೇಕ ಕೈಗಾರಿಕೆಗಳಿಗೂ ಖಾಸಗಿ ಜನಗಳ ಉಪಯೋಗಕ್ಕೂ ಇದ್ದಲು ಬೇಕಾಗುತ್ತವೆ. ಸಿಟಿಗಳಲ್ಲಿ ಅಡಿಗೆ ಮಾಡುವುದಕ್ಕೆ ಇದ್ದಲನ್ನೇ ಬಹುಮಟ್ಟಿಗೆ ಉಪಯೋಗಿಸುತ್ತಾರೆ. ಆದ್ದರಿಂದ ಸಂಪೂರ್ಣವಾಗಿ ಇದ್ದಲು ತಯಾರಿಸುವುದನ್ನು ನಿಲ್ಲಿಸತಕ್ಕ ಅಂಶವನ್ನು ಬಹಳ ಸಾವಧಾನದಿಂದ ಯೋಚನೆ ಮಾಡಬೇಕಾಗಿದೆ. ಅವರು ಹೇಳಿದಂತೆ ನಿಲ್ಲಿಸುವುದರಲ್ಲಿ ಒಂದು ತತ್ವ ಇದೆ, ನಿಜ. ಆದರೆ ಈರೀತಿ ತಕ್ಷಣ ನಿಲ್ಲಿಸಿದರೆ ಅನೇಕರಿಗೆ ಕಷ್ಟವಾಗುತ್ತದೆ. ನಾವು ಎಲ್ಲರಿಗೂ ಎಲೆಕ್ಟ್ರಿಕ್ ಹೀಟರ್ ಒದಗಿಸುವ ಸ್ಥಿತಿಯಲ್ಲಿಲ್ಲ. ಎಲ್ಲಾ ಕೈಗಾರಿಕೆಗಳಿಗೂ ಹೋಟಲುಗಳಿಗೂ ನಾವು ಎಲೆಕ್ಟ್ರಿಕ್ ಹೀಟರ್ ಕೊಡುವ ಹಾಗಿದ್ದರೆ ನಿಲ್ಲಿಸಬಹುದಾಗಿತ್ತು. ಬಸ್ಸುಗಳಿಗೆ ಸಾಕಾದಷ್ಟು ಪೆಟ್ರೋಲ್ ಕೊಟ್ಟರೆ ಇದ್ದಲು ಉಪಯೋಗಿಸುವುದು ನಿಲ್ಲುತ್ತದೆ. ಈ ಪ್ರಕಾರ ನಾನಾ ರೀತಿಯಲ್ಲಿ ತೊಂದರೆಗಳಿರುವುದರಿಂದ ಈ ಇದ್ದಲನ್ನು ಮಾಡಲು ಅನುಮತಿಕೊಡಬೇಕಾಗಿದೆಯೇ ವಿನಾ ವ್ಯಾಪಾರ ದೃಷ್ಟಿಯಿಂದಲಾಗಲೀ, ಲಾಭ

ಲಾಭಸಂಪಾದನೆಯಿಂದಲಾಗಲೀ ಮಾಡುತ್ತಿಲ್ಲ. ಪಟ್ಟಣವಾಸದಲ್ಲಿ ಇದ್ದಲಿನಿಂದಲೇ ಅಡಿಗೆ ಮಾಡಬೇಕಾಗಿದೆ.

Sri M. GOVINDA REDDY (Chitaldurg District-General).—Sir, the Hon'ble Minister is proceeding on the assumption that it should be completely given up. The cut motion only contemplates discontinuing giving coupes for charcoal burning. It contemplates only stopping of giving away whole coupes for charcoal burning.

ಶ್ರೀ ಆರ್. ಚನ್ನಿಗರಾಮಯ್ಯನವರು.—ಅರಣ್ಯ ಇಲಾಖೆಯಿಂದ ಕೂಪುಗಳನ್ನು ಕೊಡುವುದನ್ನು ನಿಲ್ಲಿಸಿಬಿಟ್ಟರೆ, ಅವರು ಪ್ರೈವೇಟ್ ಮರಗಳನ್ನು ಕೊಂಡುಕೊಂಡು ಮಾಡಬೇಕಾಗುತ್ತೆ !

Sri A. BHEEMAPPA NAIK.—Sir, the Hon'ble Minister is mistaken. Coup system is different from giving the trees. It is the area that is given. It is not the coupe system. It is that the the Hon'ble Mover wants to discontinue.

ಒಬ್ಬ ಸದಸ್ಯರು.—ಈಗ ಕೊಡತಕ್ಕ ಪದ್ಧತಿಯ ಪ್ರಕಾರ ಅರಣ್ಯದಲ್ಲಿ ಒಟ್ಟಿಗೆ ಒಂದು ಎಕರೆ, ಎರಡು ಎಕರೆಗಳನ್ನೂ ಒಂದೊಂದು ಕೂಪೆಂದು ಗೊತ್ತು ಮಾಡುತ್ತಾರೆ. ಹಾಗೆ ಕೊಡಕೂಡದು, ಮರಗಳನ್ನು ಬೇಕಾದರೆ ಕೊಡಬಹುದೆಂದು ಶ್ರೀ ಭೀಮಪ್ಪನಾಯಕರು ಹೇಳಿದರು.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಲ್ಲಿ ಒಳ್ಳೆಯ ಮರಗಳೂ ಇರುತ್ತವೆ, ಅಂಥವುಗಳನ್ನು ಕಡಿಯುವ ಅವಕಾಶವಿರುತ್ತದೆಂದು ಹೇಳಿದರು. ಶ್ರೀ ಸುಬ್ಬರಾಯರು ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಇಂತಿಂಥಾ ಮರಗಳನ್ನು ಕತ್ತರಿಸಿಕೂಡದೆಂದು ಈಗಲೂ ಹೇಳಿರುತ್ತಾರೆ. ಉದಾಹರಣೆಗೆ ತ್ಯಾಗ, ಗಂಧ ಮುಂತಾದ ಮರಗಳನ್ನು ಕಡಿಯ ಕೂಡದೆಂದು ಈಗಲೂ ಅವರಿಗೆ ತಿಳಿಸಿರುತ್ತಾರೆ. ಆದರೆ ಅವರು ಹೇಳುವ ಆಕ್ಷೇಪಣೆಯೇನೆಂದರೆ ನಾವು ಹಾಕಿರತಕ್ಕ ಷರತ್ತುಗಳನ್ನು ಅವರು ಸರಿಯಾಗಿ ಪಾಲಿಸುವುದಿಲ್ಲ ಎಂದು. ಕಾನೂನಿದ್ದರೂ ಕಾನೂನಿನ ಪ್ರಕಾರ ನಡೆಯುವುದಿಲ್ಲವೆಂದು. ಚಾಪೆ ಕೆಳಗೆ ತೂರದಂತೆ ನೋಡಿಕೊಂಡರೆ ಅವರು ರಂಗೋಲಿ ಕೆಳಗೆ ತೂರುವುದಕ್ಕೆ ಪ್ರಯತ್ನಪಡುತ್ತಾರೆ. ಇದನ್ನು ತಪ್ಪಿಸಬೇಕೆಂದು ಹೇಳಿದ್ದಾರೆ. ಸರ್ಕಾರದವರೇನೋ ಈಗಲೂ ಮಾಡಬೇಕಾದ್ದನ್ನೆಲ್ಲಾ ಮಾಡಿಯೇ ಇದ್ದಾರೆ. ಆದರೆ ಜನರು ಅದನ್ನು ಉಲ್ಲಂಘಿಸಿ ಕೆಲಸ ಮಾಡುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Sri A. BHEEMAPPA NAIK.—Devise a better system than the coup system.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ತಾವೇ ಉತ್ತಮ ಪದ್ಧತಿ ಏನಾದರೂ ಹೇಳಿದರೆ ಯೋಚನೆ ಮಾಡುತ್ತೇವೆ. ಶ್ರೀ ರಂಗರಾಮಯ್ಯನವರು ಹೇಳಿದರು, ಹಸಿ ಮರಗಳನ್ನು ಕಡಿಯುವುದಕ್ಕೆ ಬದಲು ಒಣ ಮರಗಳನ್ನು ಮಾತ್ರವೇ ಕಡಿಯಲಿ ಎಂದು. ಅದಕ್ಕೆ ಮಾನ್ಯ ಸದಸ್ಯರಾಗಲೇ ಉತ್ತರ ಹೇಳಿದ್ದಾರೆ. ಇದ್ದಲು ಮಾಡತಕ್ಕದ್ದು ಹಸಿಮರದಲ್ಲೇ. ಶ್ರೀ ಭೀಮಪ್ಪನಾಯಕರು, ಇದ್ದಲಿಗಾಗಿಯೇ ಒಂದು ಪ್ರತ್ಯೇಕವಾದ ಸ್ಥಳವನ್ನು ಗೊತ್ತು ಮಾಡಿ ಅಲ್ಲಿ ಸುಡಿಸಿದರೆ ಉತ್ತಮ, ಆ ರೀತಿಯಾಗಿ ಮಾಡದಿದ್ದುದರಿಂದ ಯಾವುದೋ ಹಳ್ಳಿಯಲ್ಲಿ ಅನಾಹುತ ಕೂಡ ಆಯಿತೆಂದು ಹೇಳಿದರು. ಬಹುಮಟ್ಟಿಗೆ ಇಂಥಾ ಸ್ಥಳಗಳನ್ನು ಗೊತ್ತುಪಡಿಸುವ ಅಧಿಕಾರ ಸ್ಥಳೀಯ ಅಧಿಕಾರಿಗಳಿಗೇ ಇದೆ.

ಶ್ರೀ ಭೀಮಪ್ಪನಾಯಕರು.—ಇಂಥ ಸೌದೆ ಅಥವಾ ಇದ್ದಲಿಗೆ ಆಗತಕ್ಕ ಕಾಡುಗಳನ್ನೇ ಪ್ರತ್ಯೇಕವಾಗಿ ಬೆಳೆಯಿಸಿ ಎಂದು ನಾನು ಹೇಳಿದೆ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಾನ್ಯ ಸದಸ್ಯರು ಬಹಳ ಅಮೂಲ್ಯವಾದ ಸಲಹೆಯನ್ನು ಕೊಟ್ಟಿದ್ದಾರೆ. ಇದ್ದಲಿಗೆ ಯಾವ ಮರ ಲಾಯಕ್ಕೋ ಅದನ್ನೇ ಫಾರೆಸ್ಟ್ ಇಲಾಖೆಯವರು ತರಿಸಿಕೊಡಬೇಕೆಂದು ಹೇಳಿರುವುದು ಒಳ್ಳೆಯ ಸಲಹೆ. ಅದಕ್ಕೆ ಕೆಲವಾರು ವರ್ಷ ಬೇಕು. ಆ ಸಲಹೆಯನ್ನು ಮನಸ್ಸಿನಲ್ಲಿಟ್ಟು ಫಾರೆಸ್ಟ್ ಇಲಾಖೆಯಲ್ಲಿರುವ ಪ್ರಾಜ್ಞರನ್ನು ವಿಚಾರಮಾಡಿ ಅದಕ್ಕೆ ಲಾಯಕ್ಕಾದ ಮರವನ್ನೇ ಉಪಯೋಗಿಸುವಂತೆ ಮಾಡಲು ಪ್ರಯತ್ನ ಪಡುತ್ತೇವೆ.

ಆ ಮೇಲೆ ಇಂಥ ಕಡೆ ಕೂಪ್ಸ್ ಕೊಡಬೇಕು, ಇಂಥ ಕಡೆ ಕೊಡಕೂಡದು ಎಂದು ನಿಗದಿ ಮಾಡಬೇಕೆಂದೂ ಹೇಳಿದರು. ಈಗ ಗಂಧದ ಮರ ಇಲ್ಲದೇ ಇರುವ ಜಾಗ, ಬೆಲೆ ಬಾಳುವ ಮರ ಇಲ್ಲದೇ ಇರುವ ಜಾಗ ಕೊಡುತ್ತಿದೆ. ಅದಕ್ಕೆ ನಿಯಮವಿದೆ. ಫಾರೆಸ್ಟ್ ಇಲಾಖೆಯಲ್ಲಿ ಹೀಗೆ ಬೇಕಾದಷ್ಟು ಮರಗಳನ್ನು ತೆಗೆದುಕೊಂಡು ಸಾಗಿಸುತ್ತಾರೆಂಬುದನ್ನು ಹೇಳಿದ್ದಾರೆ, ಕೆಲವರು ಖಾಸಗಿ ಜಮೀನ್‌ದಾರರು ಹಾಗೆ ಮಾಡುವುದುಂಟು. ಕೆಲವರು ಮೂರು ಕೂಪುಗಳನ್ನು ಪಡೆಯುವುದೂ ಉಂಟು. ಅಂಥಾದ್ದನ್ನು ಹಿಡಿದು ಬೇಕಾದಷ್ಟು ಕೇಸು ಹಾಕಿ ಶಿಕ್ಷೆ ಮಾಡುತ್ತಿದೆ. ಇತ್ತೀಚೆಗೆ ಫಾರೆಸ್ಟ್ ಇಲಾಖೆಯು ಲಾಭದಾಯಕವಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದೆ. ಆದಷ್ಟು ಮಟ್ಟಿಗೆ ಕಳ್ಳತನವನ್ನು ಸಂಪೂರ್ಣವಾಗಿ ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದೆಯೆಂದು ಹೇಳಬಲ್ಲೆ. ಬಹಳಮಟ್ಟಿಗೆ ಈಗ ಇದು ಕಡಮೆಯಾಗಿದೆಯೆಂದು ಧೈರ್ಯವಾಗಿ ಹೇಳುತ್ತೇನೆ. ಈಗ ಕೋಲಾರ, ತುಮಕೂರು, ಚಿತ್ರದುರ್ಗ, ಬೆಂಗಳೂರು ಮುಂತಾದ ಮೈದಾನ ಪ್ರದೇಶಗಳಲ್ಲಿ ಇದ್ದಲು, ಸೌದೆಗೆ ಕೂಪ್‌ಗಳನ್ನು ಕೊಡುತ್ತಿದ್ದಾರೆ. ಈಗ ಮರ ಬಹಳ ಮಟ್ಟಿಗೆ ಕಡಿಮೆಯಾಗುತ್ತಿದೆಯೆಂದು ಕೆಲವರು ಹೇಳಿರುವುದರಿಂದ ಕೂಪ್‌ಗಳನ್ನು ಕೊಡುವುದು ಕಡಮೆ ಮಾಡಿದ್ದೇವೆ. ಇನ್ನೂ ದಿನೇದಿನೇ ಕಡಮೆ ಮಾಡಬೇಕು. ಹೆಚ್ಚಾಗಿ ಅರಣ್ಯವಿರುವ ಕಡೆ ಮಾತ್ರ ಅವಕಾಶ ಕೊಡಬೇಕು ಎಂದು ಕಾರ್ಯಕ್ರಮವಿದೆ. ಬಹಳಮಟ್ಟಿಗೆ ಕಡಮೆ ಮಾಡುವುದಕ್ಕೂ ಮತ್ತು ಕಳ್ಳತನವನ್ನು ನಿಲ್ಲಿಸುವುದಕ್ಕೂ ಸರ್ವ ಪ್ರಯತ್ನವನ್ನೂ ಮಾಡುತ್ತೇವೆ. ಈ ರೀತಿಯಾಗಿ ಅನೇಕ ತರಹವಾದ ಅಮೂಲ್ಯ ಅಭಿಪ್ರಾಯಗಳು ಬಂದಿರುವುದನ್ನು ಮನಸ್ಸಿನಲ್ಲಿಟ್ಟು ಸರ್ವ ಪ್ರಯತ್ನವನ್ನೂ ಮಾಡಿ ತಕ್ಕ ವ್ಯವಸ್ಥೆ ಮಾಡಲು ಕಾರ್ಯಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ಕೊಟ್ಟು ಮಾನ್ಯ ಸೂಚಕರು ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

Sri S. KARIAPPA.—I withdraw the cut motion on the assurance given by the Hon'ble Minister.

The cut motion was, by leave of the Assembly, withdrawn.

Failure to prevent smuggling of timber.

Sri L. SIDDAPPA (Shimoga District-General).—Sir, I beg to move :—

"That the demand under the head '2. Forest' for Rs. 32 64,000 be reduced by Rs. 100 (to raise a debate on the failure of the Government to prevent the smuggling of timber)."

ಮೊನ್ನೆ ಶ್ರೀ ಕಡಿದಾಳ್ ಮಂಜಪ್ಪನವರು ಬಜೆಟ್ ಭಾಷಣಮಾಡುವಾಗ ಕೆಲವು ಕಡೆ ನಾಟಾ ಕಳ್ಳತನ ಕಡಿಮೆಯಾಗಿದೆಯೆಂಬುದು ಹೇಳಿರುವುದನ್ನು ಒಪ್ಪುವುದಾದರೂ, ಕೆಲವುಕಡೆ ಕಳ್ಳತನ ಹೆಚ್ಚಿರುವುದನ್ನೂ, ಆ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆನ್ನುವುದನ್ನು ಸೂಚಿಸಲು ಈ ನಿರ್ಣಯವನ್ನು ಈ ಸಭೆಯ ಮುಂದಿಟ್ಟಿರುತ್ತೇನೆ. ನನಗೆ ಗೊತ್ತಿರುವ ಹಾಗೆ ಚೆನ್ನಗಿರಿ ತಾಲ್ಲೂಕಿನಲ್ಲಿ ಬಹಳ ಹೆಚ್ಚಿದೆ. ಅದನ್ನು ನೋಡಿ ಬಹಳ ವ್ಯಥೆಯಾಗಿ ಈ ಖೋತಾ ನಿರ್ಣಯವನ್ನು ತಂದಿದ್ದೇನೆ. ಒಂದು ಕಡೆ ರೈತರು ತಮ್ಮ ಸ್ವಂತ ಉಪಯೋಗಕ್ಕೋಸ್ಕರ ಕಾಡುಮರಗಳನ್ನು ಹೊತ್ತು ತರುತ್ತಾರೆ. ಅದನ್ನು ಹಿಡಿಯುವುದು ಅಷ್ಟು ಸಾಧ್ಯವಾಗುವುದಿಲ್ಲ. ಬಡವರು ಕೆಲವರೂ ತರಬಹುದು. ಇದರ ಜೊತೆಗೆ ಹೆಚ್ಚಿನ ಪ್ರಮಾಣದಲ್ಲಿ ಸಾಗಿಸುವುದೂ ಇದೆ. 4 ಆಣೆ, 8 ಆಣೆ ಇದ್ದ ಸಾಗುವಾನಿಯ ಬೆಲೆ ಈಗ 18 ರೂಪಾಯಿಗಳವರೆಗೂ ಹೆಚ್ಚಿರುವುದರಿಂದ ಸಾಗುವಾನಿ ಕಳ್ಳತನ ಹೆಚ್ಚಾಗಿ ಅವರಲ್ಲಿ ಒಂದು ವ್ಯಾಪಾರವೇ ನಡೆಯುತ್ತಿದೆ. ಅದನ್ನು ಹಿಡಿಯುವುದು ಸುಲಭ. ಚೆನ್ನಗಿರಿ ತಾಲ್ಲೂಕಿನಲ್ಲಿ ಕೆಲವರು ಬಂಡವಾಳಗಾರರು ಬಂದು ಲಾರಿಗಳಲ್ಲಿ ಕಳ್ಳತನದ ಮಾಲನ್ನು ತುಂಬಿಕೊಂಡು ಹೋಗುತ್ತಿದ್ದಾರೆ. ಇದು ಇತ್ತೀಚೆಗೆ ಬಹಳವಾಗಿ ಹೋಗಿದೆ. ಸಾಧಾರಣವಾಗಿ ಇಲಾಖೆ ಸ್ಥಳದ ಆಫೀಸರುಗಳಿಗೆ ಇದು ಗೊತ್ತಾಗುತ್ತದೆ. ಬಡವರು ಹೆಗಲ ಮೇಲೆ ಹೊತ್ತು ತಂದು 4—5 ರೂಪಾಯಿಗಳನ್ನು ಸಂಪಾದಿಸುತ್ತಾರೆ. ಹೀಗೆ ಮಾಡುವವರು ಮುಖ್ಯ ಕೇಂದ್ರಗಳಲ್ಲಿ ಅಂದರೆ ಟೌನ್‌ಗಳಲ್ಲಿ ಆಸ್ಪಾಸು ಗ್ರಾಮಗಳಲ್ಲಿ ಹತ್ತು ಹದಿನೈದು ಜನ ಸಾವುಕಾರರುಗಳಿಗೆ ಮಾರುತ್ತಾರೆ. ಅಂಥವರ ಮೇಲೆ ಕ್ರಮ ನಡೆಸುವುದು ಆವಶ್ಯಕ. ವ್ಯವಸಾಯಮಾಡುತ್ತಿದ್ದವರಲ್ಲಿ ಕೆಲವರೂ, ಬೇರೆ ಕೆಲಸಗಳನ್ನು ಮಾಡುತ್ತಿದ್ದವರೂ ಅದನ್ನು ಬಿಟ್ಟು ಈಗ ಈ ಕೆಲಸಮಾಡುತ್ತಿದ್ದಾರೆ. ಇದು ಲಾಭದಾಯಕವಾದ್ದರಿಂದ ತಮ್ಮ ಕೆಲಸಗಳನ್ನು ಬಿಟ್ಟು ರಾತ್ರಿಯ ವೇಳೆಯಲ್ಲಿ ಈ ಕೆಲಸಕ್ಕೆ ಪ್ರವೇಶ ಮಾಡುತ್ತಿದ್ದಾರೆ. ಇನ್ನೂ ವಿಶದವಾಗಿ ಹೇಳಬಹುದಾಗಿತ್ತು. ಆದರೆ ಕಾಲಾವಕಾಶವಿಲ್ಲದ್ದರಿಂದ ಇಷ್ಟು ಮಾತ್ರ ಹೇಳಿದ್ದೇನೆ. ದೊಡ್ಡ ದೊಡ್ಡವರು 4—5 ಜನರಿದ್ದಾರೆ. ಅವರ ಸಹಾಯಕ್ಕೆ ಸಣ್ಣವರು ಗ್ರಾಮಗಳಲ್ಲಿ ಒಬ್ಬೊಬ್ಬರಿಗೆ 8—10 ಜನರಿದ್ದಾರೆ. ಅಂಥವರ ಮೇಲೆ ಪೂರ್ಣವಾಗಿ ನಿಗಾ ಇಟ್ಟರೆ ಮತ್ತು ಅವರನ್ನು ಹಿಡಿದು ಬಲ ಹಾಕಿದರೆ ಆಗ ಈ ಕೆಟ್ಟ ಪದ್ಧತಿಯು ಕಡಮೆಯಾಗುತ್ತದೆ. ಇಂಥ ಕೆಲಸಗಳಿಗೆ ಕೈಹಾಕಿದರೆ ಕಷ್ಟವೆಂದು ಭಯ ಹುಟ್ಟುವ ಹಾಗೆ ಮಾಡಿ ಸ್ಮಗ್ಲಿಂಗ್ ಮಟ್ಟ ಹಾಕಬೇಕೆಂದು ಸೂಚಿಸುತ್ತೇನೆ.

Mr. SPEAKER.—Cut motion moved :

"That the demand under the head '2. Forest' for Rs. 32,64,000 be reduced by Rs. 100."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ರೀತಿ ಸ್ಮಗ್ಲಿಂಗ್ ಆಗುತ್ತಿರುವುದಕ್ಕೆ ಕಾರಣ ಫಾರೆಸ್ಟ್ ಗಾರ್ಡುಗಳು ಎಂದು ಹೇಳಬಹುದು. ಚಾಮರಾಜನಗರ ತಾಲ್ಲೂಕು, ಕುಂದಲಾಪುರ ಗ್ರಾಮದ ಕಡೆ ಕೆಲವು ಮನೆಯವರು ಮನಾಪಲಿ ಮಾಡಿಕೊಂಡು ತಂದೆ, ಮಕ್ಕಳು, ಮೊಮ್ಮಕ್ಕಳು—ಹೀಗೆ ಅದೇ ಕೆಲಸಮಾಡುತ್ತಿರುವುದರಿಂದ ಹೀಗೆ ತೊಂದರೆಯಾಗಿದೆ. ಎಷ್ಟೋ ದಿವಸಗಳಿಂದ ಹೀಗಿದ್ದರೂ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವಾಗಿದೆ. ಅವರ ಪ್ರಭಾವ ಎಷ್ಟರಮಟ್ಟಿಗೆದೆಯೆಂದರೆ, ಜನರು ಅವರಿಗೆ ಔತಣ ಮಾಡುತ್ತಾರೆ. ನಮ್ಮನ್ನು ಕೇಳುವವರೇ ಇಲ್ಲ. ನಾವು ಓಟು ಕೇಳುವುದಕ್ಕೆ ಹೋದರೆ ಗಾರ್ಡನ್ನು ಕೇಳಿ ಕೊಡುತ್ತೇವೆಂದು ಹೇಳುತ್ತಾರೆ. ಗಾರ್ಡುಗಳಿಗೆ ಒಬ್ಬಟ್ಟು ಮಾಡಿ ಔತಣಮಾಡುವುದೂ ಅಲ್ಲದೆ, ಪ್ರತಿಯೊಂದಕ್ಕೂ ಅವರನ್ನು ಕೇಳಿ ಅವರು ಹೇಳಿದಂತೆ ನಡೆದುಕೊಳ್ಳುತ್ತಾರೆ. ಇಷ್ಟರಮಟ್ಟಿಗಿದೆ, ಗಾರ್ಡುಗಳ ಪ್ರಭಾವ, ಇದರಿಂದ ಬಹಳ ನಷ್ಟವಾಗುತ್ತಿದೆ. ಇಷ್ಟು ಕಳಂಕವಿರುವ ಮನುಷ್ಯರನ್ನು ವರ್ಗಮಾಡುವುದಕ್ಕೆ ಎಷ್ಟೋ ಕಷ್ಟ. ನಾವುಗಳು ವಿಶೇಷ ಪ್ರಯತ್ನಮಾಡಿ ಒಬ್ಬನನ್ನು ವರ್ಗಾಯಿಸಿದರೂ ಆತನು ಕೆಲವುಕಾಲದ ನಂತರ ತನ್ನ ಸಾಹಸದಿಂದ ಪುನಃ ಹಿಂದಿನ ಜಾಗಕ್ಕೇ ಬಂದಿದ್ದಾನೆ. ಆದ್ದರಿಂದ ಗಾರ್ಡುಗಳನ್ನು 3 ವರ್ಷಕ್ಕೆ ಜಾಸ್ತಿ ಒಂದು ಕಡೆ ಇಡಕೂಡದು. ಹಾಗೆ ಮಾಡಿದರೆ ಕಳ್ಳತನ ಕಡಿಮೆಯಾಗುವುದರಲ್ಲಿ ಸಂದೇಹವೇ ಇಲ್ಲ. ಶ್ರೀ ಸಿದ್ದಪ್ಪನವರು ಹೇಳಿದ ಹಾಗೆ ಹೆಗಲಮೇಲೆ ಹೊರುವುದೂ ಜಾಸ್ತಿಯಾಗಿದೆ. ಈ ದಿವಸ ಬೇಕಾದರೆ ಮಂತ್ರಿಗಳು ಬರಲಿ. ದುಡ್ಡು ಕೊಟ್ಟರೆ 15 ದಿವಸದಲ್ಲಿ ಬೇಕಾದಷ್ಟು ಮರದ ಸಾಮಾನನ್ನು ಕೊಡಿಸುತ್ತೇನೆ. ರೇಂಜರು ಏನು ಮಾಡಲೂ ಸಾಧ್ಯವಿಲ್ಲ. ಗಾರ್ಡುಗಳೇ ಈ ಕೆಲಸಮಾಡುವುದು. ಅದರಲ್ಲೂ ಸರಹದ್ದುಗಳಲ್ಲಿರುವವರು ಜಾಸ್ತಿಯಾಗಿ ಈ ಕೆಲಸಮಾಡುವುದರಿಂದ ಅವರ ಮೇಲೆ ಹೆಚ್ಚು ನಿಗಾ ಇಡಬೇಕು.

Mr. SPEAKER.—It is now One of the Clock. The demands will now be put. The question is :

"That a sum not exceeding Rs. 39.95,000 be granted to the Government to defray the charges which will come in course of payment during the year ending 31st day of March 1951, in respect of 'Forest'."

The motion was adopted.

Demand No. 3—3 Excise.

Sri H. SIDDAIYA (Minister for Revenue and Excise).—Sir, on the recommendation of His Highness the Maharaja, I beg to move :—

"That a sum not exceeding Rs. 5,63,000 be granted to the Government to defray the charges which will come in course of payment during the year ending 31st day of March 1951 in respect of 'Excise'."

(None of the cut motions under the head was moved.)

Mr. SPEAKER.—The question is:—

"That a sum not exceeding Rs. 5,63,000 be granted to the Government to defray the charges which will come in course of payment during the year ending 31st day of March 1951 in respect of 'Excise'."

The motion was adopted.

Demand No. 4-3-c. Sales Tax 4, Stamps and 5. Registration.

Sri H. C. DASAPPA (Minister for Finance and Industries).—Sir, on the recommendation of His Highness the Maharaja, I beg to move :

"That a sum not exceeding Rs. 9,33,000 be granted to the Government to defray the charges which will come in course of payment during the year ending 31st day of March 1951, in respect of 'Sales Tax, Stamps and Registration'."

(None of the cut motions under the head was moved).

Mr. SPEAKER.—The question is :

"That a sum not exceeding Rs 9,33,000 be granted to the Government to defray the charges which will come in course of payment during the year ending 31st day of March 1951 in respect of 'Sales Tax, Stamps and Registration'."

The motion was adopted.

Demand No. 5—7. Supervision of Mines and Other Charges.

Sri H. C. DASAPPA (Minister for Finance and Industries).—Sir, on the recommendation of His Highness the Maharaja, I beg to move :—

"That a sum not exceeding Rs. 3,59,000 be granted to the Government to defray the charges which will come in course of payment during the year ending 31st day of March 1951, in respect of 'Supervision of Mines and Other Charges'."

(None of the cut motions under the head was moved).

Mr. SPEAKER.—The question is.—

"That a sum not exceeding Rs. 3,59,000 be granted to the Government to defray the charges which will come in course of payment during the year ending 31st day of March 1951, in respect of 'Supervision of Mines and Other Charges'."

The motion was adopted.

Demand No. 6—9. Interest on Other Obligations.

Sri H. C. DASAPPA (Minister for Finance and Industries).—Sir, on the recommendation of His Highness the Maharaja, I beg to move :—

"That a sum not exceeding Rs. 32,15,000 be granted to the Government to defray the charges which will come in course of payment during the year ending 31st day of March 1951, in respect of 'Interest on Other Obligations'."

(None of the cut motions under the head was moved).

Mr. SPEAKER.—The question is.—

"That a sum not exceeding Rs. 32,15,000 be granted to the Government to defray the charges which will come in course of payment during the year ending 31st day of March 1951, in respect of 'Interest on Other Obligations'."

The motion was adopted.

ಅಧ್ಯಕ್ಷರು.—ಸಭೆ ನಾಳೆ ಎಂಟೂವರೆ ಗಂಟೆಗೆ ಸೇರುತ್ತದೆ. ಖೋತಾ ಸೂಚನೆಗಳು Courts of Law ವರೆಗೆ ಹೋಗಬಹುದು. ದಯೆಯಿಟ್ಟು ಯಾವ ಯಾವ ಖೋತಾ ಸೂಚನೆಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬುದನ್ನು ತಿಳಿಸಿದರೆ ಅನುಕೂಲವಾಗುತ್ತದೆ.

The Assembly adjourned at Five Minutes past One of the Clock to meet again at Thirty Minutes past Eight of the Clock (morning) on Tuesday, 28th March 1950.

WD 1429—GPB—400—5-4-50